# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 07 | ಅಕ್ಟೋಬರ್ 2024 | ಬೆಂಗಳೂರು | ₹ 10/-



## 50+ ಲಕ್ಷ

## ಕನ್ನಡಿಗರು ಬಿಜೆಪಿ ಸದಸ್ಯರಾಗಿದ್ದಾರೆ

ವಿಕಸಿತ ಭಾರತದ ಪ್ರಧಾನಿ

## ಶ್ರೀ ನರೇಂದ್ರ ಮೋದಿ

ಅವರ ಸಂಕಲ್ಪ ಸಾಕಾರಗೊಳಿಸಲು
ಬಿಜೆಪಿ ಸದಸ್ಯತ್ವ
ಪಡೆದಿರುವ ನಾಡಿನ ಸಮಸ್ತ ಜನತೆಗೆ
ಧನ್ಯವಾದಗಳು

# ಸೇವಾ ಪಾಕ್ಷಿಕ



ರಾಜ್ಯ ಕಾರ್ಯಾಲಯ, ಜಗನ್ನಾಥ ಭವನ, ಬೆಂಗಳೂರು



ಬೆಳಗಾವಿ ಗ್ರಾಮಾಂತರ



ಚಾಮರಾಜನಗರ



ಚಿಕ್ಕಮಗಳೂರು



ದಕ್ಷಿಣ ಕನ್ನಡ



ಹಾಸನ



ಹಾವೇರಿ



ಮಂಡ್ಯ

# ಜೋಡಣೆ, ಸಂಘಟನೆ

ಸಂಘಟನೆ ಎಂದರೆ ಅದು ಬೆಳೆಯುತ್ತಲೇ ಇರಬೇಕು. ಇದು ಸಾಧ್ಯವಾಗುವುದು ಸಂಘಟನೆಯ ಸದಸ್ಯರ ಸಂಖ್ಯೆ ಹೆಚ್ಚಾಗುತ್ತಾ ಹೋದಾಗ ಮಾತ್ರ. ಇದು ಎಲ್ಲಾ ಸಂಘಟನೆಗಳಿಗೂ ಅನ್ವಯವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಖ್ಯೆಗೆ ಇರುವ ಪ್ರಾಧಾನ್ಯತೆಯ ಅರಿವಿದ್ದರೂ, ಅತ್ಯಂತ ಶ್ರೇಷ್ಠ ವೈಚಾರಿಕತೆಯನ್ನು ತನ್ನೊಳಗೆ ಅಳವಡಿಸಿಕೊಂಡಿರುವ ಬಿಜೆಪಿಯು ಸಂಘಟನೆಯನ್ನು ಸಂಖ್ಯಾತ್ಮಕವಾಗಿ ಬೆಳೆಸುವುದರ ಜೊತೆಗೆ, ಗುಣಾತ್ಮಕವಾಗಿಯೂ ವಿಶಿಷ್ಟವಾಗಿ ಬೆಳೆಸುವ ಕಾರ್ಯತಂತ್ರವನ್ನು ಅಳವಡಿಸಿಕೊಂಡಿದೆ. ಬಿಜೆಪಿಯನ್ನು ಸಂಖ್ಯಾತ್ಮಕವಾಗಿ ಬೆಳೆಸಲು ಅಳವಡಿಸಿಕೊಂಡಿರುವ ಕ್ರಿಯೆ ಸದಸ್ಯತಾ ಅಭಿಯಾನ. ರಾಷ್ಟ್ರ ಮಟ್ಟದಲ್ಲಿ ಈಗಾಗಲೇ 9 ಕೋಟಿಗೂ ಹೆಚ್ಚಿನ ಸದಸ್ಯರ ನೋಂದಣಿಯಾಗಿದೆ. ರಾಜ್ಯದಲ್ಲೂ ಸಮರ್ಥ ಕಾರ್ಯಕರ್ತರ ಪಡೆಯ ಪರಿಶ್ರಮದಿಂದ ಈಗಾಗಲೇ 50 ಲಕ್ಷ ಸದಸ್ಯರ ನೋಂದಣಿಯಾಗಿದೆ. ಇನ್ನು ಇರುವ ಕೆಲವು ದಿನಗಳಲ್ಲಿ ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ನಿಗದಿತ ಗುರಿಯನ್ನು ಮುಟ್ಟುವುದರಲ್ಲಿ ಯಾವುದೇ ಸಂದೇಹವಿಲ್ಲ.

ಸಂಖ್ಯೆಯ ದೃಷ್ಟಿಯಿಂದ ನಿಗದಿತ ಗುರಿಯೆಡೆಗೆ ಸಾಗುತ್ತಿರುವ ಬಿಜೆಪಿಗೆ ಗುಣಾತ್ಮಕವಾಗಿ ಬಿಜೆಪಿಯನ್ನು ಎಂದಿನಂತೆ ವಿಶಿಷ್ಟವಾಗಿ ಉಳಿಸಿಕೊಳ್ಳುವುದೂ ಹಾಗೂ ಬೆಳೆಸುವುದೂ ಸವಾಲಿನ ಸಂಗತಿಯೇ ಸರಿ. ಆದರೆ ಬದ್ಧತೆಯುಳ್ಳ ಕಾರ್ಯಕರ್ತರ ಪಡೆ ಈ ಕೆಲಸವನ್ನೂ ಸಮರ್ಥವಾಗಿ ನಿಭಾಯಿಸುವುದರಲ್ಲಿ ಅನುಮಾನವಿಲ್ಲ. ಪ್ರತೀ ಬೂತ್‌ನಲ್ಲೂ ಅತ್ಯಂತ ಪ್ರಭಾವಿಗಳನ್ನು ಬಿಜೆಪಿ ಸದಸ್ಯರನ್ನಾಗಿಸುವ ಬಗ್ಗೆ ಪ್ರತೀ ಕಾರ್ಯಕರ್ತನೂ ಕ್ರಿಯಾಶೀಲನಾಗಿದ್ದಾನೆ. ನಮ್ಮೂರಿನ ಶ್ರೇಷ್ಠ ಕ್ರೀಡಾಪಟು, ನಮ್ಮೂರಿನ ಪ್ರಭಾವಿ ಜಾತಿ ಮುಖಂಡ, ನಮ್ಮೂರಿನ ಶ್ರೇಷ್ಠ ಸಾಮಾಜಿಕ ಕಾರ್ಯಕರ್ತ, ನಮ್ಮೂರಿನ ಸ್ವಸಹಾಯ ಸಂಘಗಳ ಸಂಘಟಕಿ, ನಮ್ಮೂರಿನ ನಿವೃತ್ತ ಯೋಧ ಅಥವಾ ನಿವೃತ್ತ ಅಧಿಕಾರಿ ಹೀಗೆ ಇಂತಹವರುಗಳೆರನ್ನೂ ಬಿಜೆಪಿ ತೆಕ್ಕೆಯೊಳಗೆ ಸೇರಿಸಿಕೊಂಡರೆ ಸಂಘಟನೆ ಗುಣಾತ್ಮಕವಾಗಿಯೂ ಶ್ರೇಷ್ಟವಾಗುವುದರಲ್ಲಿ ಸಂದೇಹವಿಲ್ಲ.

ಸದಸ್ಯರನ್ನಾಗಿಸಿಕೊಂಡ ಪ್ರತಿಯೊಬ್ಬರನ್ನೂ ಬಿಜೆಪಿಯ ಕಾರ್ಯಕರ್ತನ್ನಾಗಿ ಮಾಡುವುದೂ ನಮ್ಮೆಲ್ಲರ ಹೊಣೆಗಾರಿಕೆಯೇ. ಹೊಸದಾಗಿ ಬಂದವರಲ್ಲಿ ನಮ್ಮ ವೈಚಾರಿಕತೆಯನ್ನು ಬಿತ್ತುವುದು, ಬೆಳೆಸುವುದು, ನಮ್ಮ ಇತಿಹಾಸ ಪರಂಪರೆ, ನಮ್ಮ ಹಿರಿಯರ ತ್ಯಾಗ ಬಲಿದಾನ, ನಮ್ಮ ಹೋರಾಟಗಳನ್ನು ಅವನಿಗೆ ಮನವರಿಕೆ ಮಾಡಿಕೊಡುವ ಕಾರ್ಯವೂ ಆಗಲೇ ಬೇಕು. ನಮ್ಮ ತೆಕ್ಕೆಗೆ ಬಂದ ಕಾರ್ಯಕರ್ತರ ಸಾಮರ್ಥ್ಯಕ್ಕನುಗುಣವಾಗಿ ಜವಾಬ್ದಾರಿಗಳನ್ನು ಕೊಡುವುದು ಸಶಕ್ತ ಸಂಘಟನೆಯನ್ನು ಕಟ್ಟುವ ಒಂದು ಭಾಗ. ಶ್ರೀ ರಾಮ ರಾವಣನ ಮೇಲೆ ಯುದ್ಧಕ್ಕೆ ಹೊರಟಾಗ ಕಪಿ ಸೈನ್ಯವೆಂದು ಕಡೆಗಣಿಸಲಿಲ್ಲ. ಆ ಕಪಿಗಳಲ್ಲಿನ ಸಾಮರ್ಥ್ಯವನ್ನು ಹೆಕ್ಕಿ ತೆಗೆದ. ಹನುಮಂತನಿಗೆ ಇರುವ ಸಾಮರ್ಥ್ಯವನ್ನು ಅವನಿಗೇ ಮನಗಾಣಿಸಿ ಸಮುದ್ರಲಂಘನ ಮಾಡಿಸಿದ, ಅದೇ ಹನುಮಂತನಿಂದ ಲಂಕಾ ದಹನವೂ ಆಯಿತು. ವಾನರ ಸೈನ್ಯದಿಂದಲೇ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದ್ದು ತನ್ನ ಜೊತೆಯಿರುವ ಕಪಿಗಳಲ್ಲಿರುವ ದೈತ್ಯ ಶಕ್ತಿ ಮತ್ತು ಸ್ವಾಮಿನಿಷ್ಠೆಯನ್ನು ಗುರ್ತಿಸಿದ ಶ್ರೀ ರಾಮನೆಂಬ ದೂರದೃಷ್ಟಿಯುಳ್ಳ ನಾಯಕನಿಂದಲೇ. ಸಂಪರ್ಕಕ್ಕೆ ಬಂದ ಕಾರ್ಯಕರ್ತನ ಸಾಮರ್ಥ್ಯವನ್ನು ಅರಿಯುವುದು, ಅವನ ಸಾಮರ್ಥ್ಯಕ್ಕೆ ತಕ್ಕ ಜವಾಬ್ದಾರಿ ನೀಡುವುದು ನಾಯಕತ್ವದ ಮಹತ್ತರ ಜವಾಬ್ದಾರಿ.

## ಸಂಪಾದಕೀಯ

ಬಿಜೆಪಿಯ ರಾಜಕಾರಣ ಅಧಿಕಾರದ ಗದ್ದುಗೆ ಹಿಡಿಯವುದಕ್ಕಾಗಿ ಅಲ್ಲ, ರಾಜಕಾರಣದ ಮೂಲಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದೇ ಬಿಜೆಪಿಯ ಆದ್ಯತೆ. ಬಿಜೆಪಿಯ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ಈ ಅಂಶವನ್ನು ಮನವರಿಕೆ ಮಾಡಿಕೊಟ್ಟು ಬಿಜೆಪಿಯ ವಿಚಾರವನ್ನು ಪ್ರತೀ ಕಾರ್ಯಕರ್ತನೂ ಆವಾಹಿಸಿಕೊಳ್ಳುವಷ್ಟು ಶಕ್ತಿ, ಬುದ್ಧಿಯನ್ನು ತುಂಬಿ ಬಿಟ್ಟರೆ ಸಂಘಟನೆಯ ಉದ್ದೇಶದ ಸಫಲತೆ ಸುಲಲಿತವಾಗುತ್ತದೆ. ಇದಕ್ಕಾಗಿಯೇ ಸಂಘಟನೆಯ ಹಿರಿಯರು, ಪ್ರತಿಯೊಬ್ಬ ಕಾರ್ಯಕರ್ತನಿಗೂ ಅವರ ಸ್ತರಕ್ಕನುಗುಣವಾಗಿ ಪ್ರಶಿಕ್ಷಣ ವರ್ಗ, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿದ್ದರು. ಈ ರೀತಿಯ ಪ್ರಶಿಕ್ಷಣ ವರ್ಗ ಎಂಬ ಚಿಂತನೆ ಇನ್ನಾವುದೇ ರಾಜಕೀಯ ಪಕ್ಷದಲ್ಲೂ ಇಲ್ಲದಿರುವುದೇ ಬಿಜೆಪಿಯ ವಿಶೇಷತೆ. ಸದಸ್ಯತಾ ಅಭಿಯಾನದ ನಂತರ ಈ ಚಟುವಟಿಕೆಗಳಿಗೆ ವೇಗ ಸಿಗಬಹುದು. ಪ್ರಸ್ತುತ ನಮ್ಮ ಗುರಿ ಸದಸ್ಯತಾ ಅಭಿಯಾನದ ಯಶಸ್ಸಿನೆಡೆಗೆ ಸಾಗುವುದು. ಕಾಂಗ್ರೆಸ್ ವಿರುದ್ಧ 'ಮೈಸೂರು ಚಲೋ' ಪಾದಯಾತ್ರೆ ಹಾಗೂ ಇನ್ನಿತರ ನಿರಂತರ ಹೋರಾಟಗಳನ್ನು ಯೋಜಿತವಾಗಿ ಸಂಘಟಿಸುತ್ತಿರುವ ರಾಜ್ಯಾಧ್ಯಕ್ಷರ ನೇತೃತ್ವದ ಕಾರ್ಯಕರ್ತರ ತಂಡಕ್ಕೆ ಸದಸ್ಯತಾ ಅಭಿಯಾನವೂ ತಮ್ಮ ಸಾಮರ್ಥ್ಯವನ್ನು ಸಾಬೀತುಗೊಳಿಸಲು ಮತ್ತೊಂದು ಅವಕಾಶ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253

**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961

## ಸುಭಾಷಿತ



**ಚಿಂತನೆಯ ಮನಸ್ಸು
ನಿಮ್ಮ ಮೂಲ ಆಸ್ತಿಯಾಗಿರಬೇಕು.
ಆಗ ಜೀವನದಲ್ಲಿ ಏಳು - ಬೀಳುಗಳು
ಬಂದರೂ ದೃಢವಾಗಿ ನಿಲ್ಲಬಹುದು**

**- ಡಾ. ಎ.ಪಿ.ಜೆ. ಅಬ್ದುಲ್ ಕಲಾಂ**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ




06

**ಬಿಜೆಪಿಯ ಸದಸ್ಯತ್ವದೊಂದಿಗೆ ವಿಶ್ವವಂದ್ಯ ಭಾರತ ನಿರ್ಮಾಣದಲ್ಲಿ ಭಾಗಿ...**




10

**ಸದಸ್ಯತಾ ಅಭಿಯಾನ 2024- ಪ್ರಧಾನಿ ಶ್ರೀ ಮೋದಿ ಭಾಷಣದ ಕನ್ನಡ ಅಕ್ಷರ ರೂಪ**

- **ದೀವಟಿಗೆ :** ಚಾಣಕ್ಯ, ಶಾಸ್ತ್ರಿ ಮತ್ತು ಮೋದಿ ........ 05
- ಬಿಜೆಪಿ ಸದಸ್ಯತಾ ಅಭಿಯಾನ ಪ್ರಧಾನಿ ಮೋದಿ ಭಾಷಣ ........10
- ಮಹತ್ವಾಕಾಂಕ್ಷಿ ಭಾರತದ ಸುವರ್ಣ ಪರ್ವ ........12
- ಅಂದಿನ ಕಾಂಗ್ರೆಸ್ ಮನೆಯ ಗಣಪನನ್ನು ಬೀದಿಗೆ ತಂದಿತು - ಇಂದಿನ ಕಾಂಗ್ರೆಸ್ ಬೀದಿಯ ಗಣಪನನ್ನು ಜೈಲಿಗಟ್ಟಿತು ........16
- ಮೋದಿ ಅಮೆರಿಕಾ ಪ್ರವಾಸ ........20
- ಬಾಂಗ್ಲಾನಡೆ ಹಿಂದೂಗಳಿಗೆ ಎಚ್ಚರಿಕೆ ಪಾಠ ........22
- ಅಸಂಘಟಿತ ಕಾರ್ಮಿಕ ಪ್ರಕೋಷ್ಠ - ರಾಜ್ಯ ಕಾರ್ಯಕಾರಿಣಿ ಸಭೆ ........23
- ಸ್ವಚ್ಛತೆಗೂ ಜನಾಂದೋಲನ ರೂಪ ಕೊಟ್ಟ ನಮೋ........25
- ಛಲವಾದಿ ನಾರಾಯಣ ಸ್ವಾಮಿ ಅವರ ಹೋರಾಟವನ್ನು ಬಿಜೆಪಿ ಗುರುತಿಸಿದೆ ......27
- ಮೋದಿಜೀ ಅವರ ಜೀವನ ಪ್ರಯಾಣ ಅದ್ಭುತ........30
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ:** ಶ್ರೀ ಸೋಮಶೇಖರ ಭಟ್........31
- **ಮನ್ ಕಿ ಬಾತ್**- ದಶಕದ ಸಂಭ್ರಮ........34



ದೀಪಸ್ತಂಭ

# ಚಾಣಕ್ಯ, ಶಾಸ್ತ್ರಿ ಮತ್ತು ಮೋದಿ

## ಪ್ರೇರಣೆ ಹಾಗೂ ಅನುಕರಣೀಯ ನಾಯಕತ್ವ

ಹರೀಶ್ ಆತ್ರೇಯ
ಕಾರ್ಯಕರ್ತರು

**ಭಾ**ರತದ ಈ ಮೂರೂ ನಾಯಕರ ಆಡಳಿತ ವಿವಿಧ ಕಾಲಮಾನದ್ದಾದರೂ ಅವರ ನೇತೃತ್ವ, ಕಾರ್ಯತಂತ್ರ, ಆಡಳಿತಾತ್ಮಕ ನಿಲುವುಗಳ ಸಾಮ್ಯತೆಯಿರುವುದು ಅಚ್ಚರಿಯ ಸಂಗತಿ.

ಚಾಣಕ್ಯನು ಕ್ರಿಸ್ತಪೂರ್ವ 4ನೇ ಶತಮಾನದ ಚಕ್ರವರ್ತಿ ಚಂದ್ರಗುಪ್ತ ಮೌರ್ಯನ ಮುಖ್ಯ ಸಲಹೆಗಾರ. ಆತನ ಗ್ರಂಥ 'ಅರ್ಥಶಾಸ್ತ್ರ'ವು ರಾಜ್ಯಕಾರ್ಯ, ಆರ್ಥಿಕ ನೀತಿ ಮತ್ತು ಮಿಲಿಟರಿ ಕಾರ್ಯತಂತ್ರದ ಮಹತ್ವದ ಕೃತಿಗಳಲ್ಲಿ ಒಂದು. ಆತನ ವಿಚಾರಗಳು ವಾಸ್ತವಿಕತೆ, ನೈಜ ರಾಜಕೀಯ ಮತ್ತು ಮಾನವ ಸ್ವಭಾವದ ಸೂಕ್ಷ್ಮವಾದ ತಿಳುವಳಿಕೆಯನ್ನು ಪ್ರಖರವಾಗಿ ತೋರಿಸುತ್ತವೆ. ಆರ್ಥಿಕ ನೀತಿ ಮತ್ತು ರಾಜ್ಯ ನಿರ್ವಹಣೆಯ ಕಾರ್ಯವು ಕಾಲೇತಿಹಾಸವನ್ನು ಮೀರಿದೆ ಮತ್ತು ಜಾಗತಿಕವಾಗಿ ರಾಜಕೀಯ ಮತ್ತು ಆರ್ಥಿಕ ಚರ್ಚೆಗಳಲ್ಲಿ ಪ್ರಸ್ತುತದಲ್ಲೂ ಉಲ್ಲೇಖಿತವಾಗುತ್ತಲೇ ಇರುತ್ತದೆ.

ಮತ್ತೋರ್ವ ದಾರ್ಶನಿಕರಾದ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ತಮ್ಮ ನಮ್ರತೆ ಮತ್ತು ಸರಳತೆಗೆ ಹೆಸರು ವಾಸಿಯಾಗಿದ್ದವರು. ಭಾರತದ ಎರಡನೇ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ ಇವರ ಅಧಿಕಾರದ ಅವಧಿಯು ಸಂಕ್ಷಿಪ್ತವಾಗಿದ್ದರೂ, ಆಹಾರದ ಕೊರತೆ ಮತ್ತು 1965 ರ ಇಂಡೋ-ಪಾಕ್ ಯುದ್ಧ ಸೇರಿದಂತೆ ಸ್ವಾತಂತ್ರ್ಯದ ನಂತರ ಭಾರತದ ಮುಂದಿನ ಪ್ರಮುಖ ಸವಾಲುಗಳನ್ನು ಎದುರಿಸಿದ ರೀತಿ ಮತ್ತು ಸಫಲತೆಯಲ್ಲಿ ಚಾಣಕ್ಯನ ಪ್ರಭಾವವು ಅಚ್ಚಳಿಯದಂತಿದೆ. ಶಾಸ್ತ್ರಿಯವರ ನಾಯಕತ್ವವು ಗಾಂಧಿವಾದಿ ಮೌಲ್ಯಗಳನ್ನೊಳಗೊಂಡಿದೆ. ಭಾರತದ ರಕ್ಷಣೆ ಮತ್ತು ಕೃಷಿ ಸ್ವಾವಲಂಬನೆಯ ಸಾರವನ್ನು ಹಿಡಿದಿಟ್ಟುಕೊಂಡ ಅವರ ಪ್ರಸಿದ್ಧ ಘೋಷಣೆಯಾದ 'ಜೈ ಜವಾನ್, ಜೈ ಕಿಸಾನ್'ಗಾಗಿ ಅವರು ಭಾರತದ ಜನಮಾನಸದಲ್ಲಿ ಇಂದಿಗೂ ಜೀವಂತವಾಗಿದ್ದಾರೆ. ಹಿಂದೆ ಶಾಸ್ತ್ರೀರವರು ಕರೆ ನೀಡಿದ್ದ ಸೋಮವಾರದ ಒಂದು ದಿನದ ಉಪವಾಸದ ಕರೆಯಲ್ಲಿ ಚಾಣಕ್ಯನ ವಾಸ್ತವಿಕತೆಯ ರಾಜಕೀಯ ಮತ್ತು ಮಾನವ ಸ್ವಭಾವದ ಸೂಕ್ಷ್ಮವಾದಗಳ ಪ್ರತಿರೂಪವೇ. ಶಾಸ್ತ್ರಿಯವರ ನಾಯಕತ್ವವು ಶಾಂತ ನಿರ್ಣಯ ಮತ್ತು ಸಮಗ್ರತೆಯಿಂದ ನಿರೂಪಿಸಲ್ಪಟ್ಟಿದೆ. ಶಾಸ್ತ್ರಿಯವರ ನಾಯಕತ್ವವು ಭಾರತದ ಕೃಷಿ ನೀತಿಯಲ್ಲಿ ಅಳಿಸಲಾಗದ ಛಾಪು ಮೂಡಿಸಿ ಹಸಿರು ಕ್ರಾಂತಿಯ ಮೂಲಕ ಆಹಾರ ಉತ್ಪಾದನೆಯಲ್ಲಿ ಭಾರತದ ಸ್ವಾವಲಂಬನೆಗೆ ಅಡಿಪಾಯವನ್ನು ಹಾಕಿತು. ಇದು ಚಾಣಕ್ಯನ ಕಾರ್ಯತಂತ್ರದ ಮುಂದುವರೆದ ಭಾಗವಾಗಿದೆ.

ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಭಾರತದ ರಾಜಕೀಯದಲ್ಲಿ ವಿಶಿಷ್ಟವಾದ ಸ್ಥಾನಮಾನವನ್ನು ಹೊಂದಿದ್ದಾರೆ. ಅವರ ಪ್ರಾಯೋಗಿಕ ವಿಧಾನ ಮತ್ತು ಮಹತ್ವಾಕಾಂಕ್ಷೆಯ ಅಭಿವೃದ್ಧಿಗಳ ಕಾರ್ಯಸೂಚಿಗೆ ಅವರ ನಾಯಕತ್ವವು ಆಧುನಿಕತೆಯನ್ನು ಸಂಪ್ರದಾಯದೊಂದಿಗೆ ಹೊಂದಿಸಿಕೊಂಡಿದೆ. ಆರ್ಥಿಕ ಸುಧಾರಣೆಗಳು, ಡಿಜಿಟಲೀಕರಣ, ಮೂಲಸೌಕರ್ಯ ಅಭಿವೃದ್ಧಿ ಮತ್ತು ವಿದೇಶಾಂಗ ನೀತಿಯ ಮರುರೂಪಿಸುವಿಕೆಯು ಭಾರತವನ್ನು ಜಾಗತಿಕ ವೇದಿಕೆಯಲ್ಲಿರಿಸಿದೆ. 'ಮೇಕ್ ಇನ್ ಇಂಡಿಯಾ', 'ಡಿಜಿಟಲ್ ಇಂಡಿಯಾ', ಮತ್ತು 'ಸ್ವಚ್ಛ ಭಾರತ ಅಭಿಯಾನ'ದಂತಹ ಉಪಕ್ರಮಗಳು ಭಾರತವನ್ನು ಸ್ವಾವಲಂಬಿ, ಸ್ವಚ್ಛ ಮತ್ತು ತಾಂತ್ರಿಕವಾಗಿ ಮುಂದುವರಿದ ರಾಷ್ಟ್ರವಾಗಿ ಪರಿವರ್ತಿಸುವ ಅವರ ದೂರದೃಷ್ಟಿತ್ವವನ್ನು ಬಿಂಬಿಸುತ್ತದೆ. ಆರ್ಥಿಕತೆ ಮತ್ತು ಆಡಳಿತ ಸುಧಾರಣೆಯಲ್ಲಿ ಪ್ರಜೆಗಳ ಪಾತ್ರಕ್ಕೆ ಮಹತ್ವ ನೀಡಿದ್ದ ಶಾಸ್ತ್ರೀಜಿಯವರಂತೆ ಮೋದಿಯವರೂ ಸಬ್‌ಕೆ ಸಾಥ್, ಸಬ್ ಕಾ ವಿಶ್ವಾಸ್ ಚಿಂತನೆಯನ್ನು ತಮ್ಮ ಆಡಳಿತದಲ್ಲಿ ರೂಢಿಸಿಕೊಂಡರು. ಈ ರೀತಿಯ ನಿಲುವುಗಳಿಗೆ ಜನರು ತಮ್ಮ ಒಲವನ್ನು ತೋರಿಸುತ್ತಾರೆ ಎನ್ನುವುದಕ್ಕೆ ಕರೋನ ಸಮಯದಲ್ಲಿನ ಅವರ ಘಂಟಾನಾದ, ದೀಪ ಬೆಳಗುವಿಕೆಯಂತಹ ಕಾರ್ಯಗಳು ಸಾಕ್ಷೀಭೂತವಾಗಿವೆ.

ನರೇಂದ್ರ ಮೋದಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಆಧುನಿಕ ಪ್ರಜಾಪ್ರಭುತ್ವ ನಾಯಕತ್ವದ ಮೇಲೆ ಕೇಂದ್ರೀಕರಿಸಿದರೆ, ಚಾಣಕ್ಯ ರಾಜಪ್ರಭುತ್ವದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದರು. ಇವರೆಲ್ಲರ ಕಾರ್ಯತಂತ್ರಗಳು ಅಧಿಕಾರವನ್ನು ಬಲಪಡಿಸುವ ಮತ್ತು ಸಾಮ್ರಾಜ್ಯದ ಭದ್ರತೆ ಮತ್ತು ಸಮೃದ್ಧಿಯನ್ನು ಖಾತ್ರಿಪಡಿಸುವ ಗುರಿಯನ್ನು ಬಿಂಬಿಸುತ್ತವೆ. ರಾಜ್ಯದ ಉಳಿವು ಅಪಾಯದಲ್ಲಿರುವಾಗ ರಾಜತಾಂತ್ರಿಕತೆ, ಬೇಹುಗಾರಿಕೆ ಮತ್ತು ಯುದ್ಧದ ಮಹತ್ವವನ್ನು ಒತ್ತಿಹೇಳುವ ಅವರ ಆಡಳಿತದ ವಿಧಾನವು ನಿರ್ದಯವಾಗಿತ್ತು. ಚಾಣಕ್ಯ, ಶಾಸ್ತ್ರಿ ಹಾಗೂ ಮೋದಿಯವರ ಕಾಲಘಟ್ಟ ಬೇರೆಯಾಗಿದ್ದರೂ ಅವರ ನಾಯಕತ್ವದ ಶೈಲಿಗಳು ಮತ್ತು ಆಡಳಿತಾತ್ಮಕ ರೀತಿ ಮತ್ತು ನೀತಿ ಮಾತ್ರ ಒಂದೇ ರೀತಿಯದಾಗಿವೆ.

ಆರ್ಥಿಕ ಬೆಳವಣಿಗೆ ಮತ್ತು ಭಾರತದ ಜಾಗತಿಕ ಸ್ಥಾನಮಾನದ ಮೇಲೆ ಮೋದಿಯವರ ಗಮನವು ಕೃಷಿ ಮತ್ತು ರಕ್ಷಣಾ ವಲಯದಲ್ಲಿ ಶಾಸ್ತ್ರೀಯವರ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ. ನಿಖರವಾದ ಯೋಜನೆಯ ಮೂಲಕ ಸ್ಥಿರ ಮತ್ತು ಸಮೃದ್ಧ ಸಾಮ್ರಾಜ್ಯವನ್ನು ಸ್ಥಾಪಿಸುವುದು ಚಾಣಕ್ಯನ ದೃಷ್ಟಿಯನ್ನು ಬಿಂಬಿಸುತ್ತದೆ.

ನೈತಿಕ ವಿಧಾನದ ಕಾರ್ಯ ಯೋಜನೆಯನ್ನು ಅಳವಡಿಸಿಕೊಂಡಂತಹ ಚಾಣಕ್ಯ, ಶಾಸ್ತ್ರೀಜಿ ಮತ್ತು ಮೋದಿ ರವರ ನಾಯಕತ್ವ ನಿಜಕ್ಕೂ ಪ್ರೇರಣೆ ಹಾಗೂ ಅನುಕರಣೀಯ.

# ಬಿಜೆಪಿಯ ಸದಸ್ಯತ್ವದೊಂದಿಗೆ




## ವಿಶ್ವವಂದ್ಯ ಭಾರತ ನಿರ್ಮಾಣದಲ್ಲಿ ಭಾಗಿ...



ರತನ್ ರಮೇಶ್ ಪೂಜಾರಿ
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ

**ಸದಾ ದೇಶದ ಒಳಿತು ಹಾಗೂ ಅಭಿವೃದ್ಧಿಗಾಗಿ ಚಿಂತಿಸುವ ರಾಜಕೀಯ ಪಕ್ಷವಿದ್ದರೆ ಅದು ಭಾರತೀಯ ಜನತಾ ಪಕ್ಷ. ಇಂದು ವಿಶ್ವವೇ ಕೊಂಡಾಡುವ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಂತಹ ನಾಯಕತ್ವವನ್ನು ಈ ಪಕ್ಷ ಹೊಂದಿದೆ. ಇಂತಹ ಪಕ್ಷದ ಸದಸ್ಯರಾಗುವುದೇ ಒಂದು ಭಾಗ್ಯ. ಆ ಭಾಗ್ಯದ ಬಾಗಿಲು ಸದಸ್ಯತಾ ಅಭಿಯಾನದ ಮೂಲಕ ತೆರೆದಿದ್ದು, ಭಾರತೀಯ ಜನತಾ ಪಕ್ಷ ಸದಸ್ಯತ್ವದ ದೃಷ್ಟಿಯಿಂದ ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷ ಎಂಬುದನ್ನು ನಿರೂಪಿಸಿ ಮತ್ತೊಮ್ಮೆ ವಿಶ್ವಕ್ಕೆ ಸಾರಿ ಸಾರಿ ಹೇಳಲಿದೆ.**

ಪ್ರಪಂಚದ ಅತಿ ದೊಡ್ಡ ರಾಜಕೀಯ ಪಕ್ಷದ ಸದಸ್ಯತಾ ಅಭಿಯಾನಭಾರತೀಯ ಜನತಾ ಪಕ್ಷ ಕೇಡರ್ ಆಧಾರಿತ ಪಕ್ಷ. ಭಾರತೀಯ ಜನತಾ ಪಕ್ಷ ಕೇವಲ ಚುನಾವಣೆಗೆ ಮಾತ್ರ ಸೀಮಿತವಾಗಿ ಚಟುವಟಿಕೆಗಳನ್ನು ಮಾಡದೆ 24X7 ನಿರಂತರ ಯಾವುದಾದರೊಂದು ಸಂಘಟನಾ ಚಟುವಟಿಕೆಯಲ್ಲಿ ನಿರತವಾಗಿರುತ್ತದೆ. ಈ ಕಾರ್ಯಗಳಿಗೆ ಹೆಗಲು ಕೊಡುವ ಲಕ್ಷಾಂತರ ದೇವದುರ್ಲಭ ಕಾರ್ಯಕರ್ತರೇ ಪಕ್ಷದ ಬೆನ್ನೆಲುಬು. ಹಾಗೂ ದೇಶ ಮೊದಲು ಎಂಬ ಪಕ್ಷದ ಸಿದ್ಧಾಂತವನ್ನು ಒಪ್ಪಿ ಭಾರತೀಯ ಜನತಾ ಪಕ್ಷವನ್ನು ಬೆಂಬಲಿಸುವ ಅನೇಕ ಜನರು ಈ ದೇಶದಲ್ಲಿದ್ದಾರೆ. ಈ ಎಲ್ಲರ ಬೆಂಬಲದಿಂದಾಗಿಯೇ ಭಾರತೀಯ ಜನತಾ ಪಕ್ಷ ಸದಸ್ಯತ್ವದ ದೃಷ್ಟಿಯಿಂದ ಪ್ರಪಂಚದಲ್ಲೇ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ.

ಪಕ್ಷದ ಬೈಲಾ ಪ್ರಕಾರ ಪ್ರತಿ ಆರು ವರ್ಷಕ್ಕೊಮ್ಮೆ ಸದಸ್ಯತ್ವ ಹಾಗೂ ಸಕ್ರಿಯ ಸದಸ್ಯತ್ವವನ್ನು ನವೀಕರಿಸಿಕೊಳ್ಳಬೇಕು. ಈ ಹಿಂದೆ 2014 ಹಾಗೂ 2019ರಲ್ಲಿ ಸದಸ್ಯತಾ ಅಭಿಯಾನ ನಡೆದು ಬಹು ಯಶಸ್ವಿಯಾಗಿ ಬಿಜೆಪಿ ವಿಶ್ವದಲ್ಲಿ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ರೂಪಗೊಂಡಿತು. ಈಗ ಮತ್ತೊಮ್ಮೆ ಸದಸ್ಯತ್ವವನ್ನು ನವೀಕರಿಸಿಕೊಳ್ಳಬೇಕಾದ ಸಮಯವಿದು. ಹೀಗೆ ನವೀಕರಿಸಿಕೊಳ್ಳಲು ಪಕ್ಷದ ಕಾರ್ಯಕರ್ತರು ಹಾಗೂ ಮತದಾರರಿಗೆ ಅವಕಾಶ ನೀಡಲು ಭಾರತೀಯ ಜನತಾ ಪಕ್ಷ ನಡೆಸುತ್ತಿರುವ ಅಭಿಯಾನವೇ ಸದಸ್ಯತಾ ಅಭಿಯಾನ.




ಆಗಸ್ಟ್ 17ರಂದು ದೆಹಲಿಯಲ್ಲಿ ಸದಸ್ಯತ ಅಭಿಯಾನದ ರಾಷ್ಟ್ರೀಯ ಮಟ್ಟದ ಪೂರ್ವಭಾವಿ ಸಭೆಯು ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಶ್ರೀ ಅಮಿತ್ ಶಾ ಹಾಗೂ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ್ ರವರ ನೇತೃತ್ವದಲ್ಲಿ ನಡೆಯಿತು. ಸದಸ್ಯತ್ವ ಅಭಿಯಾನದ ರಾಜ್ಯ ಸಂಚಾಲಕರಾದ ಶ್ರೀ ನಂದೀಶ್ ರೆಡ್ಡಿ, ಸಹ ಸಂಚಾಲಕರಾದ ಶ್ರೀ ಪಿ.ಸಿ ಮೋಹನ್ ಹಾಗೂ ಸದಸ್ಯರಾದ ಶ್ರೀ ದೊಡ್ಡನಗೌಡ ಪಾಟೀಲ್, ಶ್ರೀ ಮಹೇಶ್ ತೆಂಗಿನಕಾಯಿ, ಶ್ರೀ ಪ್ರತಾಪ್ ಸಿಂಹ

## ಗುರಿಯ ನಿರ್ಧಾರ ಹೇಗೆ?

**ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಮತದಾನ ಆಗಿರುವುದರ 40 ಶೇಕಡದಷ್ಟು ಅಥವಾ ವಿಧಾನಸಭಾ ಚುನಾವಣೆಯಲ್ಲಿ ಆಯಾ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಮತ ಬಿಜೆಪಿ ಪಡೆದಿದೆ ಅದರ ಶೇಕಡ 75ರಷ್ಟು, ಇವೆರಡರಲ್ಲಿ ಯಾವುದು ಹೆಚ್ಚಿದೆಯೋ ಆ ಸಂಖ್ಯೆಯ ಸದಸ್ಯತ್ವವನ್ನು ಮಾಡಬೇಕು ಎಂಬ ಗುರಿಯನ್ನು ನಿರ್ಧರಿಸಿ ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಲೆಕ್ಕಾಚಾರ ಮಾಡಿ ಗುರಿಯನ್ನು ನೀಡಲಾಗಿದೆ.**



ನಾಯಕ್, ಶ್ರೀ ಕೆ.ಎಸ್ ನವೀನ್ ರವರನ್ನು ಒಳಗೊಂಡ ಆರು ಜನರ ತಂಡ ಭಾಗವಹಿಸಿತು. ಕೇಂದ್ರದಲ್ಲಿ ಶ್ರೀ ವಿನೋದ್ ತಾವ್ಡೆಯವರ ನೇತೃತ್ವದ ಸದಸ್ಯತ್ವ ಅಭಿಯಾನದ ತಂಡವಿದೆ. ಸೆಪ್ಟೆಂಬರ್ 2 ರಂದು ಮೊದಲ ರಾಜ್ಯ ಮಟ್ಟದ ಸಭೆ ಅರಮನೆ ಮೈದಾನದಲ್ಲಿ ನಡೆಯಿತು. ನಂತರ ಜಿಲ್ಲಾವಾರು ತಂಡಗಳ ರಚನೆ ಮಾಡಲಾಯಿತು. ಸೆಪ್ಟೆಂಬರ್ 2 ರಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ರಾಷ್ಟ್ರಮಟ್ಟದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು. ಅಭಿಯಾನ ಚಾಲನೆಯ ಎರಡೇ ನಿಮಿಷಕ್ಕೆ ದೇಶಾದ್ಯಂತ ಹದಿನಾಲ್ಕು ಸಾವಿರದಷ್ಟು ಸದಸ್ಯತ್ವ ನೋಂದಣಿ ಆಗಿತ್ತು.

ಸೆಪ್ಟೆಂಬರ್ 4ರಂದು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ನೇತೃತ್ವದಲ್ಲಿ ರಾಜ್ಯದಲ್ಲಿ ಸದಸ್ಯತಾ ಅಭಿಯಾನದ ಉದ್ಘಾಟನಾ ಕಾರ್ಯಕ್ರಮ ನೆರವೇರಿತು. ಪ್ರಧಾನಮಂತ್ರಿಯವರು ಉದ್ಘಾಟನೆ ಮಾಡಿದ ಮುಂದಿನ ಎರಡು ದಿನಗಳಲ್ಲಿ ರಾಜ್ಯದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಬೇಕು ಎಂಬ ಸೂಚನೆ ಕೇಂದ್ರದಿಂದ ನೀಡಿದ್ದರು. ಆ ದಿನ ವೈದ್ಯರು, ಇಂಜಿನಿಯರ್‌ಗಳು, ಕೈಗಾರಿಕೋದ್ಯಮಿಗಳು, ಸಿನಿಮಾ ನಟರು, ವಕೀಲರು ಹೀಗೆ ಸಮಾಜದ ಮೇಲೆ ಪ್ರಭಾವ ಬೀರುವ ರಾಜಕೀಯೇತರ ಗಣ್ಯರನ್ನು ಕರೆದು ಬಹಳ ವಿಶೇಷ ರೀತಿಯಲ್ಲಿ ಉದ್ಘಾಟನೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ



ನಾಯಕರಾದ ಶ್ರೀ ಆರ್. ಅಶೋಕ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಸಹ ಉಸ್ತುವಾರಿಗಳಾದ ಶ್ರೀ ಸುಧಾಕರ ರೆಡ್ಡಿ, ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ, ಮಾಜಿ ಉಪ ಮುಖ್ಯಮಂತ್ರಿಗಳಾದ ಡಾ. ಅಶ್ವಥ್ ನಾರಾಯಣ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ. ಸುನಿಲ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ರಾಜೀವ್, ಶ್ರೀ ಜೆ. ಪ್ರೀತಮ್ ಗೌಡ, ಸದಸ್ಯತ್ವ ಅಭಿಯಾನದ ರಾಜ್ಯ ಸಂಚಾಲಕರು ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್.ಎಸ್. ನಂದೀಶ್ ರೆಡ್ಡಿ, ಸದಸ್ಯತ್ವ ಅಭಿಯಾನದ ಸಹ ಸಂಚಾಲಕರು ಹಾಗೂ ಸಂಸದರಾದ ಶ್ರೀ ಪಿ.ಸಿ ಮೋಹನ್, ಸದಸ್ಯರಾದ ಶ್ರೀ ದೊಡ್ಡನಗೌಡ ಪಾಟೀಲ್, ಶ್ರೀ ಮಹೇಶ್ ಟೆಂಗಿನಕಾಯಿ, ಶ್ರೀ ಪ್ರತಾಪ್ ಸಿಂಹ ನಾಯಕ್, ಶ್ರೀ ಕೆ.ಎಸ್. ನವೀನ್, ಪ್ರಮುಖರು, ವಿವಿಧ ಪದಾಧಿಕಾರಿಗಳು, ಕಾರ್ಯಕರ್ತರು ಭಾಗಿಯಾಗಿದ್ದರು.

ನಂತರದಲ್ಲಿ ಅಭಿಯಾನದ ಪ್ರಗತಿಯ ಕುರಿತು ಪ್ರತಿ ದಿನ ಚರ್ಚೆ, ಸಭೆಗಳು,ವರ್ಚುವಲ್ ಸಭೆಗಳು ನಡೆಯುತ್ತಿವೆ. ಪ್ರಾರಂಭಿಕವಾಗಿ ಕರ್ನಾಟಕದಲ್ಲಿ 20,000 ರಿಂದ 30,000 ಆಗುತ್ತಿದ್ದ ಸದಸ್ಯತ್ವ ಒಂದು ಹಂತದಲ್ಲಿ ಒಂದೇ ದಿನ 2,83,000 ಕೂಡ ದಾಖಲಿಸಿದೆ. ಕಳೆದ 17 ದಿನಗಳಿಂದ ಸತತವಾಗಿ ಪ್ರತಿದಿನ ಸರಾಸರಿ ಒಂದುವರೆ ಲಕ್ಷ ಸದಸ್ಯತ್ವವನ್ನು ದಾಖಲಿಸಿಕೊಂಡು ಬಂದಿದ್ದೇವೆ.

ಕರ್ನಾಟಕದಲ್ಲಿ ಒಟ್ಟು 50 ಲಕ್ಷಕ್ಕೂ ಹೆಚ್ಚು ಸದಸ್ಯತ್ವ ನೊಂದಣಿ ಅಕ್ಟೋಬರ್ 14ರವರೆಗೆ ದಾಖಲಿಸಿದೆ. ಈ ಬಾರಿಯ ಸದಸ್ಯತ್ವ ಅಭಿಯಾನ ಬಹಳ ವಿಶೇಷವಾಗಿದೆ. ಹಿಂದೆ ಮಿಸ್ಡ್‌ಕಾಲ್ ನೀಡಿ ಯಾರು ಬೇಕಾದರೂ ಸದಸ್ಯತ್ವ ಪಡೆಯುವ ಸಂಖ್ಯಾಧಾರಿತ ವ್ಯವಸ್ಥೆ ಇತ್ತು. ಆದರೆ ಈ ಬಾರಿ ಸದಸ್ಯರ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳುವ ಕೆಲಸ ಮಾಡಲಾಗಿದೆ. ಉದಾಹರಣೆಗೆ ಅಕ್ಟೋಬರ್ 13 ರಂದು 1,34,000 ಸದಸ್ಯರಾಗಿದ್ದರೆ ಅದರಲ್ಲಿ ಕಂಪ್ಲೀಟ್ ಫಾರ್ಮ್ಸ್ ತುಂಬಿರುವವರು ಸುಮಾರು 1,22,000. ಹನ್ನೊಂದರಿಂದ ಹನ್ನೆರಡು ಸಾವಿರ ಮಾತ್ರ ಪೂರ್ಣವಾಗಿರಲಿಲ್ಲ. ಅಂದರೆ ಬಹಳ ಅರ್ಥಪೂರ್ಣವಾದ ಸದಸ್ಯತ್ವವನ್ನು ಈ ಬಾರಿ ಮಾಡಲಾಗಿದೆ.

## ಅಭಿಯಾನದ ಕುರಿತು ಸಭೆಗಳು

**ರಾಜ್ಯದಲ್ಲಿ ಪೂರ್ವಭಾವಿ ಸಭೆ ಹಾಗೂ ಉದ್ಘಾಟನಾ ಕಾರ್ಯಕ್ರಮದ ನಂತರ ರಾಜ್ಯದ 39 ಸಂಘಟನಾತ್ಮಕ ಜಿಲ್ಲೆಯಲ್ಲಿಯೂ ಕೂಡ ಸದಸ್ಯತ್ವ ಅಭಿಯಾನದ ಕುರಿತು ಸಭೆ ನಡೆಸಲಾಗಿದೆ. 224 ವಿಧಾನಸಭಾ ಕ್ಷೇತ್ರಗಳಲ್ಲೂ ಈ ಕುರಿತು ಸಭೆ ನಡೆದಿದೆ. ಸುಮಾರು 7,057 ಜನ ಜಿಲ್ಲೆಯ ಸಭೆಯಲ್ಲಿ ಭಾಗವಹಿಸಿದ್ದಾರೆ. ಸುಮಾರು 46,167 ಜನ ವಿಧಾನಸಭಾ ಕ್ಷೇತ್ರದ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಜಿಲ್ಲೆ ಹಾಗೂ ವಿಧಾನಸಭೆಯ ಒಂದೊಂದು ಸಭೆಗಳಲ್ಲಿ ಎಷ್ಟೆಷ್ಟು ಜನ ಅಪೇಕ್ಷಿತರಿದ್ದರು ಹಾಗೂ ಎಷ್ಟೆಷ್ಟು ಜನ ಭಾಗಿಯಾಗಿದ್ದರು ಎಂಬ ಸ್ಪಷ್ಟವಾದ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲಾಗಿದೆ. ಅಭಿಯಾನದ ಯಶಸ್ಸಿಗಾಗಿ ರಾಜ್ಯದಲ್ಲಿ 6 ಜನರ, ಪ್ರತಿ ಜಿಲ್ಲೆಯಲ್ಲಿ 5 ಜನರ, ಮಂಡಲದಲ್ಲಿ 3 ಜನರ ತಂಡ ರಚಿಸಲಾಗಿದೆ.**

ಇವತ್ತು ನಾವು ಕರ್ನಾಟಕದಲ್ಲಿ 50 ಲಕ್ಷ ಸದಸ್ಯತ್ವವನ್ನು ತಲುಪಿದ್ದೇವೆ ಎಂದರೆ ಅದು ಗುಣಮಟ್ಟದ ಸದಸ್ಯತ್ವ ಆಗಿದೆ. ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್ ರವರು ಬೆಂಗಳೂರಿಗೆ ಬಂದಾಗ ಬೆಂಗಳೂರಿನ ಮಹಾನಗರ ಪಾಲಿಕೆಯ ಮಾಜಿ ಸದಸ್ಯರುಗಳ ಸಭೆಯಲ್ಲಿ ಹೇಳಿದಂತೆ ರಾಷ್ಟ್ರಮಟ್ಟದಲ್ಲಿ ಸದಸ್ಯತ್ವ ಗುರಿ 11 ಕೋಟಿ. ಅಕ್ಟೋಬರ್ 15ರ ವೇಳೆಗೆ ಸುಮಾರು 9 ಕೋಟಿ ತಲುಪಿದ್ದೇವೆ. ಅತಿ ಶೀಘ್ರದಲ್ಲೇ ರಾಷ್ಟ್ರಮಟ್ಟದಲ್ಲಿ 11 ಕೋಟಿಯ ಗುಣಮಟ್ಟದ ಸದಸ್ಯತ್ವವನ್ನು ಬಿಜೆಪಿ ಪಡೆಯಲಿದೆ. ಕ್ಷೇತ್ರವಾರು ತೆಗೆದುಕೊಂಡರೆ ಜನಸಂಖ್ಯೆಯ 10 ಶೇಕಡಕ್ಕಿಂತ ಹೆಚ್ಚು ಗುಣಮಟ್ಟದ ಸದಸ್ಯರಿದ್ದಾರೆ.

ಈ ಬಾರಿಯ ಸದಸ್ಯತ್ವ ಅಭಿಯಾನದ ಇನ್ನೊಂದು ವಿಶೇಷವೇನೆಂದರೆ ಒಬ್ಬ ಸದಸ್ಯರ ಹೆಸರು, ವಿಳಾಸ, ಜನ್ಮ ದಿನಾಂಕ, ವಯಸ್ಸು ಮುಂತಾದ ಸದಸ್ಯರ ವಿವರ ಒಂದು ಪುಟದಲ್ಲಿ ತುಂಬಿದರೆ ಎರಡನೇ ಪುಟದಲ್ಲಿ ಸದಸ್ಯರ ಕುಟುಂಬಸ್ಥರ ಮಾಹಿತಿ ಹಾಗೂ ವಿವರ ಭರ್ತಿ ಮಾಡಲಾಗುತ್ತದೆ. ಈ ಬಾರಿಯ ಅಭಿಯಾನದ ನಮ್ಮ ಡೇಟಾ ಬ್ಯಾಂಕ್‌ನಲ್ಲಿ ಗುಣಮಟ್ಟದ 11 ಕೋಟಿಗೂ ಹೆಚ್ಚಿನ ಸದಸ್ಯರ ಜೊತೆಗೆ 11 ಕೋಟಿ ಕುಟುಂಬಗಳ ಡೇಟಾ ಕೂಡ ಇರಲಿದೆ. ಒಂದು ಕುಟುಂಬದಲ್ಲಿ ನಾಲ್ಕು ಜನರಿದ್ದಾರೆಂದರೂ ಒಟ್ಟು ಸದಸ್ಯತ್ವ ಸಂಖ್ಯೆ 44 ಕೋಟಿಗೆ ತಲುಪಲಿದೆ. ಅಭಿಯಾನದ ಪ್ರಗತಿಯ ಕುರಿತು ಆಗಾಗ ಪರಿಶೀಲನಾ ಸಭೆ ನಡೆಯುತ್ತದೆ. ಈಗಾಗಲೇ ರಾಜ್ಯದ ತಂಡ ಎರಡು ಬಾರಿ ದೆಹಲಿಯ ಪರಿಶೀಲನಾ ಸಭೆಯಲ್ಲಿ ಭಾಗಿಯಾಗಿದೆ. ಶ್ರೀ ಜೆ.ಪಿ. ನಡ್ಡಾರವರು, ಶ್ರೀ ಬಿ.ಎಲ್. ಸಂತೋಷ್ ರವರು ಹಾಗೂ




ಶ್ರೀ ವಿನೋದ್ ತಾವ್ಡೆಯವರು, ಅಭಿಯಾನದ ಕರ್ನಾಟಕ ರಾಜ್ಯದ ಉಸ್ತುವಾರಿಗಳಾದ ಶ್ರೀಮತಿ ವಿಜಯ್ ರಾಹತ್ಕರ್ ರವರು ಅಭಿಯಾನದ ಪೂರ್ಣ ವರದಿಯನ್ನು ತೆಗೆದುಕೊಂಡರು. ಪ್ರತಿದಿನ ಕೇಂದ್ರ ಕಾರ್ಯಾಲಯದಿಂದ ಕರೆ ಮಾಡಿ ಸದಸ್ಯತ್ವ ಅಭಿಯಾನದ ವರದಿ ಹೇಗೆ ತೆಗೆದುಕೊಳ್ಳುತ್ತಾರೋ ಹಾಗೆಯೇ ರಾಜ್ಯ ಕಾರ್ಯಾಲಯದಿಂದ ಪ್ರತಿ ಜಿಲ್ಲೆಯ ಸದಸ್ಯತ್ವದ ಪ್ರಗತಿಯ ವರದಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬಿಜೆಪಿಯ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾದರೆ ತನ್ನ ಬೂತ್ ಹಾಗೂ ವಿಧಾನಸಭಾ ಕ್ಷೇತ್ರದೊಳಗೆ ಕನಿಷ್ಠ 50 ಸದಸ್ಯರನ್ನು ಮಾಡಿ ಸಕ್ರಿಯ ಸದಸ್ಯತ್ವವನ್ನು ಪಡೆದುಕೊಳ್ಳಬೇಕು ಎಂದು ನಿರ್ಧರಿಸಲಾಗಿದೆ. ಮಾನ್ಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ನೇತೃತ್ವದಲ್ಲಿ ಪ್ರತಿ ಬೂತ್‌ನಲ್ಲಿ ಗುಣಮಟ್ಟದ ಸಕ್ರೀಯ ಕಾರ್ಯಕರ್ತರನ್ನು ಗುರುತಿಸುವಂತಹ ಕಾರ್ಯಯೋಜನೆ ಕೂಡ ಈ ಅಭಿಯಾನದ ಮೂಲಕ ಮಾಡಲಾಗುತ್ತಿದೆ. ರಾಜ್ಯ ಬಿಜೆಪಿ ಸದಸ್ಯತ್ವ ಅಭಿಯಾನವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎಂದರೆ ಮಾನ್ಯ ರಾಜ್ಯಾಧ್ಯಕ್ಷರು ಈ ವಿಚಾರವಾಗಿ ಪ್ರತಿದಿನ ಬೆಳಿಗ್ಗೆ ಹಾಗೂ ರಾತ್ರಿ ರಾಜ್ಯ ಸದಸ್ಯತ್ವ ಟೋಳಿಯೊಂದಿಗೆ ಪ್ರಗತಿ ಪರಿಶೀಲನಾ ಚರ್ಚೆ ಅಥವಾ ಸಭೆ ನಡೆಸಿದ್ದಾರೆ. ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್.ಅಶೋಕ್ ರವರು ಪ್ರತಿ ಕ್ಷೇತ್ರದ ಶಾಸಕರು, ಪರಾಜಿತ ಅಭ್ಯರ್ಥಿಗಳು, ಜಿಲ್ಲಾಧ್ಯಕ್ಷರು, ವಿಧಾನ ಪರಿಷತ್ ಸದಸ್ಯರು ಹಾಗೂ ಪ್ರಮುಖರಿಗೆ ಕರೆ ಮಾಡಿ ಅಭಿಯಾನಕ್ಕೆ ವೇಗ ನೀಡಲು ಸೂಚಿಸಿದ್ದಾರೆ. ಪ್ರಮುಖ ನಾಯಕರು ಸ್ವತಃ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಜೊತೆಗೂಡಿ ಮನೆ ಮನೆಗೆ ತೆರಳಿ ಸದಸ್ಯತ್ವ ನೋಂದಣಿ ಮಾಡಿಸಿದ್ದಾರೆ. ಭಾನುವಾರ ರಜಾದಿನವಿದ್ದರೂ ಕೂಡ ಸದಸ್ಯತ್ವ ಅಭಿಯಾನದ ಸಂಚಾಲಕರಾದ ಶ್ರೀ ನಂದೀಶ್ ರೆಡ್ಡಿರವರು ಕಾರ್ಯಾಲಯದಲ್ಲಿ ಕುಳಿತು ಪ್ರತಿ ಜಿಲ್ಲೆಯ ವರದಿ ತೆಗೆದುಕೊಂಡು ಹುರಿದುಂಬಿಸುವ ಕೆಲಸ ಮಾಡಿದ್ದಾರೆ. ಒಟ್ಟಿನಲ್ಲಿ ರಾಜ್ಯಾಧ್ಯಕ್ಷರು, ವಿರೋಧ ಪಕ್ಷದ ನಾಯಕರಿಂದ ಹಿಡಿದು ಬೂತ್ ಮಟ್ಟದ ಕಾರ್ಯಕರ್ತರವರೆಗೆ ಈ ಒಂದು ಸದಸ್ಯತ್ವ ಅಭಿಯಾನದಲ್ಲಿ ಒಂದು ತಂಡವಾಗಿ ಭಾರತೀಯ ಜನತಾ ಪಾರ್ಟಿ ಕೆಲಸ ಮಾಡಿದೆ.

## ವಿಶೇಷ ಪ್ರಯತ್ನಗಳು

**ಅಭಿಯಾನದ ಗುರಿಯನ್ನು ತಲುಪಲು ಕೆಲವು ವಿಶೇಷ ಪ್ರಯತ್ನಗಳನ್ನು ಕೂಡ ಮಾಡಲಾಗಿದೆ. ಕಾಲೇಜ್ ಕ್ಯಾಂಪಸ್, ಮೆಟ್ರೋ ರೈಲು, ಮಂದಿರ ಮಠ ಮಾನ್ಯಗಳು, ಮಾರ್ಕೆಟ್‌ಗಳು, ಕೈಗಾರಿಕಾ ವಲಯಗಳು, ಫ್ಯಾಕ್ಟರಿಗಳು ಮುಂತಾದ ಜನನಿಬಿಡ ಜಾಗಗಳಿಗೆ ತೆರಳಿ ಸದಸ್ಯರಾಗಲು ಮನವಿ ಮಾಡಿ ಆಸಕ್ತಿ ತೋರಿದವರನ್ನು ಬಿಜೆಪಿಯ ಸದಸ್ಯರನ್ನಾಗಿ ಮಾಡಿಕೊಳ್ಳಲಾಗಿದೆ. ಭಾರತೀಯ ಜನತಾ ಪಕ್ಷದ 7 ಮೋರ್ಚಾಗಳಾದ ಮಹಿಳಾ, ಯುವ, ಹಿಂದುಳಿದ ವರ್ಗ, ರೈತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮೋರ್ಚಾಗಳು ತಮ್ಮ ತಮ್ಮ ಮೋರ್ಚಾಗಳ ಅಡಿಯಲ್ಲಿ ಬರುವ ಜನರನ್ನು ಭೇಟಿಯಾಗಿ ಅವರನ್ನು ಭಾರತೀಯ ಜನತಾ ಪಕ್ಷದ ಸದಸ್ಯರನ್ನಾಗಿ ಮಾಡುವಲ್ಲಿ ವಿಶೇಷ ಪ್ರಯತ್ನವನ್ನು ತೋರಿದ್ದಾರೆ.**

ಸದಾ ದೇಶದ ಒಳಿತು ಹಾಗೂ ಅಭಿವೃದ್ಧಿಗಾಗಿ ಚಿಂತಿಸುವ ರಾಜಕೀಯ ಪಕ್ಷವಿದ್ದರೆ ಅದು ಭಾರತೀಯ ಜನತಾ ಪಕ್ಷ. ಇಂದು ವಿಶ್ವವೇ ಕೊಂಡಾಡುವ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಂತಹ ನಾಯಕತ್ವವನ್ನು ಈ ಪಕ್ಷ ಹೊಂದಿದೆ. ಇಂತಹ ಪಕ್ಷದ ಸದಸ್ಯರಾಗುವುದೇ ಒಂದು ಭಾಗ್ಯ. ಆ ಭಾಗ್ಯದ ಬಾಗಿಲು ಸದಸ್ಯತಾ ಅಭಿಯಾನದ ಮೂಲಕ ತೆರೆದಿದ್ದು, ಭಾರತೀಯ ಜನತಾ ಪಕ್ಷ ಸದಸ್ಯತ್ವದ ದೃಷ್ಟಿಯಿಂದ ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷ ಎಂಬುದನ್ನು ನಿರೂಪಿಸಿ ಮತ್ತೊಮ್ಮೆ ವಿಶ್ವಕ್ಕೆ ಸಾರಿ ಸಾರಿ ಹೇಳಲಿದೆ.

**ಭಾರತೀಯ ಜನತಾ ಪಕ್ಷದ ಸದಸ್ಯರಾಗುವ ಮೂಲಕ ವಿಶ್ವವಂದ್ಯ ಭಾರತ ನಿರ್ಮಾಣದಲ್ಲಿ ಎಲ್ಲರೂ ಭಾಗಿಯಾಗೋಣ...**




# ಬಿಜೆಪಿ ಸದಸ್ಯತಾ ಅಭಿಯಾನ - 2024

## ಪ್ರಧಾನಿ ಶ್ರೀ ನರೇಂದ್ರ ಮೋದಿ ಭಾಷಣದ ಕನ್ನಡ ಅಕ್ಷರರೂಪ

**ಬಿಜೆಪಿ ಸದಸ್ಯತಾ ಅಭಿಯಾನದ ಧ್ಯೇಯವು ಕೇವಲ ಪಕ್ಷವನ್ನು ಬೆಳೆಸುವುದಷ್ಟೇ ಅಲ್ಲ ರಾಷ್ಟ್ರವನ್ನು ಭದ್ರಪಡಿಸುವುದಾಗಿದೆ. ನಾವು ಬುಡಕಟ್ಟು ಪ್ರದೇಶಗಳು, ಗಡಿ ರಾಜ್ಯಗಳು ಮತ್ತು ಪ್ರತಿ ಹಳ್ಳಿಗಳನ್ನು ತಲುಪಿದಾಗಲೇ ನಮ್ಮ ಧ್ಯೇಯವಾದ ಅಭಿವೃದ್ಧಿ, ಮೂಲಸೌಕರ್ಯ ಮತ್ತು ಅವಕಾಶವಂಚಿತರಿಗೆ ಸೌಲಭ್ಯವನ್ನು ಕೊಡುವುದು ಸಾರ್ಥಕವಾದಂತಾಗುತ್ತದೆ.**



**ಹರೀಶ್ ಆತ್ರೇಯ**
ಕಾರ್ಯಕರ್ತರು

**ಜನಾದೇಶದ ಶಕ್ತಿ - ಸಂಘಟನೆಯ ಶಕ್ತಿ ಮತ್ತು ಪ್ರಗತಿ**

ನಾವು ನಮ್ಮ ಸದಸ್ಯತ್ವ ಅಭಿಯಾನದ ಮತ್ತೊಂದು ಅಧ್ಯಾಯವನ್ನು ಪ್ರಾರಂಭಿಸುತ್ತಿದ್ದೇವೆ. ಈ ಸಮಯದಲ್ಲಿ ನಾವು ಭಾರತೀಯ ಜನಸಂಘದ ದಿನಗಳ ಪರಂಪರೆಯನ್ನು ಅವಲೋಕಿಸಬೇಕು. ಮೊದಲಿನಿಂದಲೂ, ನಮ್ಮ ಧ್ಯೇಯವೆಂದರೆ ಹೊಸ ರಾಜಕೀಯ ಸಂಸ್ಕೃತಿಯನ್ನು ಪರಿಚಯಿಸುವುದು. ನಮ್ಮ ರಾಜಕೀಯ ಉದ್ದೇಶವು ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನೆಲೆಗೊಂಡಿದೆ. ರಾಜಕೀಯ ಸಂಘಟನೆಗಳು ಈ ತತ್ವಗಳನ್ನು ಸಾಕಾರಗೊಳಿಸಿದಾಗ ಮಾತ್ರ, ನಿಜವಾದ ಪ್ರಜಾಪ್ರಭುತ್ವವು ಅರಳುತ್ತದೆ. ದುರದೃಷ್ಟವಶಾತ್, ದೇಶದ ಅನೇಕ ಪಕ್ಷಗಳು ಈ ಹಾದಿಯಿಂದ ದೂರ ಸರಿದಿವೆ, ಇದು ಇಂದು ನಾವು ಎದುರಿಸುತ್ತಿರುವ ಸವಾಲುಗಳಿಗೆ ಇವು ಕಾರಣವಾಗಿದೆ. ನಮ್ಮ ಪಕ್ಷ ಮಾತ್ರ, ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು ಎತ್ತಿಹಿಡಿಯುತ್ತಿದೆ, ಸಾಮಾನ್ಯ ಜನರ ಭರವಸೆ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಶ್ರಮಿಸುತ್ತಿದೆ.

ಸಂಘಟನೆಯ ಈ ಪಯಣವು ಸುಲಭದ ಹಾದಿಯಾಗಿರಲಿಲ್ಲ, ಲಕ್ಷಾಂತರ ಜನರ ಹೃದಯದಲ್ಲಿ ನಮ್ಮ ಪಕ್ಷದ ಸ್ಥಾನವು ಸಮರ್ಪಣೆ, ತ್ಯಾಗ ಮತ್ತು ತಲೆಮಾರುಗಳ ಅಸಂಖ್ಯಾತ ವ್ಯಕ್ತಿಗಳ ಪ್ರಯತ್ನದ ಫಲಿತಾಂಶವಾಗಿದೆ. ನಾನು ರಾಜಕೀಯಕ್ಕೆ ಪ್ರವೇಶಿಸುವ ಮೊದಲು, ನಮ್ಮ ಕಾರ್ಯಕರ್ತರು ಭರವಸೆಯ ಸಂಕೇತವಾಗಿ ಗೋಡೆಗಳ ಮೇಲೆ ಕಮಲವನ್ನು ಉತ್ಸಾಹದಿಂದ ಚಿತ್ರಿಸುತ್ತಿದ್ದ ಸಮಯವನ್ನು ನಾನು ನೆನಪಿಸಿಕೊಳ್ಳುತ್ತೇನೆ. ನಮ್ಮ ಪ್ರಯತ್ನಗಳಿಗಾಗಿ ನಾವು ಆಗಾಗ್ಗೆ ಅಪಹಾಸ್ಯಕ್ಕೊಳಗಾಗಿದ್ದರೂ, ಚಿತ್ರಕಲೆ ಚಿಹ್ನೆಗಳು ಎಂದಿಗೂ ಅಧಿಕಾರಕ್ಕೆ ಕಾರಣವಾಗುವುದಿಲ್ಲ ಎಂದು ಹಲವರು ಹೇಳಿಕೊಂಡಿದ್ದರೂ, ನಾವು, ಒಂದಲ್ಲ ಒಂದು ದಿನ ಕಮಲವು ಗೋಡೆಗಳನ್ನು ಅಲಂಕರಿಸುವುದಲ್ಲದೆ ಜನರ ಹೃದಯದಲ್ಲಿ ಅಚ್ಚೊತ್ತುತ್ತದೆ ಎಂದು ನಾವು ನಂಬಿದ್ದೆವು ಮತ್ತು ಆ ದಿನ ಬಂದಿದೆ.

ನಮ್ಮ ಇತಿಹಾಸವು ಸ್ಥಿತಿಸ್ಥಾಪಕತ್ವದ ಕಥೆಗಳಿಂದ ತುಂಬಿದೆ. ನಾವು ಸಂಸತ್ತಿನಲ್ಲಿ ಕೇವಲ ಇಬ್ಬರು ಸದಸ್ಯರನ್ನು ಹೊಂದಿದ್ದೆವು ವಿರೋಧ ಪಕ್ಷದವರು ನಮ್ಮನ್ನು ಅಪಹಾಸ್ಯಕ್ಕೆ ಗುರಿಯಾಗಿಸಿದ್ದರೂ ಸಹ, ನಾವು ಪಂ. ದೀನದಯಾಳ್ ಉಪಾಧ್ಯಾಯರ ಮಂತ್ರವಾದ 'ಚರೈವೇತಿ, ಚರೈವೇತಿ' -ಮುಂದಕ್ಕೆ ಸಾಗುತ್ತಿರಿ ಎಂಬ ತತ್ವವು ನಮ್ಮನ್ನು ಕಠಿಣವಾದ ಸಮಯದಲ್ಲಿ ದಿಟ್ಟ ಹೆಜ್ಜೆಯೊಂದಿಗೆ ಎದ್ದು ನಿಂತು ಸಾಗಬೇಕೆನ್ನುವ ಸ್ಫೂರ್ತಿಯನ್ನು ನೀಡುತ್ತಲೇ ಬಂದಿದೆ.

ನಮ್ಮ ಪಕ್ಷದ ಸದಸ್ಯರು ಮಾಡಿದ ತ್ಯಾಗಗಳು ಇಂದು ನಾವು ನಿಂತಿರುವ ಅಡಿಪಾಯವನ್ನು ರೂಪಿಸುತ್ತವೆ. ನಮ್ಮ ಸಂದೇಶವನ್ನು ಹರಡಲು ಅನಂತವಾಗಿ ಪ್ರಯಾಣಿಸಿದವರಿಂದ ಹಿಡಿದು

ಶಾಂತಿಯುತ ಪ್ರತಿಭಟನೆಗಾಗಿ ಜೈಲುವಾಸ ಅನುಭವಿಸಿದವರಿಂದ ಹಿಡಿದು ಅಹಮದಾಬಾದ್ ಸಹೋದರಿ ತನ್ನ ಒಂಬತ್ತು ತಿಂಗಳ ಮಗುವಿನೊಂದಿಗೆ ಜೈಲಿನಲ್ಲಿದ್ದಂತೆ–ಈ ಕಥೆಗಳು ನಮ್ಮ ಯಶಸ್ಸಿಗೆ ತೆತ್ತ ಬೆಲೆಯನ್ನು ನೆನಪಿಸುತ್ತವೆ. ಪ್ರಯಾಣವು ದೀರ್ಘವಾಗಿದೆ, ಆದರೆ ಪ್ರತಿ ಹೆಜ್ಜೆಯೂ ನಮ್ಮನ್ನು ನಮ್ಮ ಗುರಿಯ ಹತ್ತಿರಕ್ಕೆ ತಂದಿದೆ.

ನಮ್ಮ ಸದಸ್ಯತ್ವ ಅಭಿಯಾನವು ಕೇವಲ ಸಂಖ್ಯೆಗಳಿಗಿಂದ ಮುಖ್ಯವಾಗಬಾರದು. ಇದು ನಮ್ಮ ಮೌಲ್ಯಗಳು ಮತ್ತು ರಾಷ್ಟ್ರಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುವ ಜನರೊಂದಿಗೆ ನಮ್ಮ ಕುಟುಂಬವನ್ನು ವಿಸ್ತರಿಸುವ ಬಗ್ಗೆ ಪ್ರತಿಯೊಬ್ಬ ಹೊಸ ಸದಸ್ಯರ ಸಂಭ್ರಮಾಚರಣೆ, ಮತ್ತು ಈ ಅಭಿಯಾನವು ಭಾವನಾತ್ಮಕವಾದಂತೆಯೇ ಸೈದ್ಧಾಂತಿಕ ಆಂದೋಲನವಾಗಿದೆ, ಇದು ಭಾರತಮಾತೆಯ ಮೇಲಿನ ನಮ್ಮ ಪ್ರೀತಿ ಮತ್ತು ಅವರ 140 ಕೋಟಿ ಮಕ್ಕಳ ಕಲ್ಯಾಣಕ್ಕಾಗಿ ನಡೆಸಲ್ಪಡುತ್ತದೆ. ನಾವು ಮುನ್ನಡೆಯುವಾಗ ನವೀನವಾಗಿ ಯೋಚಿಸಬೇಕು. ನಾವು ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ 33% ಮೀಸಲಾತಿಯನ್ನು ಜಾರಿಗೊಳಿಸುತ್ತಿರುವ ಸಮಯದಲ್ಲಿ ಈ ಅಭಿಯಾನವು ಬಂದಿದೆ. ಇದು ಕೇವಲ ಶಾಸನಾತ್ಮಕ ಕ್ರಮವಲ್ಲ; ಇದು ಕಾಯಕದ ಕರೆ. ಮಹಿಳೆಯರನ್ನು ಸಬಲೀಕರಣಗೊಳಿಸಲು ಸಹಾಯ ಮಾಡುವ ವ್ಯಕ್ತಿಗಳೊಂದಿಗೆ ನಾವು ಉತ್ತಮವಾದ ಸಂಪರ್ಕವನ್ನು ಹೊಂದಿ ಅವರು ಚುನಾವಣೆಗಳನ್ನು ಗೆಲ್ಲುವಂತೆ ಮತ್ತು ಅವರಿಗೆ ಅರ್ಹವಾದ ಪ್ರಾತಿನಿಧ್ಯವನ್ನು ಪಡೆಯುವಂತೆ ಮಾಡಬೇಕು

ನಮ್ಮ ಪಕ್ಷವನ್ನು ಬಲಪಡಿಸುವುದರ ಹೊರತಾಗಿ, ಈ ಅಭಿಯಾನವು ಪ್ರಜಾಪ್ರಭುತ್ವ, ಸಮಾನತೆ ಮತ್ತು ರಾಷ್ಟ್ರೀಯ ಕಲ್ಯಾಣದ ತತ್ವಗಳಿಗೆ ನಮ್ಮ ಬದ್ಧತೆಯನ್ನು ಗಾಢವಾಗಿಸುತ್ತದೆ. ನಾವು ಪ್ರಮುಖ ಜಿಲ್ಲೆ ಮತ್ತು ಬ್ಲಾಕ್‌ಗಳಲ್ಲಿ ಗಮನಾರ್ಹವಾದ ಕೆಲಸವನ್ನು ಮಾಡಿದ್ದೇವೆ, ಒಂದು ಕಾಲದಲ್ಲಿ ನಿರ್ಲಕ್ಷಿಸಲ್ಪಟ್ಟ ಪ್ರದೇಶಗಳು. ಕೇಂದ್ರೀಕೃತ ಪ್ರಯತ್ನಗಳ ಮೂಲಕ, ಈ ಪ್ರದೇಶಗಳು ಈಗ ತಮ್ಮ ರಾಜ್ಯಗಳಲ್ಲಿ ಅತ್ಯುತ್ತಮವಾದವುಗಳೊಂದಿಗೆ ಸಮಾನವಾಗಿವೆ. ನಾವು ಈ ಪರಿವರ್ತನಾ ದೃಷ್ಟಿಯನ್ನು ದೇಶದ ಮೂಲೆ ಮೂಲೆಗೂ ವಿಸ್ತರಿಸಿ, ಈ ಜಿಲ್ಲೆಗಳನ್ನು ಯಶಸ್ಸಿನ ಮಾದರಿಗಳನ್ನಾಗಿ ಮಾಡಬೇಕಲ್ಲವೇ?

ಅಂತೆಯೇ, ನಾವು ನಮ್ಮ ಗಡಿ ಗ್ರಾಮಗಳನ್ನು ಹೇಗೆ ನೋಡುತ್ತೇವೆ ಎಂಬುದನ್ನು ಮರು ವ್ಯಾಖ್ಯಾನಿಸಿದ್ದೇವೆ. ಒಮ್ಮೆ ಭಾರತದ ಕೊನೆಯ ಹಳ್ಳಿಗಳು ಎಂದು ಪರಿಗಣಿಸಲ್ಪಟ್ಟಿದ್ದರೆ, ನಾವು ಈಗ ಹೊಸ ದಿನದ ಉದಯಕ್ಕೆ ಸಾಕ್ಷಿಯಾಗಲು ಮೊದಲ ಹಳ್ಳಿಗಳು ಎಂದು ಮರು ನುಡಿಯಬೇಕಿದೆ. ಈ ಗಡಿ ಪ್ರದೇಶಗಳ ಮೇಲೆ ಕೇಂದ್ರೀಕರಿಸುವ ಮೂಲಕ, ನಾವು ನಮ್ಮ ಅಸ್ತಿತ್ವವನ್ನು ಬಲಪಡಿಸಬಹುದು ಮತ್ತು ಅವುಗಳನ್ನು ರಾಷ್ಟ್ರೀಯ ಏಕತೆಯ ಸಂಕೇತಗಳಾಗಿ ಮಾಡಬಹುದು. ನಾವು ಬಿಜೆಪಿಯನ್ನು ಈ ಮುಂದಿನ ಹಂತಗಳಲ್ಲಿ ಬಲಪಡಿಸಿದಾಗ, ನಾವು ಭಾರತವನ್ನು ಬಲಪಡಿಸುತ್ತೇವೆ.

ಈ ಅಭಿಯಾನ ಕೇವಲ ನಮ್ಮ ಪಕ್ಷವನ್ನು ಬೆಳೆಸುವುದಷ್ಟೇ ಅಲ್ಲ ನಮ್ಮ ರಾಷ್ಟ್ರವನ್ನು ಭದ್ರಪಡಿಸುವುದಾಗಿದೆ. ನಾವು ಬುಡಕಟ್ಟು ಪ್ರದೇಶಗಳು, ಗಡಿ ರಾಜ್ಯಗಳು ಮತ್ತು ಪ್ರತಿ ಹಳ್ಳಿಗಳನ್ನು ತಲುಪಿದಾಗಲೇ ನಮ್ಮ ಧ್ಯೇಯವಾದ ಅಭಿವೃದ್ಧಿ, ಮೂಲಸೌಕರ್ಯ ಮತ್ತು ಅವಕಾಶವಂಚಿತರಿಗೆ ಸೌಲಭ್ಯವನ್ನು ಕೊಡುವುದು ಸಾರ್ಥಕವಾದಂತಾಗುತ್ತದೆ. ಪ್ರಧಾನಮಂತ್ರಿ ಜನ್ ಧನ್ ಯೋಜನೆಯಂತಹ ಉಪಕ್ರಮಗಳ ಮೂಲಕ, ನಾವು ರಸ್ತೆಗಳನ್ನು ನಿರ್ಮಿಸುವುದರ ಮೂಲಕ, ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಅಭಿಯಾನದ ಮೂಲಕ ಮತ್ತು ಆರೋಗ್ಯ ಸೇವೆಯು ಹಿಂದುಳಿದವರಿಗೆ ತಲುಪಿಸುವ ಮೂಲಕ ನಮ್ಮ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುತ್ತಿದ್ದೇವೆ. ನಾವು ನಮ್ಮ ಪಕ್ಷವನ್ನು ವಿಸ್ತರಿಸುತ್ತಿಲ್ಲ; ನಾವು ಜನರನ್ನು ಅಪ್ಪಿಕೊಳ್ಳುತ್ತಿದ್ದೇವೆ ಮತ್ತು ರಾಷ್ಟ್ರದ ಮುಂದಿನ ಪ್ರಯಾಣದಲ್ಲಿ ಅವರನ್ನು ಪಾಲುದಾರರನ್ನಾಗಿ ಮಾಡುತ್ತಿದ್ದೇವೆ.

ನಮಗೆ, ಸದಸ್ಯತ್ವವು ಪವಿತ್ರ ಕಾರ್ಯವಾಗಿದೆ. ಇದು ಕೇವಲ ಸಂಖ್ಯೆಗಳ ಆಟವಲ್ಲ ಆದರೆ ಭಾರತದ ಭವಿಷ್ಯಕ್ಕಾಗಿ ಹಂಚಿಕೆಯ ದೃಷ್ಟಿಯಲ್ಲಿ ಜನರನ್ನು ಒಂದುಗೂಡಿಸುವ ಅವಕಾಶವಾಗಿದೆ. ನಾವು 18 ಮತ್ತು 25 ರ ನಡುವಿನ ಯುವ ಪೀಳಿಗೆಯೊಂದಿಗೆ ಸಂಪರ್ಕ ಹೊಂದಬೇಕು, ಅವರು ಹಿಂದಿನ ಹೋರಾಟಗಳನ್ನು ನೆನಪಿಸಿಕೊಳ್ಳುವುದಿಲ್ಲ ಆದರೆ 2047 ರಲ್ಲಿ ನಮ್ಮ ರಾಷ್ಟ್ರವನ್ನು ರೂಪಿಸುವ ಶಕ್ತಿ ಮತ್ತು ಸಾಮರ್ಥ್ಯದಿಂದ ಅವರುಗಳೆಲ್ಲಾ ತುಂಬಿರುತ್ತಾರೆ.

ಕೆಲವರು ಬಿಜೆಪಿಯನ್ನು ಚುನಾವಣಾ ಯಂತ್ರ, ಎಂದು ಕರೆಯಬಹುದು, ಆದರೆ ಇದು ಸತ್ಯದಿಂದ ದೂರವೆನ್ನುವುದು ತಿಳಿದ ವಿಚಾರ. ಚುನಾವಣೆ ಗೆಲ್ಲುವುದು ಕಾರ್ಯಕರ್ತರ ದಣಿವರಿಯದ ಸಮರ್ಪಣೆಯ ಫಲಿತಾಂಶವಾಗಿದೆ. ನಿಜವಾದ ಶಕ್ತಿಯು ರಾಷ್ಟ್ರದ ಕನಸುಗಳನ್ನು ಪೋಷಿಸುವಲ್ಲಿ, ನಾವೆಲ್ಲರೂ ಒಟ್ಟಾಗಿ ಏರಲು ಅನುವು ಮಾಡಿಕೊಡುವ ಅಡಿಪಾಯವನ್ನು ನಿರ್ಮಿಸುವಲ್ಲಿ ಅಡಗಿದೆ.

ಸ್ನೇಹಿತರೇ, ನಮ್ಮದು ಪ್ರಜಾಪ್ರಭುತ್ವ, ಸರಳತೆ ಮತ್ತು ಗೌರವವನ್ನು ಗೌರವಿಸುವ ಪಕ್ಷವಾಗಿದೆ. ನಾವು ಬೆಳೆಯುತ್ತಿರುವಂತೆ, ನಾವು ಈ ತತ್ವಗಳಿಗೆ ಬದ್ಧರಾಗಿರಬೇಕು. ನಮ್ಮ ಹೃದಯವನ್ನು ತೆರೆಯಬೇಕು ಮತ್ತು ಭಾರತದ ಪ್ರತಿಯೊಂದು ಮೂಲೆಯಲ್ಲಿ ಕಮಲವನ್ನು ಅರಳಿಸಲು ಬಿಡಬೇಕು. ನಮ್ಮ ನೀತಿಗಳು ಮತ್ತು ನಿರ್ಧಾರಗಳನ್ನು ನಂಬುವ ಬಡವರ ನಂಬಿಕೆಯನ್ನು ನಾವು ಗಳಿಸಿದ್ದೇವೆ ಮತ್ತು ಈ ನಂಬಿಕೆಯೇ ನಮ್ಮನ್ನು ಮುನ್ನಡೆಸುತ್ತದೆ.

ಈ ಶಕ್ತಿಯೊಂದಿಗೆ, ಹಳೆಯ ಅಡೆತಡೆಗಳನ್ನು ಮುರಿದು, ಹೊಸ ಎತ್ತರಗಳನ್ನು ತಲುಪುವ ಮತ್ತು ಮೊದಲಿನಿಂದ ದೂರದವರೆಗೆ ಪ್ರತಿ ಹಳ್ಳಿಯಲ್ಲಿ ಬಿಜೆಪಿ ಧ್ವಜವನ್ನು ಏರಿಸುವ ಗುರಿಯೊಂದಿಗೆ ನಾವು ಈ ಸದಸ್ಯತ್ವ ಅಭಿಯಾನವನ್ನು ನವ ಚೈತನ್ಯದಿಂದ ನಡೆಸುತ್ತೇವೆ. ನಮ್ಮ ಪಕ್ಷದ ಭವಿಷ್ಯಕ್ಕಾಗಿ ಮತ್ತು ನಮ್ಮ ರಾಷ್ಟ್ರದ ಭವಿಷ್ಯಕ್ಕಾಗಿ ಈ ಬದ್ಧತೆ ಮತ್ತು ಬೆಳವಣಿಗೆಯ ಪ್ರಯಾಣವನ್ನು ಮುಂದುವರಿಸೋಣ.






# ಮಹತ್ವಾಕಾಂಕ್ಷಿ ಭಾರತದ ಸುವರ್ಣ ಪರ್ವ

## ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ನ್ಯೂಯಾರ್ಕ್‌ನಲ್ಲಿ ಭಾರತೀಯ ವಲಸಿಗರನ್ನು ಉದ್ದೇಶಿಸಿ ಮಾಡಿದ ಭಾಷಣದ ಕನ್ನಡ ಅಕ್ಷರ ರೂಪ



**ಅಶ್ವಿನಿ ಶಂಕರ್**
ರಾಜ್ಯ ಉಪಾಧ್ಯಕ್ಷರು, ಒಬಿಸಿ ಮೋರ್ಚಾ
ಬಿಜೆಪಿ ಕರ್ನಾಟಕ

**ನಾವು ಬೆಂಕಿಯ ಹಾಗೆ ಸುಡುವವರಲ್ಲ, ಆದರೆ ಸೂರ್ಯನಂತೆ ಬೆಳಕು ಚೆಲ್ಲುವ ಜನರಿದ್ದೇವೆ. ನಾವು ವಿಶ್ವದ ಮೇಲೆ ನಮ್ಮ ಒತ್ತಡ ಹೇರುವುದಿಲ್ಲ, ವಿಶ್ವದ ಸಮೃದ್ಧಿಗಾಗಿ ನಮ್ಮ ಪಾಲುದಾರಿಕೆಯನ್ನು ವೃದ್ಧಿಸಲು ಇಚ್ಛಿಸುತ್ತೇವೆ. ಯೋಗಕ್ಕೆ ವೇಗ ನೀಡಲು, ಸಿರಿಧಾನ್ಯಗಳನ್ನು ಉತ್ತೇಜಿಸಲು, ಭಾರತ ಜಿಡಿಪಿ ಕೇಂದ್ರೀಕೃತ ಅಭಿವೃದ್ಧಿಯ ಜೊತೆಗೆ ಮಾನವೀಯ ಕೇಂದ್ರಿತ ಅಭಿವೃದ್ಧಿಗಾಗಿ ಆದ್ಯತೆ ನೀಡುತ್ತದೆ. ನಾನು ನಿಮ್ಮಲ್ಲೂ Mission Lifeನ್ನು ಹೆಚ್ಚಾಗಿ ಜಾಗರೂಕಗೊಳಿಸಿ, ನಮ್ಮ ಜೀವನಶೈಲಿಯಲ್ಲಿ ಕೊಂಚ ಬದಲಾವಣೆ ತರುವ ಮೂಲಕ ಪರಿಸರವನ್ನು ಸಂರಕ್ಷಿಸುವಲ್ಲಿ ಸಹಾಯ ಮಾಡಬಹುದು.**

ತಮ್ಮಗಳೆಲ್ಲರ ಸಹಕಾರದಿಂದ ದೇಶೀಯ ನಮಸ್ಕಾರವೂ ಲೋಕಲ್‌ನಿಂದ ಗ್ಲೋಬಲ್ ಆಗಿದೆ. ಇವೆಲ್ಲಕ್ಕೂ ಕಾರಣರು ನೀವು. ಪ್ರತಿ ಬಾರಿ ಅಮೇರಿಕಾ ಭೇಟಿಯಾದಾಗಲೂ ತಾವು ಅಪಾರ ಸಂಖ್ಯೆಯಲ್ಲಿ ಸ್ಪಂದಿಸುವ ಮೂಲಕ ಹಿಂದಿನ ದಾಖಲೆಗಳನ್ನು ಮುರಿಯುತ್ತಿದ್ದೀರಿ.

ಅಮೇರಿಕಾದಲ್ಲಿ ನೆಲಸಿರುವ ಭಾರತೀಯರೆಲ್ಲರೂ ಭಾರತವನ್ನು ಅಮೆರಿಕದೊಂದಿಗೆ ಬೆಸೆದಿದ್ದೀರಿ. ಸಪ್ತ ಸಾಗರಗಳ ಆಚೆ ಬಂದು ನೆಲೆಸಿದ್ದೀರಾದರೂ ಯಾವ ಸಮುದ್ರವೂ ನಿಮ್ಮ ಹೃದಯದೊಳಗಿರುವ ಭಾರತೀಯತೆಯನ್ನು ಹಾಗೂ ಭಾರತವನ್ನು ದೂರ ಮಾಡಲಾಗದು. ತಾಯಿ ಭಾರತಮಾತೆ ನಮಗೆ ಹೇಳಿಕೊಟ್ಟಿರುವುದನ್ನು ನಾವು ಎಂದಿಗೂ ಮರೆಯಲಾಗುವುದಿಲ್ಲ. ನಾವು ಎಲ್ಲೇ ಹೋದರೂ / ನೆಲೆಸಿದರೂ ಅಲ್ಲಿನವರನ್ನು ನಮ್ಮವರೆಂದು ಸ್ವೀಕರಿಸಿ ಎಲ್ಲರೊಂದಿಗೆ ಬೆರೆತು ಹೋಗುತ್ತೇವೆ. ವಿವಿಧತೆಯನ್ನು ಅರ್ಥ ಮಾಡಿಕೊಳ್ಳುವುದು, ವಿವಿಧತೆಯನ್ನು ಜೀವಿಸುವುದು, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮ ಸಂಸ್ಕಾರದಲ್ಲಿದೆ, ನಮ್ಮ ರಕ್ತದ ಕಣ ಕಣದಲ್ಲಿದೆ. ನಾವು ನೂರಾರು ಭಾಷೆಗಳು, ನೂರಾರು ಮಾತುಗಳು, ಮತಗಳು, ಪಂಥಗಳಿರುವ ದೇಶದವರಾಗಿದ್ದರೂ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಮುನ್ನಡೆಯುತ್ತಿರುವ ದೇಶದವರಾಗಿದ್ದೇವೆ. ಈ ಸಭಾಂಗಣದಲ್ಲಿ ಕೆಲವರು ತೆಲುಗು, ತಮಿಳು, ಕನ್ನಡ, ಮಲಯಾಳಂ, ಪಂಜಾಬಿ, ಮರಾಠಿ, ಗುಜರಾತಿ ಮಾತನಾಡುವವರಿದ್ದೇವೆ. ಭಾಷೆಗಳು ಅನೇಕ, ಆದರೆ ಭಾವ ಒಂದೇ. ಆ ಭಾವ ಯಾವುದೆಂದರೆ ಭಾರತ ಮಾತೆಯ ಭಾರತೀಯತೆ. ಪ್ರಪಂಚದೊಂದಿಗೆ ಬೆಸೆದುಕೊಳ್ಳಲು ಇದು ನಮಗಿರುವ ಅತ್ಯಂತ ಬಲಿಷ್ಠ ಶಕ್ತಿಯಾಗಿದೆ. ಇದೇ ಮೌಲ್ಯಗಳು ನಮ್ಮನ್ನು ಸಹಜವಾಗಿಯೇ ವಿಶ್ವಬಂಧುವಾಗಿ ಮಾಡುತ್ತದೆ.

ಈಗಷ್ಟೇ ಕೆಲವು ದಿನಗಳ ಹಿಂದಷ್ಟೇ ಕ್ರಿಕೆಟ್ ಟಿ–20 ಪಂದ್ಯಾವಳಿ ನಡೆಯಿತು. ಅಮೇರಿಕಾ ತಂಡವು ಅದ್ಭುತ ಪ್ರದರ್ಶನ ನೀಡಿತು. ಅಮೇರಿಕಾ ತಂಡಕ್ಕೆ ಯಾರ ಯೋಗದಾನವಿದೆಯೆಂದು ಇಡೀ ವಿಶ್ವವೇ ನೋಡಿದೆ. ವಿಶ್ವಕ್ಕೆ AI ಎಂದರೆ Artificial Intelligence. ಆದರೆ ನನ್ನ ಇಚ್ಛಾಶಕ್ತಿಯ ಅನುಸಾರ AI ಎಂದರೆ American - Indian. ಅಮೇರಿಕಾ – ಇಂಡಿಯಾ ಸೇರಿ ಒಂದು ಆತ್ಮವಾಗಿದೆ, ಇದೇ ವಿಶ್ವದ AI Power ಆಗಿದೆ.

ನಾನು ವಿಶ್ವದಲ್ಲಿ ಎಲ್ಲೇ ಪ್ರಯಾಣ ಮಾಡಿದರೂ ಅಲ್ಲಿನ ಎಲ್ಲಾ ನಾಯಕರು ಭಾರತೀಯ Diaspora (ವಲಸಿಗರ)ನ್ನು ಹೊಗಳುತ್ತಾರೆ. ನೆನ್ನೆಯಷ್ಟೇ ಅಧ್ಯಕ್ಷ ಜೋ ಬೈಡನ್ ತಮ್ಮ ಡಿಲಾವೆರ್‌ನಲ್ಲಿನ ನಿವಾಸಕ್ಕೆ ಕರೆದುಕೊಂಡು ಹೋಗಿದ್ದರು. ಅವರ ಆತ್ಮೀಯತೆ, ಸತ್ಕರಿಸಿದ ರೀತಿ ನನಗೆ ಒಂದು ಅವಿಸ್ಮರಣೀಯ



ಕ್ಷಣವಾಗಿತ್ತು. ಈ ಗೌರವ 140 ಕೋಟಿ ಭಾರತೀಯರದ್ದಾಗಿದೆ. 2024ನೇ ವರ್ಷವು ಇಡೀ ವಿಶ್ವಕ್ಕೆ ಪ್ರಮುಖವಾದದ್ದು. ಒಂದೆಡೆ ವಿಶ್ವದ ಅನೇಕ ರಾಷ್ಟ್ರಗಳ ನಡುವೆ ಸಂಘರ್ಷವಿದೆ, ಉದ್ವೇಗವಿದೆ. ಇನ್ನೊಂದೆಡೆ ಹಲವು ದೇಶಗಳಲ್ಲಿ ಪ್ರಜಾಪ್ರಭುತ್ವದ ಸಂಭ್ರಮವೋತ್ಸವವಾಗುತ್ತಿದೆ. ಭಾರತ ಮತ್ತು ಅಮೇರಿಕಾ ಪ್ರಜಾಪ್ರಭುತ್ವದ ಈ ಸಂಭ್ರಮಾಚರಣೆಯಲ್ಲೂ ಜೊತೆಯಾಗಿದೆ.

ಅಮೇರಿಕಾದ ಜನಸಂಖ್ಯೆಯ ಎರಡರಷ್ಟು ಮಂದಿ ಇಡೀ ಯೂರೋಪಿನ ಇಡೀ ಜನಸಂಖ್ಯೆಗಿಂತಲೂ ಅಧಿಕ ಮತದಾರರು ಭಾರತದಲ್ಲಿ ತಮ್ಮ ಮತ ಚಲಾಯಿಸಿದರು. ಭಾರತದ ಪ್ರಜಾಪ್ರಭುತ್ವವನ್ನು ವಿಮರ್ಶಿಸಿದಾಗ ಇನ್ನೂ ಗೌರವವೆನಿಸುತ್ತದೆ. ಮೂರು ತಿಂಗಳ ಮತ ಚಲಾವಣೆ ಪ್ರಕ್ರಿಯೆ, 1.5 ಕೋಟಿ ಚುನಾವಣಾ ಸಿಬ್ಬಂದಿ, 10 ಲಕ್ಷಕ್ಕೂ ಅಧಿಕ ಮತದಾನ ಕೇಂದ್ರ, 2,500ಕ್ಕೂ ಅಧಿಕ ರಾಜಕೀಯ ಪಕ್ಷಗಳು, 8,000ಕ್ಕೂ ಅಧಿಕ ಅಭ್ಯರ್ಥಿಗಳು, ವಿವಿಧ ಭಾಷೆಗಳ ಸಾವಿರಾರು ದಿನಪತ್ರಿಕೆಗಳು, ನೂರಾರು ರೇಡಿಯೋ ಸ್ಟೇಷನ್‌ಗಳು, ನೂರಾರು ಟಿವಿ ಮಾಧ್ಯಮಗಳು, ಕೋಟ್ಯಾಂತರ ಸಾಮಾಜಿಕ ಜಾಲತಾಣ ಖಾತೆಗಳು, ಲಕ್ಷಾಂತರ ಸಾಮಾಜಿಕ ಜಾಲತಾಣದ ಚ್ಯಾನಲ್‌ಗಳು ಇವೆಲ್ಲವೂ ಸೇರಿಕೊಂಡು ಭಾರತದ ಪ್ರಜಾಪ್ರಭುತ್ವವನ್ನು ರೋಚಕವನ್ನಾಗಿಸುತ್ತದೆ. ಇದು freedom of expressionನ ವಿಸ್ತರಿಸಿದ ಕಾಲಘಟ್ಟವಾಗಿದೆ. ಈ ಹಂತದ ಪರಿಶೀಲನೆಯೊಂದಿಗೆ ನಮ್ಮ ದೇಶದ ಚುನಾವಣೆ ಪ್ರಕ್ರಿಯೆ ನಡೆಯುತ್ತದೆ.

'ಅಬ್ ಕಿ ಬಾರ್ ಮೋದಿ ಸರ್ಕಾರ್'. ಮೂರನೇ ಬಾರಿ ನಮ್ಮ ಸರ್ಕಾರ ರಚನೆಯಾಗಿದೆ. ಈ ಮೂರನೇ ಅವಧಿಯಲ್ಲಿ ನಾವು ತುಂಬಾ ದೊಡ್ಡ ಗುರಿಯನ್ನು ಸಾಧಿಸಬೇಕಿದೆ. ನಮಗೆ ಮೂರು ಪಟ್ಟು ಶಕ್ತಿ, ಮೂರು ಪಟ್ಟು ವೇಗದಲ್ಲಿ ಮುನ್ನಡೆಯಬೇಕಿದೆ. PUSHP' ಎಂಬ ಶಬ್ದ ನಿಮಗೆ ತಿಳಿದೇ ಇದೆ. P - Progressive Bharat, U - Unstoppable Bharat, S - Spiritual Bharat H- Humanity Bharat, P - Prosperous Bharat. ಈ ಐದು ಅಂಶಗಳನ್ನೊಳಗೊಂಡಂತಹ ವಿಕಸಿತ ಭಾರತವನ್ನು ಕಟ್ಟಬೇಕಿದೆ.

ನಾನು ಸ್ವಾತಂತ್ರ್ಯ ನಂತರ ಜನಿಸಿದ ಭಾರತದ ಮೊಟ್ಟ ಮೊದಲ ಪ್ರಧಾನಿಯಾಗಿದ್ದೇನೆ. ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಕೋಟ್ಯಾಂತರ ಭಾರತೀಯರು ಸ್ವರಾಜ್ಯಕ್ಕಾಗಿ ತಮ್ಮ ಜೀವನದ ಬಲಿದಾನ ನೀಡಿದ್ದಾರೆ. ಅವರು ಎಂದಿಗೂ ಅವರ ಹಿತ, ಬೇಕು ಬೇಡಗಳ ಬಗ್ಗೆ ಯೋಚಿಸಲಿಲ್ಲ, ಕೇವಲ ದೇಶದ ಸ್ವಾತಂತ್ರ್ಯಕ್ಕಾಗಿ ಎಲ್ಲವನ್ನೂ ಮರೆತು, ತ್ಯಜಿಸಿ ಬ್ರಿಟಿಷರ ವಿರುದ್ಧ ಸೆಣೆಸಲು ಬಂದರು. ಇದಕ್ಕೆ ಬದಲಾಗಿ ಕೆಲವರಿಗೆ ಗಲ್ಲು ಶಿಕ್ಷೆ, ಕೆಲವರಿಗೆ ಗುಂಡು ಹೊಡೆದು ಸಾಯಿಸಲಾಯಿತು, ಕೆಲವರು ಜೀವನವನ್ನೆಲ್ಲಾ ಜೈಲಿನಲ್ಲಿಯೇ ಕಳೆದರು. ನಾವುಗಳು ದೇಶಕ್ಕಾಗಿ ಸಾಯಲಿಲ್ಲ, ಆದರೆ ನಾವು ದೇಶಕ್ಕಾಗಿ ಖಂಡಿತವಾಗಿಯೂ ಜೀವಿಸಬೇಕು. ಮೊದಲ ದಿನದಿಂದಲೂ ನನ್ನ ಮನಸ್ಸು, ನನ್ನ ಗುರಿ ಸ್ಪಷ್ಟವಾಗಿದೆ. ನಾನು ಸ್ವರಾಜ್ಯಕ್ಕಾಗಿ ಜೀವನ ಬಲಿದಾನ ಮಾಡಲಿಲ್ಲ, ಆದರೆ ನಾನು ಸುರಾಜ್ಯ ಹಾಗೂ ಸಮೃದ್ಧ ಭಾರತಕ್ಕಾಗಿ ಜೀವನವನ್ನು ಸಮರ್ಪಿಸಲು ನಿಶ್ಚಯಿಸಿದ್ದೇನೆ.

ಭಾರತ ಇಂದು ವಿಶ್ವದ ಅತೀ ಹೆಚ್ಚು ಯುವಕರನ್ನು ಹೊಂದಿರುವ ದೇಶವಾಗಿದೆ. ಭಾರತವು ತಾಕತ್ತಿನಿಂದ ಕೂಡಿ, ಕನಸುಗಳಿಂದ ತುಂಬಿ ತುಳುಕುತ್ತಿದೆ. ಪ್ರತಿ ದಿನ ಹೊಸ ಘಟನೆ, ಹೊಸ ಸುದ್ದಿ, ಇಂದೇ ಭಾರತಕ್ಕೆ chess world olympicನಲ್ಲಿ ಎರಡೂ ವಿಭಾಗಗಳಲ್ಲಿ ಚಿನ್ನದ ಪದಕ ದೊರೆತಿದೆ. 100 ವರ್ಷಗಳ ನಂತರ ಈ ಹೊಸ ಇತಿಹಾಸ ಸೃಷ್ಟಿಯಾಗಿದೆ. ಒಂದು ದಶಕದಲ್ಲಿ ಭಾರತ ಹತ್ತನೆಯ ಸ್ಥಾನದಿಂದ ಐದನೇ ಬೃಹತ್ ಆರ್ಥಿಕತೆಯ ಶಕ್ತಿಯಾಗಿ ಹೊರಹೊಮ್ಮಿದೆ. ಈಗ ಪ್ರತಿಯೊಬ್ಬನ ಕನಸು ಭಾರತವನ್ನು ಮೂರನೇ ಸ್ಥಾನಕ್ಕೆ ಏರಿಸುವುದಾಗಿದೆ. ಇಂದು ದೇಶದ ಅತಿ ದೊಡ್ಡ ವರ್ಗದ ಮೂಲ ಅವಶ್ಯಕತೆಗಳು ಪೂರೈಕೆ ಆಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಕೋಟ್ಯಾಂತರ ಜನರಿಗೆ ಶುದ್ಧ ಅಡಿಗೆ ಅನಿಲ ಸೌಲಭ್ಯ ದೊರೆತಿದೆ. ಶುದ್ಧ ಕುಡಿಯುವ ನೀರು ಸರಬರಾಜುಗೊಳ್ಳುತ್ತಿದೆ, ವಿದ್ಯುತ್ ಪೂರೈಕೆಯಾಗುತ್ತಿದೆ, ಕೊಟ್ಯಂತರ ಶೌಚಾಲಯಗಳು ನಿರ್ಮಾಣವಾಗಿದೆ. ಅಂತಹ ಕೊಟ್ಯಾಂತರ ಜನರು ಉತ್ತಮ ಗುಣಮಟ್ಟದ ಜೀವನ ಬಯಸುತ್ತಿದ್ದಾರೆ. ಈಗ ಭಾರತದ ಜನರಿಗೆ ಕೇವಲ ರಸ್ತೆಗಳಲ್ಲ ಬದಲಿಗೆ ಅತ್ಯಾಧುನಿಕ ಎಕ್ಸ್‌ಪ್ರೆಸ್ ಹೆದ್ದಾರಿಗಳು ಬೇಕಾಗಿದೆ. ಕೇವಲ ರೈಲ್ವೆ ಸಂಪರ್ಕವಲ್ಲದೆ ಅವರಿಗೆ ಅತಿ ವೇಗದ ರೈಲುಗಳ ಅವಶ್ಯಕತೆಯಿದೆ. ಭಾರತದ ಪ್ರತಿಯೊಂದು ನಗರದಲ್ಲಿ ಒಂದು ಸ್ವಂತ ವಿಮಾನ ನಿಲ್ದಾಣ, ಮೆಟ್ರೋ ರೈಲಿನ ವ್ಯವಸ್ಥೆ ಬಯುಸುತ್ತದೆ. ಭಾರತದ ಪ್ರತಿಯೊಂದು ಹಳ್ಳಿ, ನಗರಗಳು ವಿಶ್ವದ ಉತ್ತಮ ಗುಣಮಟ್ಟದ ಅನುಕೂಲತೆಗಳಿರಬೇಕೆಂದು ಬಯಸುತ್ತಿವೆ. ಇದರ ಪರಿಣಾಮವನ್ನು ನಾವೀಗ ಭಾರತದಲ್ಲಿ ನೋಡುತ್ತಿದ್ದೇವೆ. 2014ರಲ್ಲಿ ಭಾರತದಲ್ಲಿ ಕೇವಲ 5 ನಗರಗಳಲ್ಲಿ ಮೆಟ್ರೋ ವ್ಯವಸ್ಥೆ ಇತ್ತು. ಇಂದು 23 ನಗರಗಳಲ್ಲಿ ಮೆಟ್ರೋ ರೈಲು ಸಂಚರಿಸುತ್ತಿದೆ. 2014ರಲ್ಲಿ ಭಾರತದ 70 ನಗರಗಳಲ್ಲಿ ಮಾತ್ರ ವಿಮಾನ ನಿಲ್ದಾಣಗಳಿದ್ದವು, ಆದರೆ ಇಂದು 140ಕ್ಕೂ ಹೆಚ್ಚು ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲಾಗಿದೆ. 2014ರಲ್ಲಿ 100ಕ್ಕೂ ಕಡಿಮೆ ಗ್ರಾಮ ಪಂಚಾಯಿತಿಗಳಲ್ಲಿ ಬ್ರಾಡ್‌ಬ್ಯಾಂಡ್ ಸಂಪರ್ಕ ಹೊಂದಿತ್ತು. ಆದರೆ ಇಂದು 2 ಲಕ್ಷಕ್ಕೂ ಅಧಿಕ ಗ್ರಾಮ ಪಂಚಾಯಿತಿ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಹೊಂದಿದೆ. 2014ರಲ್ಲಿ ಭಾರತದಲ್ಲಿ 14 ಕೋಟಿಗಳಷ್ಟು ಅಡುಗೆ ಅನಿಲ ಗ್ರಾಹಕರಿದ್ದರು, ಆದರೆ ಇಂದು 31 ಕೋಟಿಗೂ ಅಧಿಕ ಅಡುಗೆ ಅನಿಲ ಗ್ರಾಹಕರಿದ್ದಾರೆ.

ಭಾರತವು ಇಂದು ಅವಕಾಶಗಳ ಪುಣ್ಯಭೂಮಿಯಾಗಿದೆ. Land of Opportunities. ಈಗ ಭಾರತ ಅವಕಾಶಗಳ ನಿರೀಕ್ಷೆ ಮಾಡುವುದಿಲ್ಲ, ಬದಲಿಗೆ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಎಲ್ಲ ವಿವಿಧ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಸೃಷ್ಟಿಸುವ ಹೊಸ Launching Padನ್ನು ಪ್ರಾರಂಭಿಸಿದೆ. ನಾವು ಬಡವರನ್ನು ಸಶಕ್ತರನ್ನಾಗಿಸುವಲ್ಲಿ ಗುರಿಯನಿಟ್ಟುಕೊಂಡೆವು. 50 ಕೋಟಿಗೂ ಅಧಿಕ ಜನರನ್ನು ಬ್ಯಾಂಕಿಂಗ್ ವ್ಯವಸ್ಥೆಗೆ ಸೇರಿಸಿದೆವು. 55 ಕೋಟಿಗೂ ಅಧಿಕ ಜನರಿಗೆ 5 ಲಕ್ಷ ರೂಗಳ ವರೆಗೆ ಉಚಿತ ವೈದ್ಯಕೀಯ ವ್ಯವಸ್ಥೆ ನೀಡಿದೆವು. 4 ಕೋಟಿಗೂ ಅಧಿಕ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಿದೆವು. ಯಾವುದೇ ಅಡಮಾನ ರಹಿತವಾದ ಸಾಲ ಸೌಲಭ್ಯ ನೀಡಿ Ease OF Credit (ಸುಲಭ ರೀತಿಯಲ್ಲಿ ಸಾಲ) ಜೋಡಿಸಿದೆವು.



ಸರ್ಕಾರ ನಿರ್ಮಾಣ ಮಾಡಿದ ಮನೆಗಳು ಮಹಿಳೆಯರ ಹೆಸರಿನಲ್ಲಿ ದಾಖಲಿಸಲಾಗಿದೆ. ಕೊಟ್ಯಂತರ ಬ್ಯಾಂಕ್ ಖಾತೆಗಳಲ್ಲಿ ಅರ್ಧಕ್ಕೂ ಹೆಚ್ಚು ಖಾತೆಗಳು ಮಹಿಳೆಯರು ತೆರೆದಿದ್ದಾರೆ. ಹತ್ತು ವರ್ಷಗಳಲ್ಲಿ ಭಾರತದ 10 ಕೊಟಿ ಮಹಿಳೆಯರು Micro Enterprenuer Schemeದೊಂದಿಗೆ ಬೆಸೆದುಕೊಂಡಿದ್ದಾರೆ. ನಾವು ಭಾರತದಲ್ಲಿ ಕೃಷಿಯನ್ನು ತಂತ್ರಜ್ಞಾನದೊಂದಿಗೆ ಜೋಡಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಅದರಲ್ಲಿ ಇಂದು ಕೃಷಿಯಲ್ಲಿ ಡ್ರೋನ್‌ಗಳ ಬಳಕೆ ಎಲ್ಲೆಡೆ ಸುವ್ಯವಸ್ಥಿತವಾಗಿ ನಡೆಯುತ್ತಿದೆ, ಇದರ ಜವಾಬ್ದಾರಿಯನ್ನು ಗ್ರಾಮೀಣ ಮಹಿಳೆಯರು ಹೊತ್ತಿದ್ದಾರೆ, ಇದು ಹೆಮ್ಮೆಯ ವಿಷಯವಾಗಿದೆ. ನಾವು ಸಾವಿರಾರು ಮಹಿಳೆಯರನ್ನು



ಡ್ರೋನ್ ಪೈಲೆಟ್‌ಗಳನ್ನಾಗಿಸುತ್ತಿದ್ದೇವೆ. ಕೃಷಿಯಲ್ಲಿ ತಂತ್ರಜ್ಞಾನದ ಒಂದು ದೊಡ್ಡ ಕ್ರಾಂತಿಯನ್ನು ಗ್ರಾಮೀಣ ಮಹಿಳೆಯರು ಮುನ್ನಡೆಸುತ್ತಿದ್ದಾರೆ.

ಹಿಂದೆಲ್ಲಾ ಕಡೆಗಣಿಸಲಾಗಿದ್ದ ಕ್ಷೇತ್ರಗಳು ಇಂದು ದೇಶದ ಆದ್ಯತೆಯಾಗಿದೆ. ಭಾರತದ 5ಜಿ ಮಾರುಕಟ್ಟೆ ಅಮೆರಿಕಾಕ್ಕಿಂತ ದೊಡ್ಡದಾಗಿದೆ. ಈಗ ಭಾರತ ಮೇಡ್ ಇನ್ ಇಂಡಿಯಾ 6ಜಿ ಕುರಿತಾಗಿ ಕೆಲಸ ಮಾಡುತ್ತಿದೆ. ಇಂದು ವಿಶ್ವದ ಪ್ರತಿಯೊಂದು ಮೊಬೈಲ್ ಬ್ರ್ಯಾಂಡ್ ಮೇಡ್ ಇನ್ ಇಂಡಿಯಾ ಆಗಿದೆ. ಇಂದು ಭಾರತ ವಿಶ್ವದ ಎರಡನೆಯ ಅತಿ ಹೆಚ್ಚು ಮೊಬೈಲ್ ತಯಾರಿಸುವ ದೇಶವಾಗಿದೆ. ನಾನು ಬಂದ ಕಾಲಘಟ್ಟದಲ್ಲಿ ಭಾರತ ಮೊಬೈಲ್‌ನ್ನು ಆಮದು ಮಾಡಿಕೊಳ್ಳುತ್ತಿತ್ತು. ಆದರೆ ಇಂದು ನಾವು ಮೊಬೈಲ್ ರಫ್ತು ಮಾಡುತ್ತಿದ್ದೇವೆ.

ನಾವು ಸೆಮಿ ಕಂಡಕ್ಟರ್ ವಲಯವನ್ನೂ ಸಹ ವೇಗವಾಗಿ ಅಭಿವೃದ್ಧಿ ಹೊಂದುವ ಸಲುವಾಗಿ ಬಳಸಿಕೊಂಡಿದ್ದೇವೆ. ಕಳೆದ ವರ್ಷ ಜೂನ್‌ನಲ್ಲಿ ಭಾರತದಲ್ಲಿ ಸೆಮಿಕಂಡಕ್ಟರ್ ವಲಯಕ್ಕೆ incentive ಘೋಷಿಸಿದ್ದೆವು. ಇದಾದ ಕೆಲವೇ ತಿಂಗಳುಗಳ ನಂತರ ಮೈಕ್ರಾನ್ ಸಂಸ್ಥೆಯ ಸೆಮಿಕಂಡಕ್ಟರ್ ಘಟಕದ ಶಿಲಾನ್ಯಾಸವೂ ಜರುಗಿತು. ಇಲ್ಲಿವರೆಗೆ ಭಾರತದಲ್ಲಿ ಈ ರೀತಿಯ 5 ಯುನಿಟ್‌ಗಳನ್ನು ಸ್ಥಾಪಿಸಲಾಗಿದೆ. ಇನ್ನು ಕೆಲವೇ ಸಮಯದಲ್ಲಿ ಮೇಡ್ ಇನ್ ಇಂಡಿಯಾ ಚಿಪ್ ಅಮೆರಿಕಾದಲ್ಲೂ ಬಳಕೆಯಾಗುವುದು ಅತೀ ಹತ್ತಿರದಲ್ಲೇ ಇದೆ. ಈ ಸಣ್ಣದೊಂದು ಚಿಪ್ ಭಾರತದ ಅಭಿವೃದ್ಧಿಯ ಹಾರಾಟವನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಲಿದೆ.

ನಮ್ಮ Green Energy Transition Program ಇದರ ಬಹು ದೊಡ್ಡ ಉದಾಹರಣೆ. ವಿಶ್ವದ 17% ಜನಸಂಖ್ಯೆ ಹೊಂದಿದ್ದರೂ ಸಹ Global Carbon Emissionನಲ್ಲಿ ಭಾರತದ ಪಾಲು ಕೇವಲ 4% ಆಗಿದೆ. ಪರಿಸರದೊಂದಿಗಿನ ಸಂಸ್ಕಾರವಂತ ಸಂಬಂಧ ಪರಿಣಾಮವಾಗಿಯೇ ನಾವು Solar, Wind, Hydro, Green-Hydrogen ಹಾಗೂ Nuclear Energy ಮೇಲೆ ಬಂಡವಾಳ ಹೂಡಿಕೆ ಮಾಡುತ್ತಿದ್ದೇವೆ. 2014ರ ನಂತರ ಭಾರತ ತನ್ನ ಸೌರಶಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಶೇ 30ರಷ್ಟು ಹೆಚ್ಚಿಸಿದೆ. ನಾವು ದೇಶದ



ಪ್ರತಿ ಮನೆಯನ್ನು Solar Power Home ಮಾಡಲು ಶ್ರಮಿಸುತ್ತಿದ್ದೇವೆ. ಇದಕ್ಕಾಗಿ Roof Top Solar ಎಂಬ ಮಿಷನ್‌ನ್ನು ಪ್ರಾರಂಭಿಸಿದ್ದೇವೆ. ಇಂದು ನಮ್ಮ ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣಗಳನ್ನು Solarize ಮಾಡಲು ಹೊರಟಿದ್ದೇವೆ. ಇಡೀ ವಿಶ್ವದ ವಿದ್ಯಾರ್ಥಿಗಳು ಭಾರತಕ್ಕೆ ಬಂದು ಉನ್ನತ ವ್ಯಾಸಂಗ ಮಾಡುವ ರೀತಿಯಲ್ಲಿ ಒಂದು ವಿನೂತನ Ecosystem ರಚಿಸುತ್ತಿದ್ದೇವೆ. ಕಳೆದ 10 ವರ್ಷಗಳಲ್ಲಿ ಭಾರತದಲ್ಲಿ ಪ್ರತಿಯೊಂದು ವಾರಕ್ಕೊಮ್ಮೆಯಂತೆ ಒಂದು ವಿಶ್ವವಿದ್ಯಾನಿಲಯ ರಚನೆಯಾಗಿದೆ.

ಹತ್ತು ವರ್ಷಗಳಲ್ಲಿ ಐಐಐಟಿಗಳ ಸಂಖ್ಯೆ 9 ರಿಂದ 25 ಆಗಿವೆ, ಐಐಎಂ 13 ರಿಂದ 21, ಎಐಐಎಂಎಸ್ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿ 22 ಆಗಿದೆ. ವೈದ್ಯಕೀಯ ಕಾಲೇಜುಗಳ ಸಂಖ್ಯೆ ದ್ವಿಗುಣವಾಗಿದೆ. ವಿಶ್ವದ ಅತ್ಯುನ್ನತ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳು ಸಹ ಭಾರತಕ್ಕೆ ಪ್ರವೇಶ ಮಾಡುತ್ತಿದೆ. ಭಾರತ ಎಲ್ಲರೊಂದಿಗೆ ಸಮಾನ ಬಾಂಧವ್ಯದೊಂದಿಗೆ ಮುನ್ನಡೆಯುತ್ತಿದೆ. ನಾವು Global Sammitನ ಎತ್ತರದ ಧ್ವನಿಯಾಗಿದ್ದೇವೆ. ಭಾರತದ ನೇತೃತ್ವದಲ್ಲಿ ಆಫ್ರಿಕ ಸಮೂಹ ರಾಷ್ಟ್ರಗಳಿಗೆ ಜಿ-20 ಸದಸ್ಯತ್ವ ದೊರೆತಿದೆ.

ನಾವು ಬೆಂಕಿಯ ಹಾಗೆ ಸುಡುವವರಲ್ಲ, ಆದರೆ ಸೂರ್ಯನಂತೆ ಬೆಳಕು ಚೆಲ್ಲುವ ಜನರಿದ್ದೇವೆ. ನಾವು ವಿಶ್ವದ ಮೇಲೆ ನಮ್ಮ ಒತ್ತಡ ಹೇರುವುದಿಲ್ಲ, ವಿಶ್ವದ ಸಮೃದ್ಧಿಗಾಗಿ ನಮ್ಮ ಪಾಲುದಾರಿಕೆಯನ್ನು ವೃದ್ಧಿಸಲು ಇಚ್ಛಿಸುತ್ತೇವೆ. ಯೋಗಕ್ಕೆ ವೇಗ ನೀಡಲು, ಸಿರಿಧಾನ್ಯಗಳನ್ನು ಉತ್ತೇಜಿಸಲು, ಭಾರತ ಜಿಡಿಪಿ ಕೇಂದ್ರೀಕೃತ ಅಭಿವೃದ್ಧಿಯ ಜೊತೆಗೆ ಮಾನವೀಯ ಕೇಂದ್ರಿತ ಅಭಿವೃದ್ಧಿಗಾಗಿ ಆದ್ಯತೆ ನೀಡುತ್ತಿದೆ. ನಾನು ನಿಮ್ಮಲ್ಲೂ Mission Lifeನ್ನು ಹೆಚ್ಚಾಗಿ ಜಾಗರೂಕಗೊಳಿಸಿ, ನಮ್ಮ ಜೀವನಶೈಲಿಯಲ್ಲಿ ಕೊಂಚ ಬದಲಾವಣೆ ತರುವ ಮೂಲಕ ಪರಿಸರವನ್ನು ಸಂರಕ್ಷಿಸುವಲ್ಲಿ ಸಹಾಯ ಮಾಡಬಹುದು. ಈಗ ಭಾರತದಲ್ಲಿ 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನ ಜಾರಿಯಲ್ಲಿದೆ. ನೀವೆಲ್ಲರೂ ಸಹ ಇಲ್ಲಿ ಈ ರೀತಿಯ ಅಭಿಯಾನ ನಡೆಸಿ. ಇದು ನಮ್ಮ ಹೆತ್ತ ತಾಯಿ ಹಾಗೂ ಭೂತಾಯಿಯ ಗೌರವವನ್ನು ಹೆಚ್ಚಿಸುತ್ತದೆ.



# ಅಂದಿನ ಕಾಂಗ್ರೆಸ್ ಮನೆಯ ಗಣಪನನ್ನು ಬೀದಿಗೆ ತಂದಿತು

**ಕಳೆದ ಗಣೇಶೋತ್ಸವದ ಸಂದರ್ಭದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಗಣೇಶೋತ್ಸವವೊಂದರಲ್ಲಿ ಭಾಗವಹಿಸಿದ್ದನ್ನು ಕಾಂಗ್ರೆಸ್ ಕಟುವಾಗಿ ಟೀಕಿಸಿತು. ವಿಚಿತ್ರವೆಂದರೆ ಆ ಉತ್ಸವದಲ್ಲಿ ಮೋದಿಯವರು ತಿಲಕರು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಗಣಪನ ಪಾತ್ರದ ಕುರಿತು ಮಾತುಗಳನ್ನಾಡಿದ್ದರು. ಅದೂ ಕೂಡ ಕಾಂಗ್ರೆಸಿಗೆ ಅಸಹನೀಯವಾಯಿತೆಂದರೆ ಕಾಂಗ್ರೆಸಿಗರು ಎಂಥ ದೇಶವನ್ನು ಕಟ್ಟಲು ಹೊರಟಿದ್ದಾರೆ?**
**ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳು ತಮ್ಮ ಮನೆಯಲ್ಲಿ ಕೂರಿಸಿದ ಗಣಪತಿಯನ್ನೂ ಕಾಂಗ್ರೆಸಿಗರು ವಿರೋಧಿಸಿದ್ದರು!**
**ಇಡೀ ದೇಶ ವಿದ್ಯೆಗೆ, ಬುದ್ಧಿಗೆ ಅಧಿದೇವತೆ ಎಂದು ಆರಾಧಿಸುವ ಗಣಪತಿಯನ್ನು ಕಾಂಗ್ರೆಸ್ ವಿರೋಧಿಸುತ್ತಾರೆಂದರೆ ಏನನ್ನಬೇಕು? ನ್ಯಾಯಾನ್ಯಾಯವನ್ನು ತೀರ್ಮಾನಿಸುವ ಗಣಪತಿಯ ಆರಾಧನೆಯನ್ನು ನ್ಯಾಯಮೂರ್ತಿಗಳು ಮಾಡಿದರೆ ದೇಶದ ಗೌರವ-ಘನತೆಗೆ ಧಕ್ಕೆ ಎನ್ನುವ ವಾದಕ್ಕೇನು ಬಲವಿದೆ?**



**ಸಂತೋಷ್ ತಮ್ಮಯ್ಯ**
ಖ್ಯಾತ ಲೇಖಕರು



# ಇಂದಿನ ಕಾಂಗ್ರೆಸ್ ಬೀದಿಯ ಗಣಪನನ್ನು ಜೈಲಿಗಟ್ಟಿತು!

ಇಂದಿನ ಕಾಂಗ್ರೆಸಿಗೆ ತನ್ನನ್ನು ತಾನು ಅದನ್ನು ಪುರಾತನ ಎಂದುಕೊಳ್ಳುವುದರಲ್ಲಿ ಸುಖ ಕಾಣುತ್ತಿದೆ. ಏಕೆಂದರೆ ಅದರಲ್ಲಿ ಅದಕ್ಕೆ ಲಾಭವಿದೆ. ಆ ಮೂಲಕ ತಾವು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು, ದೇಶಹಿತವನ್ನು ಬಯಸುವವರು ಎಂಬ ಬ್ರ್ಯಾಂಡನ್ನು ಅದು ಒತ್ತಾಯಪೂರ್ವಕವಾಗಿ ಹೇರಲು ಅದು ಬಯಸುತ್ತದೆ. ಏನೇ ಆದರೂ ದೇಶದ ಪ್ರಜ್ಞಾವಂತರಿಗೆ ಕಾಂಗ್ರೆಸಿನ ಬಗ್ಗೆ ಗೊಂದಲಗಳಂತೂ ಇದ್ದೇ ಇದೆ. ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸಿನ ಚುಕ್ಕಾಣಿಯೇಕೆ ಒಂದು ಕುಟುಂಬದ ಸ್ವತ್ತಾಯಿತು? ಬುದ್ಧಿವಂತರೆಲ್ಲರೂ ಕಾಂಗ್ರೆಸನ್ನು ತ್ಯಜಿಸಿದರೇಕೆ? ಓಲೈಕೆಯ ರಾಜಕೀಯದ ಪ್ರಾಥಮಿಕ ಪಾಠ ಕಾಂಗ್ರೆಸಿಗೆ ಸ್ವಾತಂತ್ರ್ಯಪೂರ್ವದಲ್ಲೇ ಹೇಗಾಯಿತು ಆಗಿತ್ತು ಎಂಬುದಕ್ಕೆ ಚರಿತ್ರೆ ಸಾಕ್ಷಿ ಸಮೇತವಾಗಿ ಉತ್ತರಗಳನ್ನು ಕೊಡುತ್ತದೆ. ಜೊತೆಗೆ ಇಂದಿನ ಕಾಂಗ್ರೆಸಿನ ವರ್ತನೆಗಳೆಲ್ಲವೂ ಹಳೆಯ ಕಾಂಗ್ರೆಸಿನ ಎಲ್ಲಾ ಅಪಸವ್ಯಗಳಿಗೆ, ಗುಂಪುಗಾರಿಕೆಗಳಿಗೆ ಹೇಗೆ ಪ್ರೇರಕವಾಗಿದ್ದವು ಎಂಬುದನ್ನು ಕೂಡ ತಿಳಿಸುತ್ತದೆ.

ಅಂಥ ಹಲವಾರು ಪುರಾವೆಗಳಲ್ಲಿ ಒಂದು ಸಾರ್ವಜನಿಕ ಗಣೇಶೋತ್ಸವದ ಬಗೆಗಿನ ಕಾಂಗ್ರೆಸಿನ ಧೋರಣೆ.

1893ರಲ್ಲಿ ಬಾಲಗಂಗಾಧರ ತಿಲಕರು ಮನೆಯ ಗಣಪನನ್ನು ಬೀದಿಗೆ ತಂದರು ಎಂಬುದರ ಬಗ್ಗೆ ಯಾರಿಗೂ ಸಂದೇಹಗಳಿಲ್ಲ. ಅದನ್ನು ಕಾಂಗ್ರೆಸ್ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿದ್ದೂ ಇದೆ. ಏಕೆಂದರೆ ತರುಣರಾಗಿದ್ದ ತಿಲಕರು 1890ರಲ್ಲಿ ಕಾಂಗ್ರೆಸಿಗೆ ಸೇರ್ಪಡೆಗೊಂಡಿದ್ದರು. ಕಾಂಗ್ರೆಸ್ ಸೇರ್ಪಡೆಗೊಂಡ ಆರಂಭದ ದಿನಗಳಿಂದಲೇ ತಿಲಕರು ತಮ್ಮ ಪಾಂಡಿತ್ಯ, ಚಿಂತನಶೀಲತೆ ಮತ್ತು ವೈಚಾರಿಕತೆಗಳಿಂದ ಕಾಂಗ್ರೆಸಿನಲ್ಲಿ ತರುಣ ನಾಯಕನ ಸ್ಥಾನವನ್ನು ಪಡೆದುಕೊಂಡಿದ್ದರು. ಪುಣೆಯಂಥ ಕ್ರಾಂತಿಯ ಗೂಡಿಯಲ್ಲೂ ಅವರು ತಮ್ಮದೇ ಛಾಪನ್ನು ಹೊಂದಿದ್ದರು. ಆ ಹೊತ್ತಲ್ಲಿ ಕಾಂಗ್ರೆಸ್ ವೈಚಾರಿಕ ಬಲದ ಮೇಲೆ ಸ್ವಾತಂತ್ರ್ಯ ಹೋರಾಟದಲ್ಲಿ ನಿರತವಾಗಿತ್ತು. ಗಾಂಧಿಯಿನ್ನೂ ಚಳವಳಿಗೆ ಪ್ರವೇಶಿಸಿರಲಿಲ್ಲ. ಆದರೂ ಕಾಂಗ್ರೆಸ್ ತಮ್ಮ ವಿಚಾರಬೇಧಗಳಿಂದ ಎರಡು ಹೋಳಾಗಿ ಮುಂದೊಂದು ದಿನ ಸಾವಿರ ಹೋಳಾಗುವ ಭವಿಷ್ಯಕ್ಕೆ ಮುನ್ನುಡಿ ಬರೆಯಲಾರಂಭಿಸಿತ್ತು. ಇಂದಿನ ಎಲ್ಲಾ ಅವಗುಣಗಳು ಅಂದೇ ಕಾಂಗ್ರೆಸಿನ ಒಂದು ಗುಂಪಿನಲ್ಲಿ ಮೊಳಕೆಯೊಡೆಯಲಾರಂಭಿಸಿತ್ತು.

ಅಂಥ ಹೊತ್ತಲ್ಲಿ ರಾಜಕೀಯಕ್ಕೆ ಇಳಿದಿದ್ದ ತಿಲಕರು ಮಹಾ ಮೇಧಾವಿಯಾಗಿದ್ದರು. ಭವಿಷ್ಯದ ಭಾರತದ ಬಗೆಗೆ ಸ್ಪಷ್ಟತೆಯಿದ್ದ ಅವರು ಅಪಾರ ಅಧ್ಯಯನ ಮತ್ತು ಚಿಂತನ ಶಕ್ತಿಯ ಬಲದಿಂದ ಸಮಾಜ ವ್ಯವಸ್ಥೆ ಮತ್ತು ದೇಶದ ಚಿತ್ತಮಾನಸಿಕತೆಯನ್ನು ಆಳವಾಗಿ ಅರಿತುಕೊಂಡಿದ್ದರು. ಮಂದಗಾಮಿಗಳ ಗುಂಪು ಮತ್ತು ತೀವ್ರಗಾಮಿಗಳ ಗುಂಪುಗಳಿದ್ದರೂ ಅದಿನ್ನೂ ತೀವ್ರವಾಗಿ ಬೇರೆಬೇರೆಯಾಗಿರಲಿಲ್ಲ. ದಿನಕಳೆದಂತೆ ಒಂದು ಗುಂಪಿನ ಒತ್ತಾಯ, ಬೇಡಿಕೆ, ಠರಾವು, ದುಂಡುಮೇಜು...ತಿಲಕರಿಗೆ ಸರಿಹೋಗಲಿಲ್ಲ. ಯಾವುದು ಈ ಮಣ್ಣಿನ ಅಂತಃಸತ್ತ್ವವಾಗಿದೆಯೋ ಅದನ್ನು ಜಾಗೃತಿಗೊಳಿಸದೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂದು ಭಾವಿಸಿದರು. ಸ್ವದೇಶಿ ಚಳವಳಿಗೆ ವೇಗವನ್ನು ನೀಡಲಾರಂಭಿಸಿದರು. ಆದರೆ ಅಂದಿನ ಭಾರತದ ಸಮಾಜ ವ್ಯವಸ್ಥೆ, ಸಮಾಜದ ತಥಾಕಥಿತ ವರ್ಗಗಳಲ್ಲಿದ್ದ ಮೌಢ್ಯಗಳು ಅದಕ್ಕೆ ಅಡ್ಡಿಯಾಗಿದ್ದವು. ಆಗ ಅವರಿಗೆ ಕಂಡಿದ್ದೇ

ಮನೆಯೊಳಗಿನ ಗಣಪ.

ಮಹಾರಾಷ್ಟ್ರ ಸಮಾಜ ಶಿವಾಜಿಯ ಕಾಲದಿಂದಲೂ ಗಣಪತಿಯ ಆರಾಧನೆಯನ್ನು ಮಾಡುತ್ತಿತ್ತು. ಕಾಲಕಳೆದಂತೆ ಮೇಲ್ವರ್ಗದ ಕೆಲವು ಸಮುದಾಯಗಳಿಗೆ ಅದು ಸೀಮಿತವೂ ಆಯಿತು. ಆದರೆ ತಿಲಕರಿಗೆ ಗಣಪ ಸದಾ ಕಾಲಕ್ಕೂ ಸಕಲರನ್ನೂ ಒಗ್ಗೂಡಿಸುವ ಅಧಿವೇವತೆಯಾಗಿ ಕಂಡ. ತೀವ್ರಗಾಮಿ ಕಾಂಗ್ರೆಸಿನ ಸಿದ್ಧಾಂತಗಳಿಗೆ ಹೇಳಿಮಾಡಿಸಿದಂತಿದ್ದ ಗಣಪನನ್ನು ತಿಲಕರು ನೇರವಾಗಿ ಬೀದಿಗೆ ತಂದರು. ಮನೆಯ ಉತ್ಸವವನ್ನು ಊರಿನ ಉತ್ಸವವಾಗಿ ಮಾಡಲು ನಿರ್ಧರಿಸಿದ್ದರು. ತಿಲಕರ ಈ ನಿರ್ಧಾರ ಅಂದಿನ ತರುಣವರ್ಗಕ್ಕೆ ಅಪಾರ ಉತ್ಸಾಹವನ್ನು ತಂದರೆ ಇನ್ನೊಂದೆಡೆ ಸವಾಲುಗಳೇ ಹೆಚ್ಚಿದ್ದವು. ಒಂದೆಡೆ ತಿಲಕರು ಸಂಪ್ರದಾಯವಾದಿಗಳ ವಿರೋಧವನ್ನು ಎದುರಿಸಬೇಕಾಯಿತು.

ಇನ್ನೊಂದೆಡೆ ಮಂದಗಾಮಿಗಳು ಮತ್ತಿತರರಿಂದ ಗಣಪತಿಯನ್ನು ಸ್ವಾತಂತ್ರ್ಯ ಚಳವಳಿಗೆ ತಂದರೆ ಮೂರ್ತಿಪೂಜೆಯನ್ನು ಅಲ್ಲಗೆಳೆಯುವ ಅಲ್ಪಸಂಖ್ಯಾತ ಸಮುದಾಯಕ್ಕೆ ಬೇಸರವಾಗದೆ? ಅವರು ಕೆರಳಲಾರರೇ?-ಎಂದೂ ವಿರೋಧಿಸತೊಡಗಿದರು. ಆದರೆ ತಿಲಕರ ಗುಂಪಿಗೆ ಗಣಪತಿಯು ಮೂರ್ತಿ ಮಾತ್ರ ಆಗಿರಲಿಲ್ಲ. ಒಂದು ವೇಳೆ ಮೂರ್ತಿಪೂಜೆಯನ್ನು ವಿರೋಧಿಸುವವರು ಉತ್ಸವವನ್ನು ವಿರೋಧಿಸಿದರೆ ಅಂಥವರು ದೇಶವನ್ನು, ಅದರ ಸ್ವಾತಂತ್ರ್ಯವನ್ನು ಗೌರವಿಸುವುದರಲ್ಲೇ ಸಂದೇಹವಿದೆ ಎಂದರು.

ಯಾವ ಬೆದರಿಕೆಗಳಿಗೂ ಸೊಪ್ಪು ಹಾಕದ ತಿಲಕರು ಒಂದು ದಿನ ಪೂಜಿಸಲ್ಪಡುತ್ತಿದ್ದ ಗಣಪನನ್ನು 10 ದಿನಗಳ ಉತ್ಸವವನ್ನಾಗಿ ಮಾಡಿದರು. ಜೊತೆಗೆ ಮೇಲ್ವರ್ಗದ ದೇವರೆಂದುಕೊಂಡಿದ್ದವನನ್ನು ಇಡೀ ಸಮಾಜದ ಉತ್ಸವವನ್ನಾಗಿ ಮಾಡಿದರು. ಪ್ರತಿಷ್ಠಾಪಿಸಲ್ಪಟ್ಟ ಒಂದೊಂದು ಗಣಪತಿಗೂ ಒಂದೊಂದು ಗಣೇಶ ಮಂಡಳಿಯನ್ನು ರಚಿಸಿದರು. ಆ ಮಂಡಳಿ ಉತ್ಸವ ಮುಗಿದರೂ ಅಸ್ತಿತ್ವದಲ್ಲಿರುವ ಪರಂಪರೆಗೆ ನಾಂದಿ ಹಾಡಿದರು. ಬ್ರಿಟಿಷ್ ಸರ್ಕಾರ ವಿಧಿಸಿದ್ದ ಜನ ಸೇರಬಾರದು ಎಂಬ ನಿಯಮವನ್ನು ನಾಜೂಕಾಗಿ ನಿಭಾಯಿಸಿದರು. ಜನರು ಗಣಪತಿ ಉತ್ಸವದಲ್ಲಿ ವಿಜೃಂಭಣೆಯಿಂದ ಪಾಲ್ಗೊಂಡರು. ಹತ್ತು ದಿನಗಳ ಕಾಲ ಸಾಂಸ್ಕೃತಿಕ ಉತ್ಸವವನ್ನಾಗಿ ಆಚರಿಸಿದರು. ಗಣಪತಿಯ ಮೂಲಕ ಮಣ್ಣಿನ ಮೂಲ ಗುಣವನ್ನು ಜನರು ಹೊತ್ತುಹೋದರು. ಗಣಪತಿ ಉತ್ಸವದ ಮೂಲಕ ಜನರಲ್ಲಿ ರಾಜಕೀಯ ಪ್ರಜ್ಞೆ ಮತ್ತು ಸ್ವಾಭಿಮಾನಗಳು ಬೆಳೆದವು.

ಸಾರ್ವಜನಿಕ ಗಣೇಶೋತ್ಸವ ಆರಂಭವಾದ ಮರುವರ್ಷವೇ ನಿರೀಕ್ಷೆಯಂತೆ ಮುಸ್ಲಿಮರಿಂದ ದಾಳಿ ನಡೆಯಿತು. ಗಣಪತಿ ಮಂಡಲಗಳು ಕಾಂಗ್ರೆಸ್ ಕಾರ್ಯಾಲಯಗಳಾದವು. ನಿರಂತರ ಕಾರ್ಯಚಟುವಟಿಕೆಗಳು ನಡೆಯಲಾರಂಭಿಸಿದವು. ಸ್ವಾತಂತ್ರ್ಯ ಚಳವಳಿಗೆ ಇದು ವೇಗವನ್ನು ಕೊಟ್ಟಿತು. ಗಣಪತಿ ಉತ್ಸವ ಸ್ವದೇಶಿ ಚಳವಳಿಯಾಗಿ ಬದಲಾಯಿತು.

ಕ್ರಮೇಣ ಕಾಂಗ್ರೆಸಿನ ಮಂದಗಾಮಿಗಳೂ ತೀವ್ರಗಾಮಿಗಳ ಗುಂಪಿಗೆ ಸೇರ್ಪಡೆಯಾಗಲಾರಂಭಿಸಿದರು. ಅದರ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಗಣಪತಿ ಉತ್ಸವಗಳಿಗೆ ಕಟ್ಟುನಿಟ್ಟಿನ ನಿಯಮಾವಳಿಗಳನ್ನು ರೂಪಿಸಲಾರಂಭಿಸಿತು. ಮುಂದೆ ಗಾಂಧಿ ಕಾಲದಲ್ಲಿ ಅವರ ಸ್ವದೇಶಿ ಚಳವಳಿಗೆ ತಿಲಕರು ಆರಂಭಿಸಿದ ಸ್ವದೇಶಿ ತತ್ತ್ವವನ್ನೇ ಪ್ರೇರಣೆಯಾಗಿಟ್ಟುಕೊಂಡರು. ಗಣಪತಿ ಉತ್ಸವದ ಮೂಲಕ ಅಸ್ಪೃಶ್ಯತೆಯ ಲವಲೇಷವೂ ಇಲ್ಲದೆ ಪಾಲ್ಗೊಳ್ಳುತ್ತಿದ್ದ ಸನ್ನಿವೇಶವನ್ನು ಗಾಂಧೀಜಿ ಪ್ರಶಂಶಿಸಿದಿದರು. ವಿಪರ್ಯಾಸವೆಂದರೆ ಗಾಂಧೀಜಿಯವರು ಗಣೇಶೋತ್ಸವಕ್ಕೆ ತಿಲಕರಂತೆ ಪ್ರಾಮುಖ್ಯತೆ ನೀಡಲಿಲ್ಲ. ಅನುಕೂಲಸಿಂಧುವಾಗಿ ಬಳಸಿಕೊಂಡರು. ಗಾಂಧೀಜಿ ನಿಜವಾಗಿ ಓರ್ವ ಅಧ್ಯಾತ್ಮಿಕ ವ್ಯಕ್ತಿಯೇ ಆಗಿದ್ದರೆ ಹೀಗಂತೂ ಮಾಡುತ್ತಿರಲಿಲ್ಲ. ಆದರೆ ಅವರು ಅನುಕೂಲಕ್ಕೆ ತಕ್ಕಂತೆ, ಅನುಕೂಲವಾದ ಸರಕನ್ನು ಬಳಸಿಕೊಳ್ಳುವ ರಾಜಕಾರಣಿಯಂತೆಯೇ ನಡೆದುಕೊಂಡರು. ಗಣೇಶೋತ್ಸವ ಮುಸಲ್ಮಾನರ ಏಕತೆಗೆ ಎಲ್ಲಿ ಅಡ್ಡಿಯಾಗಿಬಿಡುವುದೋ ಎಂಬ ಆತಂಕ ಅವರಲ್ಲಿತ್ತು. ಆದರೆ ಗಣೇಶೋತ್ಸವದ ಪರಿಣಾಮಗಳನ್ನು ಬಳಸಿಕೊಳ್ಳುವುದಕ್ಕೆ ಅವರು ಹಿಂಜರಿಯಲಿಲ್ಲ!

ಸ್ವಾತಂತ್ರ್ಯ ಹೋರಾಟದ ಬಗ್ಗೆ ಇಂದು ಏನೇ ಸುಳ್ಳುಗಳನ್ನು ಹೇಳಬಹುದು. ಆದರೆ ಸ್ವಾತಂತ್ರ್ಯ ಚಳವಳಿಯ ಮೂಲ ಸ್ತೋತ್ರ ಆರಂಭವಾಗಿದ್ದು ಗಣೇಶೋತ್ಸವದ ಮೂಲಕವೇ ಎಂಬುದು ಸತ್ಯ. ಒಂದು ವೇಳೆ ತಿಲಕರು ಮನೆಯ ಗಣಪನನ್ನು ಬೀದಿಗೆ ತರದೆ ಇರುತ್ತಿದ್ದರೆ ಸ್ವಾತಂತ್ರ್ಯ ಚಳವಳಿಯ ವೇಗ ಐವತ್ತು ವರ್ಷಗಳಿಗೆ ಹಿಂದಕ್ಕೆ ನೂಕಲ್ಪಡುತ್ತಿತ್ತು. ಸ್ವದೇಶಿ ತತ್ತ್ವ ಹುಟ್ಟಲು ಬೇರೇನೋ ಒಂದು ಕಾರಣಕ್ಕಾಗಿ ದೇಶ ಕಾಯಬೇಕಿತ್ತು. ತಿಲಕರು ಗಣಪತಿಯನ್ನು ಸಾರ್ವಜನಿಕ ಉತ್ಸವ ಮಾಡದೇ ಇರುತ್ತಿದ್ದರೆ ಗಾಂಧೀಜಿ ಎಂಬ ನಾಯಕ ಹುಟ್ಟುತ್ತಿರಲಿಲ್ಲ ಅಥವಾ ಹುಟ್ಟಿದ್ದರೂ ಅವರ ವ್ಯಕ್ತಿತ್ವ ಮಂಕಾಗಿರುತ್ತಿತ್ತು. ಗಾಂಧೀಜಿ ಇಂದಿಗೂ ಸ್ವದೇಶಿ ಪ್ರತಿಪಾದಕ ಎಂದು ಬಿಂಬಿಸಲ್ಪಡುವುದರ ಹಿಂದೆ ತಿಲಕರ ಶ್ರಮವಿದೆ. ಒಂದು ವೇಳೆ ಗಣಪತಿ ಬೀದಿಗೆ ಬರದಿರುತ್ತಿದ್ದರೆ ಗಾಂಧೀಜಿಯವರಿಗೆ ಮತ್ತು ಕಾಂಗ್ರೆಸಿಗೆ ಒಂದು ಸಿದ್ಧಾಂತವೇ ಇರುತ್ತಿರಲಿಲ್ಲ. ಅಂದರೆ ಇಂದಿನ ಕಾಂಗ್ರೆಸಿನ ಅಸ್ತಿತ್ವಕ್ಕೆ ಮೂಲ ಕಾರಣನಾದವನೇ ಈ ಏಕದಂತ, ಸಂಕಟಹಾರಕ, ವಿಘ್ನನಿವಾರಕ, ಗಜಾನನ ಅಥವಾ ಗಣಪ!

ದುರ್ದೈವವೆಂದರೆ ಇಂದಿನ ಕಾಂಗ್ರೆಸ್ ತನ್ನ ಯಶಸ್ಸನ್ನು ಗಣಪತಿಗೆ ಹೊರಿಸಲು ಹಿಂಜರಿಯುತ್ತಿದೆ. ಆ ಕಾರಣದಿಂದ ಇಂದು ಕಾಂಗ್ರೆಸಿನಲ್ಲೂ ಸ್ವದೇಶಿ ತತ್ತ್ವ-ಚಿಂತನೆಗಳಿಲ್ಲ. ವಿದೇಶಿ ನಾಯಕತ್ವ, ವಿದೇಶಿ ಎರವಲು ಸಿದ್ಧಾಂತಗಳಿಗೆ ತಲೆಬಾಗಿರುವ ಕಾಂಗ್ರೆಸಿಗೆ ಇಂದು

ಗಣಪತಿಯ ಅಗತ್ಯ ಇಲ್ಲ ಎಂದು ಅದು ಭಾವಿಸಿದೆ. ಅಷ್ಟಾಗಿದ್ದರೂ ಚಿಂತೆ ಇರಲಿಲ್ಲ. ತನಗೆ ಅಸ್ತಿತ್ವ ಕೊಟ್ಟ ಗಣಪತಿಯನ್ನು ಕಾಂಗ್ರೆಸ್ ಇನ್ನಿಲ್ಲದಂತೆ ದ್ವೇಷಿಸುತ್ತದೆ! ಸ್ವಾತಂತ್ರ್ಯಾನಂತರ ಸಾರ್ವಜನಿಕ ಗಣೇಶೋತ್ಸವಗಳು ಹಿಂದುತ್ವದ ಜಾಗರಣೆಗೆ ಕಾರಣವಾಗುತ್ತಿದೆ ಎಂಬುದು ಕಾಂಗ್ರೆಸಿನ ಆತಂಕಕ್ಕೆ ಕಾರಣ. ಹಿಂದುತ್ವವನ್ನು ಪ್ರತಿಪಾದಿಸುವ ರಾಜಕೀಯ ಪಕ್ಷಗಳಿಗೆ ಗಣೇಶೋತ್ಸವಗಳು ಲಾಭದಾಯಕವಾಗುತ್ತಿವೆ, ಅವು ತನ್ನ ಎದುರು ನಿಲ್ಲುತ್ತವೆ ಎಂಬ ಕಾರಣದಿಂದ ಕಾಂಗ್ರೆಸ್ ಅದನ್ನು ಕೋಮುವಾದ ಎಂದು ಕರೆಯುತ್ತದೆ.

ಸ್ವದೇಶಿ ಚಿಂತನೆಯೆಂಬುದು ಯಾವುದೋ ಒಂದು ಸೀಮಿತ ಉದ್ದೇಶಕ್ಕೆ ಕಾರಣವಾದುದಲ್ಲ. ಅದು ಯಾವುದೋ ಒಂದು ಕಾಲಘಟ್ಟಕ್ಕೆ ಸೀಮಿತವಾದದ್ದೂ ಅಲ್ಲ. ಸ್ವದೇಶಿ ತತ್ತ್ವ ನಿರಂತರವಾಗಿ ಹರಿಯುತ್ತಿದ್ದರೆ ಒಂದು ವ್ಯವಸ್ಥೆ ಹದವಾಗಿ ನೆಲೆಯಾಗುತ್ತದೆ. ಸ್ವದೇಶಿತ್ವ ನಿತ್ಯ ಜೀವನದ ನಡೆನುಡಿ, ಸಮಾಜಜೀವನ, ಆಡಳಿತ ಸೂತ್ರಗಳಿಗೆ ಸಂಬಂಧಪಟ್ಟ ಸಂಗತಿ. ಸ್ವದೇಶಿ ತನ್ನತನದ ಸಂಕೇತ. ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ತಮ್ಮತನಕ್ಕೆ ಒತ್ತು ನೀಡುತ್ತಿರುವುದು ಇಂದಿನ ಟ್ರೆಂಡ್ ಅಷ್ಟೇ ಅಲ್ಲ, ಆಯಾಯ ದೇಶಗಳ ಅಳಿವು ಉಳಿವಿನ ಪ್ರಶ್ನೆ ಕೂಡ. ಆದರೆ ಕಾಂಗ್ರೆಸ್ ಮಾತ್ರ ತನ್ನನ್ನು ಬೆಳೆಸಿದ ಗಣಪನನ್ನೇ ಮತಾಂಧರ ಓಲೈಕೆಯ ಹೆಸರಲ್ಲಿ ಮೂಲೆಗೆ ತಳ್ಳಿದೆ.

ಕಳೆದ ಗಣೇಶೋತ್ಸವದ ಸಂದರ್ಭದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಗಣೇಶೋತ್ಸವವೊಂದರಲ್ಲಿ ಭಾಗವಹಿಸಿದ್ದನ್ನು ಕಾಂಗ್ರೆಸ್ ಕಟುವಾಗಿ ಟೀಕಿಸಿತು. ವಿಚಿತ್ರವೆಂದರೆ ಅಂದಿನ ಉತ್ಸವದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಬಾಲ ಗಂಗಾಧರ ತಿಲಕರು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಗಣಪನ ಪಾತ್ರದ ಕುರಿತು ಮಾತುಗಳನ್ನಾಡಿದ್ದರು. ಅದೂ ಕೂಡ ಕಾಂಗ್ರೆಸಿಗೆ ಅಸಹನೀಯವಾಯಿತೆಂದರೆ ಕಾಂಗ್ರೆಸಿಗರು ಎಂಥ ದೇಶವನ್ನು ಕಟ್ಟಲು ಹೊರಟಿದ್ದಾರೆ?

ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳು ತಮ್ಮ ಮನೆಯಲ್ಲಿ ಕೂರಿಸಿದ ಗಣಪತಿಯನ್ನೂ ಕಾಂಗ್ರೆಸಿಗರು ವಿರೋಧಿಸಿದ್ದರು! ಇಡೀ ದೇಶ ವಿದ್ಯೆಗೆ, ಬುದ್ಧಿಗೆ ಅಧಿದೇವತೆ ಎಂದು ಆರಾಧಿಸುವ ಗಣಪತಿಯನ್ನು ಕಾಂಗ್ರೆಸ್ ವಿರೋಧಿಸುತ್ತಾರೆಂದರೆ ಏನನ್ನಬೇಕು? ನ್ಯಾಯಾನ್ಯಾಯವನ್ನು ತೀರ್ಮಾನಿಸುವ ಗಣಪತಿಯ ಆರಾಧನೆಯನ್ನು ನ್ಯಾಯಮೂರ್ತಿಗಳು ಮಾಡಿದರೆ ದೇಶದ ಗೌರವ-ಘನತೆಗೆ ಧಕ್ಕೆ ಎನ್ನುವ ವಾದಕ್ಕೇನು ಬಲವಿದೆ?

ಗಣಪತಿಯ ಕೃಪೆಯಿಂದ ಒಂದು ಸಿದ್ಧಾಂತವನ್ನು



ರೂಪಿಸಿಕೊಂಡ ಕಾಂಗ್ರೆಸ್ ಮುಂದಿನ ದಿನಗಳಲ್ಲಿ ಗಾಂಧಿ ಕಾಲದಲ್ಲಿ ಓಲೈಕೆಯ ರಾಜಕಾರಣಕ್ಕಿಳಿಯಿತಷ್ಟೆ. ಅದು ಮುಂದೆ ಮತೀಯ ಆಧಾರದಲ್ಲಿ ದೇಶ ಒಡೆಯುವವರೆಗೂ ಸಾಗಿತು. ಸ್ವತಂತ್ರ ಭಾರತದಲ್ಲಿ ನೆಹರೂ ನೀತಿ, ಗಾಂಧಿಯವರ ಡೋಂಗಿ ಸೆಕ್ಯುಲರಿಸಂ ಹಾಗೂ ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಬಲಿಯಾಗಿ ಸನಾತನವಾದದ್ದೆಲ್ಲವೂ ಕಾಲಬಾಹಿರ ಎಂಬ ನಂಬಿಕೆಯನ್ನು ದೇಶದಲ್ಲಿ ಹುಟ್ಟಿಸುವಲ್ಲಿ ಯಶಸ್ವಿಯಾದವು.

ಗಣಪತಿ ಉತ್ಸವಗಳು ದೇಶದಲ್ಲಿ ಕೋಮು ಗಲಭೆಗಳನ್ನು ಸೃಷ್ಟಿಸುವ ಮೂಲಗಳೆಂದು ಭಾವಿಸಿದ ಸೆಕ್ಯುಲರ್ ಆಡಳಿತ ಗಣೇಶನ ಉತ್ಸವಗಳಿಗೂ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದವು. ಯಾವ ಕಾಂಗ್ರೆಸ್‌ಗೆ ಅಂದು ಗಣೇಶ ಜೀವಸೆಲೆಯಾಗಿತ್ತೋ ಅದೇ ಗಣೇಶ ಇಂದು ಗಲಭೆಯ ಮೂಲ ಎಂದಾಯಿತು. ಮಹಾರಾಷ್ಟ್ರದಂಥ ಜಾಗಗಳಲ್ಲಿಯೂ ಸಹ ಗಣೇಶನ ಮೆರವಣಿಗೆಗಳ ಸಂದರ್ಭದಲ್ಲಿ ದಾಳಿಗಳು ನಡೆದವು. ಕಾಂಗ್ರೆಸಿನ ಬೆಂಬಲದಿಂದ ಮತಾಂಧರೂ ಕೊಬ್ಬಿದರು. ಎಲ್ಲೆಲ್ಲಿ ಕಾಂಗ್ರೆಸ್ ಸರ್ಕಾರಗಳಿರುತ್ತವೋ ಆ ಎಲ್ಲಾ ರಾಜ್ಯಗಳಲ್ಲಿ ಗಣೇಶೋತ್ಸವಗಳ ಮೇಲೆ ಮುಸಲ್ಮಾನರಿಂದ ದಾಳಿಗಳು ಮಾಮೂಲೆಂಬಂತೆ ನಡೆಯುತ್ತವೆ.

ಕರ್ನಾಟಕದಲ್ಲಂತೂ ಗಣೇಶೋತ್ಸವ ಮೆರವಣಿಗೆ ಸಂದರ್ಭದಲ್ಲಿ ಅಲ್ಲಲ್ಲಿ ದಾಳಿ, ಗಲಭೆಗಳು ನಡೆಯುತ್ತಲೇ ಇರುತ್ತದೆ. ಪ್ರತೀ ದಾಳಿ ಮುಸಲ್ಮಾನ ಗೂಂಡಾಗಳ ಪ್ರಚೋದನೆಯಿಂದ ಆರಂಭವಾದರೂ ಗಲಭೆ ಸಂಬಂಧ ಬಂಧಿತರಾಗುವವರು ಗಣೇಶ ಮಂಡಳಿಗಳ ಕಾರ್ಯಕರ್ತರೇ!

ಅಂದು ಪ್ರೇರಣೆಯಾಗಿದ್ದ ಗಣೇಶ ಇಂದಿನ ಕಾಂಗ್ರೆಸಿಗೆ ಓಲೈಕೆಯ ಅಸ್ತ್ರ ಎನ್ನುವುದು ಕಾಲದ ವಿಪರ್ಯಾಸ ಮಾತ್ರವಲ್ಲ, ಕಾಂಗ್ರೆಸಿನ ಅಧಃಪತನದ ಕುರುಹು.



# ಮೋದಿ ಅಮೆರಿಕಾ ಪ್ರವಾಸ!!!




**ಅಜಿತ್ ಹೆರಂಜೆ**
ರಾಜ್ಯ ಸಹ ಸಂಚಾಲಕರು,
ಪ್ರಕಾಶನ ಪ್ರಕೋಷ್ಠ, ಬಿಜೆಪಿ


ರಷ್ಯಾ ಉಕ್ರೈನ್ ಯುದ್ಧವನ್ನು ತಡೆಯುವ ಯಾವ ಪ್ರಯತ್ನವೂ ಫಲ ಕೊಡದ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿಯವರ ಅಮೇರಿಕಾ ಪ್ರವಾಸ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಗಮನಸೆಳೆದಿತ್ತು. ಅಮೇರಿಕಾ ಪ್ರವಾಸಕ್ಕೂ ಮುಂಚೆ ಪ್ರಧಾನಿ ಮೋದಿ ರಷ್ಯಾ ಮತ್ತು ಉಕ್ರೈನ್ ಪ್ರವಾಸ ಮಾಡಿ ಎರಡೂ ಅಧ್ಯಕ್ಷರ ಜೊತೆಗೆ ಯುದ್ಧವನ್ನು ನಿಲ್ಲಿಸುವ ಕುರಿತು ಚರ್ಚಿಸಿದ್ದರು. ಭಾರತ ತನ್ನ ಆಪ್ತ ಮಿತ್ರ ಎಂದು ಹೇಳುತ್ತಲೇ ಕಣ್ಣಾ ಮುಚ್ಚಾಲೆ ಆಡುತ್ತಿರುವ ಅಮೇರಿಕಾ, ಖಲಿಸ್ಥಾನಿ ಪ್ರತ್ಯೇಕತಾವಾದಿಗಳಿಗೆ ಅಭಿವ್ಯಕ್ತಿಯ ಸ್ವಾತಂತ್ರ್ಯದ ಹೆಸರಿನಲ್ಲಿ ನೇರವಾಗಿ ಬೆಂಬಲಿಸುತ್ತಿದೆ.

ಭಾರತದೊಳಗೆ ಪ್ರತ್ಯೇಕತಾವಾದಕ್ಕೆ ಬೆಂಬಲಿಸುತ್ತಿರುವ ಖಲಿಸ್ಥಾನಿ ಉಗ್ರ ಗುರುಪತ್ವಂತ್ ಸಿಂಗ್ ಪನ್ನುಗೆ ರಾಜಾಶ್ರಯ ಕೊಟ್ಟಿದೆ. ಇತ್ತೀಚೆಗೆ ಈತನ ಮೇಲೆ ನಡೆದಿದೆ ಎನ್ನಲಾದ ಮಾರಣಾಂತಿಕ ಹಲ್ಲೆಯಲ್ಲಿ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಅಜಿತ್ ದೋವಲ್ ವಿರುದ್ಧ ಅಮೇರಿಕಾದ ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡಲಾಯಿತು. ಪ್ರಧಾನಿ ಮೋದಿಯವರ ಭೇಟಿಯ ಸಮಯದಲ್ಲಿ ದೋವಲ್ ಕೂಡ ತಮ್ಮ ದೇಶಕ್ಕೆ ಬರುತ್ತಾರೆ ಎಂದು ಗೊತ್ತಿದ್ದೂ ಅಮೆರಿಕಾ ಸರಕಾರ ಈ ಕ್ರಮಕ್ಕೆಗೊಂಡಿದ್ದು ಜಾಗತಿಕ ರಾಜತಾಂತ್ರಿಕ ವಲಯದಲ್ಲಿ ಭಾರಿ ಮಟ್ಟದ ಚರ್ಚೆ ಹುಟ್ಟು ಹಾಕಿದೆ. ಇದೇ ಸಂದರ್ಭದಲ್ಲಿ ಖಲಿಸ್ಥಾನಿ ಉಗ್ರರ ನಿಯೋಗವೊಂದು ಅಮೇರಿಕಾದ ರಾಷ್ಟ್ರಪತಿ ಭವನಕ್ಕೆ ಬಂದು ಭಾರತದಿಂದ ತಮಗೆ ರಕ್ಷಣೆ ಬೇಕು ಎಂದು ಸಲ್ಲಿಸಿದ ಬೇಡಿಕೆಗೆ ಅಮೇರಿಕ ಒಪ್ಪಿದೆ. ಇದೆಲ್ಲವೂ ಪ್ರಧಾನಿ ಮೋದಿಯವರು ಅಮೆರಿಕಾಕ್ಕೆ ಬರುವ ಸಂದರ್ಭದಲ್ಲಿ ನಡೆದಿದ್ದು ಖಂಡಿತ ಕಾಕತಾಳೀಯ ಅಲ್ಲ. ವಿಮಾನದ ಉತ್ಪಾದನೆಯಲ್ಲಿ ಸಮಸ್ಯೆಗೆ ಕಾರಣವಾದ ಒಪ್ಪಂದದಂತೆ ಭಾರತದ ಸ್ವದೇಶಿ ನಿರ್ಮಿತ ಯುದ್ಧ ವಿಮಾನಕ್ಕೆ ಜೆಟ್ ಎಂಜಿನ್ ಪೂರೈಕೆ ಮಾಡದ ಮತ್ತು ರಕ್ಷಣಾ ಪೂರೈಕಾ ಒಪ್ಪಂದಗಳ ಹೊರತಾಗಿಯೂ ಪರಿಕರಗಳ ಪೂರೈಕೆಯಲ್ಲಿ ಸಾಗಿದ ವಿಳಂಬದ ಹಿನ್ನಲೆಯಲ್ಲಿ ಪ್ರಧಾನಿ ಮೋದಿಯವರ ಅಮೇರಿಕ ಪ್ರವಾಸ ಜಾಗತಿಕವಾಗಿ ಬಹಳ ಕುತೂಹಲಕ್ಕೆ ಕಾರಣವಾಗಿತ್ತು.

### ವಿಶ್ವಸಂಸ್ಥೆಯಲ್ಲಿ ಮೋದಿ ಮಾತು

ಮಾನವೀಯತೆಯ ಯಶಸ್ಸು ಸಾಮೂಹಿಕ ಶಕ್ತಿಯಲ್ಲಿದೆಯೇ ಹೊರತು ಯುದ್ಧ ಭೂಮಿಯಲ್ಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಸಂಸ್ಥೆಯ ಶೃಂಗಸಭೆಯಲ್ಲಿ ಪ್ರತಿಪಾದಿಸಿದರು. ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡುವುದರ ಜತೆಗೆ ಮಾನವ ಕಲ್ಯಾಣ, ಆಹಾರ, ಆರೋಗ್ಯ ಭದ್ರತೆಯನ್ನು ಖಚಿತಪಡಿಸಿ ಕೊಳ್ಳಬೇಕೆಂದು ವಿಶ್ವಕ್ಕೆ ಒತ್ತಿ ಹೇಳಿದರು. ಭಾರತದಲ್ಲಿ 250 ಮಿಲಿಯನ್ ಜನರನ್ನು ಬಡತನದಿಂದ ಮೇಲೆತ್ತುವ ಮೂಲಕ ಸುಸ್ಥಿರ ಅಭಿವೃದ್ಧಿ ಯಶಸ್ಸು ಹೇಗೆ ಸಾಧ್ಯ ಎಂಬುದನ್ನು ನಾವು ನಿರೂಪಿಸಿದ್ದೇವೆ. ಸಾಧ್ಯವಿಲ್ಲ ಎಂಬುದು ಯಾವುದೂ ಇಲ್ಲ ಎಂದು ಭಾರತದ ಸಾಧನೆಯನ್ನು ಜಗದ ಮುಂದೆ ತೆರೆದಿಟ್ಟರು.

### ಭಾರತೀಯರನ್ನುದ್ದೇಶಿಸಿ ಮೋದಿ ಮಾತು

ಮೂರನೇ ಬಾರಿಗೆ ಪ್ರಧಾನಮಂತ್ರಿಯಾದ ನಂತರ ಅಮೆರಿಕಕ್ಕೆ ಬಂದ ಮೋದಿಯವರಿಗೆ ನ್ಯೂಯಾರ್ಕ್‌ನಲ್ಲಿ ಭಾರತೀಯ ಸಮುದಾಯದವರು ' ಅದ್ದೂರಿ ಸ್ವಾಗತ ಸಮಾರಂಭ ಆಯೋಜಿಸಿದ್ದರು. ಇಲ್ಲಿನ 13 ಸಾವಿರ ಸಾಮರ್ಥ್ಯದ ನಾಸಾ ವೇಟೆರೇನ್ಸ್ ಮೆಮೋರಿಯಲ್ ಕಾಲಿಸಿಯಂ ಸ್ಟೇಡಿಯಮ್‌ನಲ್ಲಿ ಈ ಸ್ವಾಗತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಮೆರಿಕದಲ್ಲಿನ ಸುಮಾರು 500 ಕ್ಕೂ ಹೆಚ್ಚು ಸಂಘಟನೆಗಳು ಸೇರಿ ಈ ಕಾರ್ಯಕ್ರಮ ಆಯೋಜಿಸಿದ್ದರು.

### ಮೋದಿ-ಬೈಡೆನ್ ಮಹತ್ವದ ಮಾತುಕತೆ

ಅಮೆರಿಕಾದ ಅಧ್ಯಕ್ಷರಾದ ಜೋ ಬೈಡನ್ ಜೊತೆಗೆ ಮೋದಿ ಅವರು ಸುದೀರ್ಘ ಮಾತುಕತೆ ನಡೆಸಿದರು. ಅಮೆರಿಕದ ಅಧ್ಯಕ್ಷರು ಅವರ ನಾರ್ಥ್ ಕೆರೊಲಿನಾದ ಹೆಮ್ಮಿಂಗ್ಟನ್‌ನಲ್ಲಿನ ಅವರ ನಿವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಹಲವು ವಿಷಯಗಳನ್ನು ಚರ್ಚಿಸಿದರು. ಭಾರತ-ಅಮೆರಿಕ ಬಾಂಧವ್ಯಕ್ಕೆ ಉತ್ತೇಜನ ನೀಡುವುದರ ಜೊತೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವಕ್ಕಾಗಿ ಅಮೆರಿಕದಿಂದ ಬೆಂಬಲ ಕೊಡುವುದಾಗಿ ಬೈಡನ್ ತಿಳಿಸಿದರು. ಪ್ರಧಾನಿ ಮೋದಿಯವರು ಉಕ್ರೇನ್‌ಗೆ ನೀಡಿರುವ ಐತಿಹಾಸಿಕ ಭೇಟಿ, ರಷ್ಯಾದೊಂದಿಗಿನ ಯುದ್ಧದ ನಡುವೆಯೂ ಶಾಂತಿ ಸ್ಥಾಪನೆಗೆ ನೀಡಿದ ಸಂದೇಶದ ಬಗ್ಗೆಯೂ ಅಮೆರಿಕದ ಅಧ್ಯಕ್ಷ ಜೋ ಬೈಡೆನ್ ಶ್ಲಾಘನೆ ವ್ಯಕ್ತಪಡಿಸಿದರು.

ಭಾರತ-ಅಮೆರಿಕದ ಹಸಿರು ಇಂಧನ ತಂತ್ರಜ್ಞಾನ ಹಾಗೂ ಘಟಕಗಳ ಉತ್ಪಾದನೆಗಳ ಮೂಲಕ ಸುರಕ್ಷಿತ-ಸುಭದ್ರ ಹಸಿರು ಇಂಧನ ಸರಬರಾಜು ಸರಣಿಯ ವಿಸ್ತಾರಕ್ಕೆ ವೇಗ ನೀಡುವ ಜಂಟಿ ಪ್ರಯತ್ನವನ್ನೂ ಉಭಯ ನಾಯಕರು ಸ್ವಾಗತಿಸಿದರು.. ಅಲ್ಲದೆ ಈ ನಿಟ್ಟಿನಲ್ಲಿ ಆರಂಭಿಕ ಹಂತದಲ್ಲಿ 1 ಶತಕೋಟಿ ಡಾಲರ್ ಬಹುಪಕ್ಷೀಯ ಹಣಕಾಸು ತೊಡಗಿಸುಕೆಗೆ ಕಾರ್ಯಪ್ರವೃತ್ತ ಆಗುವ ಬಗ್ಗೆಯೂ ಮಾತುಕತೆ ನಡೆಸಿದರು.

16 ಸ್ಕೈ ಗಾರ್ಡಿಯನ್, 15 ಸೀ ಗಾರ್ಡಿಯನ್ ಸೇರಿ 31 ಜನರಲ್ ಅಟಾಟಿಕ್ಸ್ ಎಂಕ್ಯೂ -9ಬಿ ರಿಮೋಟ್ ಪೈಲಟೆಡ್ ವಿಮಾನಗಳು ಹಾಗೂ ಅದಕ್ಕೆ ಸಂಬಂಧಿತ ಉಪಕರಣಗಳ ಖರೀದಿ ಪೂರ್ಣಗೊಳಿಸುವಲ್ಲಿ ಭಾರತದ ಪ್ರಗತಿ ಬಗ್ಗೆ ಅಮೆರಿಕದ ಅಧ್ಯಕ್ಷರು ಮೆಚ್ಚುಗೆ ಸೂಚಿಸಿದ್ದಾರೆ. ರಕ್ಷಣಾ ಕೈಗಾರಿಕೆಯ ಪಾಲುದಾರಿಕೆಯ ವಿಸ್ತರಣೆಯಲ್ಲಿನ ಪ್ರಯತ್ನಗಳನ್ನೂ ಉಭಯನಾಯಕರು ಸ್ವಾಗತಿಸಿದ್ದಾರೆ. ಪ್ರಮುಖ ತಂತ್ರಜ್ಞಾನ ಕ್ಷೇತ್ರಗಳಾದ ಬಾಹ್ಯಾಕಾಶ, ಸೆಮಿಕಂಡಕ್ಟರ್ ಮತ್ತು ದೂರಸಂಪರ್ಕ ಕ್ಷೇತ್ರಗಳಲ್ಲಿನ ಸಹಕಾರಗಳ ಬಗ್ಗೆ ಉಭಯ ನಾಯಕರು ಮಾತುಕತೆ ನಡೆಸಿದರು. ರಾಷ್ಟ್ರೀಯ ಭದ್ರತೆ, ಮುಂದಿನ ಪೀಳಿಗೆಯ ದೂರಸಂಪರ್ಕ ಮತ್ತು ಹಸಿರು ಇಂಧನ ಅನ್ವಯಿಕೆಗಳಿಗಾಗಿ ಸುಧಾರಿತ ಸಂವೇದನೆ, ಸಂವಹನ ಮತ್ತು ಪವರ್ ಇಲೆಕ್ಟ್ರಾನಿಕ್ಸ್ ಕೇಂದ್ರೀಕೃತ ಹೊಸ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಪ್ಲಾಂಟ್ ಸ್ಥಾಪಿಸುವ ವ್ಯವಸ್ಥೆಗೆ ಉಭಯನಾಯಕರ ಮೆಚ್ಚುಗೆ ವ್ಯಕ್ತವಾಗಿದೆ. ಅಂತಾರ್ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 2025ರಲ್ಲಿ ವೈಜ್ಞಾನಿಕ ಸಂಶೋಧನೆ ಕೈಗೊಳ್ಳಲು ಇಸ್ರೋ, ನಾಸಾದ ಪ್ರಗತಿ ಬಗ್ಗೆಯೂ ಉಭಯನಾಯಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## ಪುರಾತನ ವಸ್ತುಗಳು ವಾಪಸ್


ಪ್ರಧಾನಿ ನರೇಂದ್ರ ಮೋದಿಯವರ ಭೇಟಿಯಿಂದಾಗಿ ಭಾರತದ 297 ಪುರಾತನ ವಸ್ತುಗಳನ್ನು ಅಮೆರಿಕ ಹಿಂದಿರುಗಿಸಿದೆ. ಮೋದಿಯವರ 2014ರಿಂದ ಇದುವರೆಗಿನ ಯುಎಸ್ ಭೇಟಿಯಲ್ಲಿ ಒಟ್ಟು 578 ಭಾರತೀಯ ಪುರಾತನ ವಸ್ತುಗಳನ್ನು ಅಮೆರಿಕ ಮರಳಿಸಿದೆ. ಭಾರತದ ಸಾಂಸ್ಕೃತಿಕ ಆಸ್ತಿಯ ಅಕ್ರಮ ಸಾಗಣೆ ಎದುರಿಸುವಲ್ಲಿ ಇದು ಮಹತ್ವದ ಬೆಳವಣಿಗೆ ಆಗಿದೆ. ಆದರೆ 2004-2013ರ ಅವಧಿಯಲ್ಲಿ ಅಮೆರಿಕ ಒಂದೇ ಒಂದು ಪುರಾತನ ವಸ್ತುವನ್ನು ಭಾರತಕ್ಕೆ ಮರಳಿಸಿತ್ತು. ಮೋದಿ ಅವರು ಪ್ರಧಾನಿ ಆದ ಬಳಿಕ ಇದುವರೆಗೆ ದೇಶಗಳಲ್ಲಿನ ಒಟ್ಟು 640 ಪುರಾತನ ವಸ್ತುಗಳು ಭಾರತಕ್ಕೆ ಹಿಂದಿರುಗಿಸಿದೆ.

### ಜಾಗತಿಕ ಸಿಇಒಗಳ ಜೊತೆ ಮೊದಿ ಚರ್ಚೆ

ಭಾರತವನ್ನು 2029ರ ಹೊತ್ತಿಗೆ ಜಗತ್ತಿನ ಮೂರನೇ ಅತಿ ದೊಡ್ಡ ಪ್ರಬಲ ಆರ್ಥಿಕತೆಯ ದೇಶವನ್ನಾಗಿಸಲು ಸರ್ವಪ್ರಯತ್ನ ನಡೆಸಲಾಗುತ್ತಿದ್ದು, ಈ ಕಾರ್ಯದಲ್ಲಿ ನೀವೂ ಭಾಗಿಯಾಗಿ ಎಂದು ಪ್ರಧಾನಿ ನರೇಂದ್ರ ಮೋದಿ ಅಮೆರಿಕದ ಪ್ರಮುಖ ತಂತ್ರಜ್ಞಾನ ಕಂಪನಿಗಳಿಗೆ ಕರೆ ನೀಡಿದರು. ಅಮೇರಿಕದ ದಿಗ್ಗಜ ತಂತ್ರಜ್ಞಾನ ಕಂಪನಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಒ)ಗಳ ಜತೆ ನಡೆದ ಸಭೆಯಲ್ಲಿ ಮೋದಿ ಈ ವಿಷಯ ಪ್ರಸ್ತಾಪಿಸಿದರು. ಕೃತಕ ಬುದ್ಧಿಮತ್ತೆ, ಕ್ವಾಂಟಂ ಕಂಪ್ಯೂಟಿಂಗ್, ಸೆಮಿಕಂಡಕ್ಟರ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ ಕಾರ್ಯನಿರ್ವಹಿಸುವ ಅಮೆರಿಕ ಮೂಲದ 15 ಪ್ರಮುಖ ಕಂಪನಿಗಳ ಸಿಇಒಗಳು ಸಭೆಯಲ್ಲಿ ಭಾಗಿಯಾಗಿದ್ದರು.

### ಭಾರತಕ್ಕೆ ಜೈ ಎಂದ ಬೈಡೆನ್

ವಿಶ್ವ ವೇದಿಕೆಯಲ್ಲಿ ಭಾರತದ ನಾಯಕತ್ವವನ್ನು ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಶ್ಲಾಘಿಸಿದ್ದಾರೆ. ಕೋವಿಡ್-19 ಸಾಂಕ್ರಾಮಿಕ ಸಂಬಂಧ ಜಾಗತಿಕ ಪ್ರತಿಕ್ರಿಯೆ ಮತ್ತು ರಷ್ಯಾ-ಉಕ್ರೇನ್ ಸೇರಿದಂತೆ ಹಲವು ಜಾಗತಿಕ ಸಂಘರ್ಷಗಳ ವಿಚಾರದ ಗಂಭೀರ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿ ಭಾರತ ಮುಂಚೂಣಿಯಲ್ಲಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.




# ಬಾಂಗ್ಲಾ ನಡೆ ಹಿಂದೂಗಳಿಗೆ ಎಚ್ಚರಿಕೆ ಪಾಠ

**ಬಾಂ**ಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಪದೇಪದೇ ದೌರ್ಜನ್ಯ, ಹಿಂಸಾಚಾರ ನಡೆಯುತ್ತಿದೆ. ಬಾಂಗ್ಲಾದೇಶದಲ್ಲಿನ ಹಿಂದೂ ಗಳ ಮೇಲಿನ ಈ ದೌರ್ಜನ್ಯ, ಹಿಂಸಾಚಾರ ಭಾರತದಲ್ಲಿ ರುವ ಹಿಂದೂ ಗಳಿಗೆ ಎಚ್ಚರಿಕೆಯ ಪಾಠವಾಗಿದೆ. ತಮ್ಮ ರಕ್ಷಣೆಗಾಗಿ ಹಿಂದೂಗಳು ಒಗ್ಗೂಡಲೇ ಬೇಕಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್ ಹೇಳಿದರು.

ಮಹಾರಾಷ್ಟ್ರದ ನಾಗಪುರದಲ್ಲಿರುವ ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ಆಯುಧ ಪೂಜೆ ನಂತರ ವಿಜಯದಶಮಿ ಭಾಷಣ ಮಾಡಿದ ಅವರು, ಬಾಂಗ್ಲಾ ದೇಶದಲ್ಲಿ ಹೀಗೆ ಉದ್ದೇಶ ರಹಿತ ಹಿಂಸಾ ಚಾರ ನಡೆಯುತ್ತಿರುವವರೆಗೂ ಹಿಂದೂಗಳಷ್ಟೇ ಅಲ್ಲ, ಆ ನೆಲದಲ್ಲಿರುವ ಸಿಖ್, ಬೌದ್ಧ, ಕ್ರೈಸ್ತ ಸೇರಿದಂತೆ ಎಲ್ಲಾ ಅಲ್ಪ ಸಂಖ್ಯಾತರಿಗೂ ಅಪಾಯ ತಪ್ಪಿದ್ದಲ್ಲ ಎಂದು ಆತಂಕ ವ್ಯಕ್ತಪಡಿಸಿ ದರು.

ಬಾಂಗ್ಲಾ ದೇಶ ದಲ್ಲಿನ ಸದ್ಯದ ರಾಜಕೀಯ ಅಸ್ಥಿರತೆ ಭಾರತ ವನ್ನು ಶತ್ರು ಎಂಬ ಅಪಾ ಯಕಾರಿ ನಿರೂಪಣೆ ಯನ್ನು ಪ್ರಚೋದಿ ಸುತ್ತಿದೆ. ಪರಮಾಣು ಶಕ್ತಿ ಹೊಂದಿರು ವ ಪಾಕಿಸ್ತಾನ ಒಂದೆಡೆ, ಇನ್ನೊಂದೆಡೆ ಬಾಂಗ್ಲಾದೇಶ ಅಪಾಯಕಾರಿ ಮೈತ್ರಿ ಸಾಧಿಸುವ ಮೂಲಕ ಭಾರತವನ್ನು ನಿಯಂತ್ರಿಸಲೆತ್ನಿಸಬಹುದು ಎಂದು ಕಳವಳ ವ್ಯಕ್ತಪಡಿಸಿದರು.

ಬಾಂಗ್ಲಾದೇಶದಲ್ಲಿನ ಹಿಂದೂಗಳಿಗೆ ಭಾರತದಲ್ಲಿನ ಮತ್ತು ವಿಶ್ವದೆಲ್ಲೆಡೆಯ ಹಿಂದೂಗಳ ಬೆಂಬಲದ ಅಗತ್ಯವಿದೆ. ಭಾರತ ಸರಕಾರ ಈಗ ಮಧ್ಯಪ್ರವೇಶ ಮಾಡಲೇಬೇಕಿದೆ. ನಾವು ಎಲ್ಲೇ ಇದ್ದರೂ ಒಗ್ಗಟ್ಟಿನಿಂದ ಅಧಿಕಾರವನ್ನು ಹೊಂದಿರಬೇಕು ಎಂದರು. ಅಸಂಘಟಿತವಾಗಿರುವುದು, ದುರ್ಬಲವಾ ಗಿರುವುದೇ ದುಷ್ಟರಿಂದ ದೌರ್ಜನ್ಯಕ್ಕೆ ಒಳಗಾಗುವುದಕ್ಕೆ ಕಾರಣ ಎಂಬುದನ್ನು ಹಿಂದೂಗಳು ಅರ್ಥ ಮಾಡಿಕೊಳ್ಳಬೇಕು ಎಂದರು.

ನಗರ ನಕ್ಸಲ್, ಸಾಂಸ್ಕೃತಿಕ ಮಾವೋವಾದಿ ಮಾರಕ ನಾಗಪುರ: ಡೀಪ್ ಸ್ಟೇಟ್, ವೋಕಿಸಂ, ಕಲ್ಚರಲ್ ಮಾರ್ಕ್ಸಿಸ್ಟ್ ಮೊದಲಾದ ಶಬ್ದ ಗಳು ಇತ್ತೀಚೆಗೆ ಬಹಳ ಚರ್ಚೆಯಲ್ಲಿವೆ. ದೇಶದ ಭದ್ರತೆ, ಸಮಗ್ರತೆಗೆ ನಗರ ನಕ್ಸಲರು, ಸಾಂಸ್ಕೃತಿಕ ಮಾವೋವಾದಿ ಗಳೇ ಬಹುದೊಡ್ಡ ಮಾರಕ ಎಂದು ಭಾಗವತ್ ಕಳವಳ ವ್ಯಕ್ತಪಡಿಸಿದರು.

ನಗರ ನಕ್ಸಲರು, ಸಾಂಸ್ಕೃತಿಕ ಮಾವೋವಾದಿ ಎಂದು ಎನಿಸಿಕೊಂಡವರೇ ಎಲ್ಲಾ ಸಾಂಸ್ಕೃತಿಕ ಸಂಪ್ರದಾಯಗಳ ಘೋಷಿತ ಶತ್ರುಗಳು ಎಂದು ಕಿಡಿಕಾರಿದರು. ದೇಶದ ಏಕತೆಗೆ ತೊಡಕಾಗಿರುವ ಖಲಿಸ್ತಾನಿ ಬೆಂಬಲಿಗರನ್ನೂ ತರಾಟೆಗೆ ತೆಗೆದು ಕೊಂಡರು. ಸಾಂಸ್ಕೃತಿಕ ಮೌಲ್ಯಗಳು, ಸಂಪ್ರದಾಯ ಮತ್ತು ಒಳ್ಳೆಯದು-ಮಂಗಳಕರವಾದುದು ಎಂದು ಯಾವುದನ್ನು ಪರಿಗಣಿಸಲಾಗಿದೆಯೋ ಅದನ್ನು ಪೂರ್ಣವಾಗಿ ನಿರ್ಮೂಲನೆ ಮಾಡುವುದೇ ಈ ನಗರ ನಕ್ಸಲರು, ಸಾಂಸ್ಕೃತಿಕ ಮಾವೋವಾದಿ ಜನರ ಕಾರ್ಯವೈಖರಿಯಾಗಿದೆ ಎಂದು ಅವರು ಹೇಳಿದರು.

ಸಮಾಜದ ಮನಸ್ಸನ್ನು ಸರಿ ದಾರಿಗೆ ತರುವ, ರೂಪಿಸುವ ಶೈಕ್ಷಣಿಕ ವ್ಯವಸ್ಥೆ, ವಾತಾವರಣ, ಶಿಕ್ಷಣ ಸಂಸ್ಥೆಗಳು. ಸಂವಹನ ಮಾಧ್ಯಮ, ಬೌದ್ಧಿಕ ಸಂವಾದ ಮೊದಲಾದವನ್ನು ಈ ಗುಂಪು ತಮ್ಮ ಪ್ರಭಾವಕ್ಕೆ ಒಳಪಡಿಸಿಕೊಂಡು ಅವುಗಳ ಮೂಲಕವೇ ಸಮಾಜ ಆಚಾರ- ವಿಚಾರ, ಸಂಸ್ಕಾರ-ನಂಬಿಕೆಗಳನ್ನು ನಾಶಪಡಿ ಸುತ್ತದೆ. ಅದುವೇ ಅವರ ಕಾರ್ಯ ವೈಖರಿ ಯಾಗಿದೆ. ಸಮಾಜ ಈ ಬಗ್ಗೆ ಎಚ್ಚರಿಕೆ ವಹಿಸ ಬೇಕಿದೆ ಎಂದು ಅವರು ಜಾಗೃತಿ ಮೂಡಿಸಿದರು.




# ಅಸಂಘಟಿತ ಕಾರ್ಮಿಕರ ಪ್ರಕೋಷ್ಠ - ರಾಜ್ಯ ಕಾರ್ಯಕಾರಿಣಿ ಸಭೆ

(ವರದಿ)



**ಸಚಿನ್ ಗೌಡ**
ರಾಜ್ಯ ಸಹ ಸಂಚಾಲಕರು
ಅಸಂಘಟಿತ ಕಾರ್ಮಿಕ ಪ್ರಕೋಷ್ಠ, ಬಿಜೆಪಿ

**ಬಿ**ಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅಸಂಘಟಿತ ಕಾರ್ಮಿಕರ ಪ್ರಕೋಷ್ಠದ ಪ್ರಥಮ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ದಿ. 22-09-2024ರಂದು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವಥ್ ನಾರಯಣ ರವರು ಮಾತನಾಡಿ ಅಸಂಘಟಿತ ಕಾರ್ಮಿಕ ವಲಯಕ್ಕೆ ಕೇಂದ್ರ ಸರ್ಕಾರವು ಸಾಕಷ್ಟು ಕಾರ್ಯಕ್ರಮಗಳನ್ನು ಜಾರಿ ಮಾಡಿದೆ ಅದನ್ನು ಪರಿಣಾಮಕಾರಿಯಾಗಿ ಅವರಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ತಿಳಿಸಿದರು. ಅಸಂಘಟಿತ ಕಾರ್ಮಿಕರ ಪ್ರಕೋಷ್ಠದಲ್ಲಿ ಜವಬ್ದಾರಿ ಇರುವ ನೀವೆಲ್ಲರೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಣೆ ಮಾಡಿದಲ್ಲಿ ಖಂಡಿತವಾಗಿಯೂ ಉತ್ತಮ ನಾಯಕರಾಗಿ ಹೊರಹೊಮ್ಮುತ್ತೀರಿ ಎಂದು ಹೇಳಿದರು. ಅಸಂಘಟಿತ ಕಾರ್ಮಿಕ ಕ್ಷೇತ್ರ ಒಂದು ದೊಡ್ಡ ವಲಯ, ದೇಶದ ಆರ್ಥಿಕತೆಗೆ ಈ ವಲಯದ ಕೊಡುಗೆ ಅಪಾರವಾಗಿದ್ದು, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯುವುದು ಅವರ ಆರೋಗ್ಯ, ರಕ್ಷಣೆ, ಕೌಶಲ್ಯತೆ ಬಗ್ಗೆ ಜಾಗೃತಿ ಮೂಡಿಸುವ ಕೆಲಸಗಳು ಈ ಪ್ರಕೋಷ್ಠದಿಂದ ಆಗಲಿ ಎಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಅಸಂಘಟಿತ ಕಾರ್ಮಿಕ ವಲಯಕ್ಕೆ ದಾರಿದೀಪವಾಗಿ ಕೆಲಸ ಮಾಡಿ ಇದೊಂದು ವೈಯಕ್ತಿಕವಾಗಿ ನನ್ನ ಅಸಕ್ತಿಯ ಕ್ಷೇತ್ರವಾಗಿದ್ದು ಸದಾ ನನ್ನ ಬೆಂಬಲ ಪ್ರೋತ್ಸಾಹ ಇರಲಿದೆ ಎಂದು ಭರವಸೆ ನೀಡಿದರು.

ವಿಧಾನಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್ ರವರು ಮಾತನಾಡಿ 1866ರಲ್ಲಿ ಅಮೇರಿಕಾದ ಕಾರ್ಮಿಕ ಕ್ರಾಂತಿಯ 3 ಲಕ್ಷ ಕಾರ್ಮಿಕರು ಭಾಗಿಯಾಗಿ ದಿನದ 14 ಗಂಟೆ ಕಾಲಾವಧಿಯ ಕೆಲಸದ ಸಮಯವನ್ನು ಪರಿಣಾಮಕಾರಿ ಕ್ರಾಂತಿಯ ಹೋರಾಟದೊಂದಿಗೆ 8 ತಾಸಿಗೆ ಇಳಿಸಿ ಕಾರ್ಮಿಕ ವಲಯಕ್ಕೆ ನ್ಯಾಯ ದೊರಕಿಸಿದರು ಎಂದು ಹೇಳಿದರು ಹಾಗೂ ಈ ಸಂದರ್ಭದಲ್ಲಿ ಹೋರಾಟದಲ್ಲಿ ಭಾಗಿಯಾಗಿದ್ದ ಅನೇಕರು ಗೋಲಿಬಾರ್‌ನಲ್ಲಿ ಜೀವ ಕಳೆದುಕೊಂಡದ್ದನ್ನು ಸ್ಮರಿಸಿದರು. ಭಾರತದಲ್ಲಿ ಕಾರ್ಮಿಕ ವಲಯಕ್ಕೆ ನ್ಯಾಯ ದೊರಕಿಸಿದ್ದು ಮಾಜಿ ಪ್ರಧಾನಿ ದಿ. ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದರು. ಇವರ ನೇತೃತ್ವದ ಬಿಜೆಪಿ ಸರ್ಕಾರವು ಕನಿಷ್ಟ ವೇತನವನ್ನು ರೂ. 13,000 ಕ್ಕೆ ಹೆಚ್ಚಿಸಿದು, ನರೇಗಾ ಕಾರ್ಮಿಕರಿಗೆ ದಿನದ ಕೂಲಿಯನ್ನು ರೂ 107 ರಿಂದ 349 ದಿನಕ್ಕೆ ಹೆಚ್ಚಳ ಮಾಡಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಿದ್ದಾರೆ ಎಂದು ಶ್ಲಾಘಿಸಿದರು. ಅಸಂಘಟಿತ ಕಾರ್ಮಿಕರ ಕ್ಷೇತ್ರದಲ್ಲಿ ಪರಿಣಾಮಕಾರಿ ಕೆಲಸ ಮಾಡಿದರೆ ಪಕ್ಷದ ಸಂಘಟನೆಯ ಬೇರನ್ನು ಇನ್ನಷ್ಟು ಗಟ್ಟಿಗೊಳಿಸಬಹುದೆಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಉಪ ಮುಖ್ಯ ಮಂತ್ರಿಗಳಾದ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್, ಪ್ರಕೋಷ್ಠಗಳ ರಾಜ್ಯ ಸಂಯೋಜಕರಾದ ಶ್ರೀ ಎಸ್. ದತ್ತಾತ್ರಿ, ಪ್ರಕೋಷ್ಠಗಳ ರಾಜ್ಯ ಸಹ ಸಂಯೋಜಕರಾದ ಶ್ರೀ ಭೋಜರಾಜ ಕರೋದಿ ರವರು, ಅಸಂಘಟಿತ ಕಾರ್ಮಿಕ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ಶ್ರೀ ರಾಜೇಶ್ ವೆಂಕಟೇಶ್, ರಾಜ್ಯ ಸಹ ಸಂಚಾಲಕರಾದ ಶ್ರೀ ಸಚಿನ್ ಗೌಡ ಅಸಂಘಟಿತ ಕಾರ್ಮಿಕರ ಪ್ರಕೋಷ್ಠದ ರಾಜ್ಯ ಪದಾಧಿಕಾರಿಗಳು ಮತ್ತು ವಿವಿಧ ಜಿಲ್ಲಾ ಸಂಚಾಲಕರು ಹಾಗೂ ಸಹ ಸಂಚಾಲಕರು ಉಪಸ್ಥಿತರಿದ್ದರು.

ರಾಜ್ಯ ಕಾರ್ಯಕಾರಿಣಿಯ ಮೊದಲ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಸಂಘಟಿತ ಕಾರ್ಮಿಕರ ಯೋಜನೆಗಳ ಕುರಿತು ಕರ್ನಾಟಕ ಕಾರ್ಮಿಕ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಶ್ರೀ ಹೆಚ್.ಎನ್. ರಮೇಶ್ ರವರು ಸಂಪೂರ್ಣ ಮಾಹಿತಿಯನ್ನು ನೀಡಿದರು.

ಕಾರ್ಯಕಾರಿಣಿಯ ಎರಡನೇ ಅವಧಿಯಲ್ಲಿ ಪ್ರಕೋಷ್ಠದ ಸಂಘಟನಾತ್ಮಕ ಚಟುವಟಿಕೆಗಳ ಕುರಿತು ಪ್ರಕೋಷ್ಠಗಳ ರಾಜ್ಯ ಸಂಯೋಜಕರಾದ ಶ್ರೀ ಎಸ್. ದತ್ತಾತ್ರಿ ರವರು ಮಾಹಿತಿ ನೀಡಿದರು. ಸಂಘಟನಾತ್ಮಕ ಚಟುವಟಿಕೆಯಲ್ಲಿ ನಮ್ಮನ್ನು ನಾವು ಸಂಪೂರ್ಣವಾಗಿ

ತೊಡಗಿಸಿಕೊಂಡಾಗ ಮಾತ್ರ ಪಕ್ಷವು ನಮಗೆ ನೀಡಿದ ಜವಾಬ್ದಾರಿಯನ್ನು ನಾವು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು. ನಾವು ಪ್ರಕೋಷ್ಠದ ಕೆಲಸ ಮಾಡುವ ಮೊದಲು ಕಾರ್ಮಿಕ ಕಾನೂನುಗಳನ್ನು ಅರಿಯಬೇಕು, ನಂತರದಲ್ಲಿ ಒಂದು ಸಕ್ರೀಯ ತಂಡ ರಚನೆ ಮಾಡಿಕೊಂಡು ಸಂಘಟನಾತ್ಮಕ ಚಟುವಟಿಕೆಯೊಂದಿಗೆ ಕಾರ್ಮಿಕರ ಪರವಾದ ನ್ಯಾಯಯುತ ಹೋರಾಟಗಳನ್ನು ರೂಪಿಸಿ ಕಾರ್ಮಿಕರ ಧ್ವನಿಯಾಗಬೇಕೆಂದು ಕರೆ ನೀಡಿದರು. ಪ್ರಮುಖವಾಗಿ ಕಾರ್ಮಿಕರಿಗೆ ಮಧ್ಯವರ್ತಿಗಳಿಂದ ಹಲವು ಸಂಕಷ್ಟಗಳಿವೆ ಅದನ್ನು ಅರಿತು ಕಾರ್ಮಿಕರ ರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ಕಾರ್ಮಿಕರಿಗೆ ಅನೂಕುಲವಾಗುವ ಅರೋಗ್ಯ ಶಿಬಿರ, ಇ-ಶ್ರಮ ಕಾರ್ಡ್ ಮಾಡುವ ಶಿಬಿರಗಳನ್ನು ಅಯೋಜಿಸಿ ಅ ಮೂಲಕ ಪಕ್ಷಕ್ಕೆ ಕಾರ್ಮಿಕ ವಲಯದ ಸ್ನೇಹಿತರನ್ನು ಜೋಡಿಸುವುದು ನಮ್ಮ ಮೊದಲ ಆದ್ಯತೆಯಾಗಬೇಕು ಎಂದು ತಿಳಿಸಿದರು.

ರಾಜ್ಯ ಕಾರ್ಯದರ್ಶಿಗಳಾದ ಶ್ರೀಮತಿ ಲಕ್ಷ್ಮೀ ಅಶ್ವಿನ್ ಗೌಡ ರವರು ಮಾತನಾಡಿ ಭಾರತ ಇಂದು ವಿಶ್ವದ 5ನೇ ದೊಡ್ಡ ಅರ್ಥಿಕವಾಗಿ ಹೊರಹೊಮ್ಮಿದೆ, ಈ ಸಾಧನೆಯಲ್ಲಿ ಅಸಂಘಟಿತ ಕಾರ್ಮಿಕ ವಲಯದ ಕೊಡುಗೆ ಅಪಾರ ಹಾಗೂ ನಮ್ಮ ಜಿಡಿಪಿಯ ಶೇ. 50 ಈ ವಲಯದಿಂದ ಬರುತ್ತಿರುವುದು ಅಭಿನಂದನಾರ್ಹ ಎಂದು ಹೇಳಿದರು. ನಮ್ಮ ದೇಶದ ಹೆಚ್ಚಿನ ಜನಸಂಖ್ಯೆ ಈ ವಲಯದಲ್ಲಿ ಕಾರ್ಯನಿರ್ವಹಣೆಯಲ್ಲಿ ತೊಡಗಿದ್ದಾರೆ, ಪ್ರಕೋಷ್ಠದ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಕಾರ್ಮಿಕರಿಗೆ ಕೌಶಲ್ಯದ ಕುರಿತು ಅರಿವು ಮೂಡಿಸುವ ಅಭಿಯಾನದಿಂದ ಇನ್ನಷ್ಟು ಕೊಡುಗೆಯನ್ನು ನಿರೀಕ್ಷಿಸಬಹುದಾಗಿದೆ ಎಂದು ಹೇಳಿದರು. ಸದೃಡ ಪಕ್ಷ ಹಾಗೂ ಸಮಾಜವನ್ನು ಕಟ್ಟೋಣ, ಸನಾತನ ಧರ್ಮದ ರಕ್ಷಣೆಗೆ ಪ್ರಾಮುಖ್ಯತೆ ನೀಡೋಣ ಮತ್ತು ಪ್ರಸ್ತುತ ನಡೆಯುತ್ತಿರುವ ಬಿಜೆಪಿ ಸದಸ್ಯತ್ವ ಅಭಿಯಾನವನ್ನು ಯಶಸ್ವಿಗೊಳಿಸೋಣ ಎಂದು ಕರೆ ನೀಡಿದರು.

ಸಮಾರೋಪದಲ್ಲಿ ರಾಜ್ಯ ಬಿಜೆಪಿ ಕಾರ್ಯದರ್ಶಿಗಳಾದ ಶ್ರೀಮತಿ ಲಕ್ಷ್ಮಿ ಅಶ್ವಿನ್ ಗೌಡ, ಪ್ರಕೋಷ್ಠಗಳ ರಾಜ್ಯ ಸಂಯೋಜಕರಾದ ಶ್ರೀ ಎಸ್. ದತ್ತಾತ್ರಿ, ಪ್ರಕೋಷ್ಠಗಳ ರಾಜ್ಯ ಸಹ ಸಂಯೋಜಕರಾದ ಶ್ರೀ ಭೋಜರಾಜ ಕರೋದಿಯವರು, ಅಸಂಘಟಿತ ಕಾರ್ಮಿಕ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ಶ್ರೀ ರಾಜೇಶ್ ವೆಂಕಟೇಶ್, ರಾಜ್ಯ ಸಹಸಂಚಾಲಕರಾದ ಶ್ರೀ ಸಚಿನ್ ಗೌಡ ಅಸಂಘಟಿತ ಕಾರ್ಮಿಕರ ಪ್ರಕೋಷ್ಠದ ರಾಜ್ಯ ಪದಾಧಿಕಾರಿಗಳು ಮತ್ತು ವಿವಿಧ ಜಿಲ್ಲಾ ಸಂಚಾಲಕರು ಸಹ ಸಂಚಾಲಕರು ಉಪಸ್ಥಿತರಿದ್ದರು.



# ಮಾಸದ ಮಾಧುರ್ಯ 90ನೇ ಕಾರ್ಯಕ್ರಮದಲ್ಲಿ ಮಿಮಿಕ್ರಿ ಕಲಾವಿದರಿಂದ 'ಪ್ರತಿಧ್ವನಿ'

ಜಗನ್ನಾಥ ಬಳಗದ 90ನೇ ಕಾರ್ಯಕ್ರಮವು 03-10-2024ರಂದು ನಾಡಿನ ಪ್ರಸಿದ್ಧ ಮಿಮಿಕ್ರಿ ಕಲಾವಿದರಾದ ಶ್ರೀ ಗೋಪಿ ಹಾಗೂ ಮೈಸೂರು ಶ್ರೀಹರಿ ಅವರಿಂದ ಜಗನ್ನಾಥ ಭವನದ ಮಂಥನ ಸಭಾಂಗಣದಲ್ಲಿ ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು.

ಎಲ್ಲರನ್ನೂ ಪರಸ್ಪರ ಮಾತನಾಡುವ, ನೋಡುವ, ಕರೆಸಿಕೊಳ್ಳುವ ಅವರೊಡನೆ ಓಡಾಡುವ, ಪ್ರೀತಿಸುವ, ದ್ವೇಷಿಸುವ, ಆಟ-ಪಾಠಗಳಲ್ಲಿ ಪಾಲ್ಗೊಳ್ಳುವ ಮುಖಾಂತರ ಪ್ರಕೃತಿಯೊಂದಿಗಿನ ಸಂಬಂಧದಿಂದ ದೂರ ದೂರ ಸರಿಯುತ್ತಿರುವ ಸನ್ನಿವೇಶದಲ್ಲಿ ಹಲವು ವ್ಯಕ್ತಿಗಳ, ಪ್ರಾಣಿ ಪಕ್ಷಿಗಳ ಯಥಾವತ್ ಧ್ವನಿಯನ್ನು ಪ್ರತಿಧ್ವನಿಸುವ ಕಲೆಯನ್ನು ಕರತಲಾಮಲಕ ಮಾಡಿಕೊಂಡಿರುವ ಶ್ರೀ ಮಿಮಿಕ್ರಿ ಗೋಪಿ ಹಾಗೂ ಕಿರುತೆರೆ, ಹಿರಿತೆರೆಗಳಲ್ಲಿ ನಟಿಸುತ್ತಿರುವ ಮೈಸೂರು ಶ್ರೀ ಹರಿ ಅವರಿಬ್ಬರು ಜಗನ್ನಾಥ ಭವನದ ಮಂಥನ ಸಭಾಂಗಣಕ್ಕೆ ತಮ್ಮ ಧ್ವನಿಯ ಮೂಲಕ ಹಲವು ಕಲಾವಿದರನ್ನು, ರಾಜಕಾರಿಣಿಗಳನ್ನು ಕರೆಸಿದ್ದು ಆಗಮಿಸಿದ್ದ ಕಲಾಭಿಮಾನಿಗಳನ್ನು ರಂಜಿಸುವಲ್ಲಿ ಅತ್ಯಂತ ಯಶಸ್ವಿಯಾಯಿತು. ಮೈಸೂರು ಶ್ರೀ ಹರಿಯವರು ಚಲನಚಿತ್ರದಲ್ಲಿ 1950ರ ದಶಕದಿಂದ ಇಂದಿನ ವರೆಗೆ ಯಾವ ರೀತಿಯ ಬದಲಾವಣೆಯಾಯಿತು, ಅಂದಿನ ಕಲಾವಿದರು, ಸಾಹಿತ್ಯ ಹೇಗಿತ್ತು, ಇಂದು ಹೇಗಿದೆ ಎಂಬುದನ್ನು ಅಂದಿನ ಹಾಡು, ಇಂದಿನ ಹಾಡನ್ನು ಹಾಡುವುದರ ಮುಖಾಂತರ ತೋರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ಮಹಾಲಕ್ಷ್ಮಿ ಲೇ ಔಟ್‌ನ ಶಾಸಕರಾದ ಶ್ರೀ ಕೆ. ಗೋಪಾಲಯ್ಯನವರು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ನನ್ನ ಕ್ಷೇತ್ರದ ಜನತೆಯ ಬೇಡಿಕೆ, ಆಕಾಂಕ್ಷೆಗಳಿಗೆ ತಕ್ಷಣಕ್ಕೆ ಸ್ಪಂದಿಸುತ್ತೇನೆ ಹಾಗಾಗಿ ಇಲ್ಲಿಯ ಜನತೆಯು ಸದಾ ನನ್ನನ್ನು ಆಶೀರ್ವದಿಸಿದ್ದಾರೆ. ಇಂದಿನ ಈ ಕಾರ್ಯಕ್ರಮಕ್ಕೂ ನನ್ನ ಸಹಕಾರವಿದ್ದೇ ಇದೇ ಎಂದು ಹೇಳಿ ಕಾರ್ಯಕ್ರಮವನ್ನು ಪೂರ್ಣ ವೀಕ್ಷಿಸಿ ನಂತರ ಕಲಾವಿದರಿಗೆ ಸನ್ಮಾನಿಸಿದರು. ಜಗನ್ನಾಥ ಬಳಗದ ಸಂಯೋಜಕರಾದ ಶ್ರೀ ದತ್ತಗುರು ಹೆಗಡೆ ಹಾಗೂ ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಲೋಕೇಶ್ ಅಂಬೆಕಲ್ಲು ರವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ದಾಮೋದರ ನಾಯ್ಕರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.




# ಸ್ವಚ್ಛತೆಗೂ ಜನಾಂದೋಲನ ರೂಪ ಕೊಟ್ಟ ನಮೋ...

**ಪ್ರಧಾನಿ ನರೇಂದ್ರ ಮೋದಿ ಅವರ ಮಾತಿನಲ್ಲಿ ಅದ್ಭುತ ಶಕ್ತಿಯಿದೆ. ಅವರ ಒಂದು ಕರೆಗೆ ಭಾರತೀಯರೆಲ್ಲರೂ ಸ್ಪಂದಿಸುತ್ತಿದ್ದಾರೆ. ಜಾತಿ, ಮತ, ಪಂಥ, ಪಕ್ಷದ ಗೆರೆ ಮೀರಿ ಅವರ ಶ್ರೇಷ್ಠ ವಿಚಾರಗಳ ಬಗ್ಗೆ ಚಿಂತನೆಗಳು ನಡೆದಿವೆ. ಅವರ ಘೋಷಣೆ ದೇಶದ ಜನಪ್ರಿಯ ಯೋಜನೆಯಾಗುತ್ತಿವೆ. ಅವರ ಒಂದು ಹೇಳಿಕೆ ಇಡೀ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ನಾಂದಿ ಹಾಡುತ್ತಿದೆ. ಮೋದಿ ಅವರ ದೂರದೃಷ್ಟಿತ್ವದಲ್ಲಿ ಕಾರ್ಯಗತವಾದ ನೂರಾರು ಯೋಜನೆಗಳು ಭಾರತದ ದಿಕ್ಕು-ದೆಸೆಯನ್ನೇ ಬದಲಿಸಿದೆ. ಏಕ್ ಭಾರತ್- ಶ್ರೇಷ್ಠ ಭಾರತ್ ಎಂಬ ಪರಿಕಲ್ಪನೆ ದಿನ, ದಿನಕ್ಕೂ ಗಟ್ಟಿಗೊಳಿಸುತ್ತಿದೆ. 10 ವರ್ಷದ ಹಿಂದೆ ಸ್ವಚ್ಛ ಭಾರತ್ ಕುರಿತು ಮೋದಿ ಅವರು ಆಡಿದ ಒಂದು ಮಾತು ಭಾರತೀಯರ ಮನೆ, ಮನ ಶುಚಿಗೊಳಿಸಿದೆ.**



**ಸದಾನಂದ ಜೋಶಿ**
ಹಿರಿಯ ಪತ್ರಕರ್ತರು, ಬೀದರ್

ಹೌದು. ಈಗ ಭಾರತ ಬದಲಾಗಿದೆ. ಅಷ್ಟೇ ಅಲ್ಲ, ಭಾರತೀಯರ ಮನಸ್ಥಿತಿ, ಕಾರ್ಯಶೈಲಿಯೂ ಸಹ ಬಹಳ ಬದಲಾಗಿದೆ. ನಾವು ಈಗ ಪ್ರತಿಯೊಂದು ವಿಷಯ, ಪ್ರತಿಯೊಂದು ಯೋಜನೆ ಹಾಗೂ ಪ್ರತಿಯೊಂದು ವಿಚಾರವನ್ನು ಸಹ ನವಭಾರತ ನಿರ್ಮಾಣದ ಚಿಂತನೆಯೊಂದಿಗೆ ನೋಡುತ್ತಿದ್ದೇವೆ. 2047ರಲ್ಲಿ ವಿಕಸಿತ ಭಾರತ ನಿರ್ಮಾಣದ ಕನಸಿನ ಗುರಿ ಸಾಕಾರಕ್ಕಾಗಿ ಹೆಜ್ಜೆ ಹಾಕುತ್ತಿದ್ದೇವೆ. ಅಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರ ಒಂದು ಸಣ್ಣ ಕರೆ ಸಹ ಇಂದು ದೇಶದಾದ್ಯಂತ ಜನಾಂದೋಲನದ ರೂಪವನ್ನು ಪಡೆದುಕೊಳ್ಳುತ್ತಿದೆ. ಇದಕ್ಕೆ ಸ್ವಚ್ಛ ಭಾರತ್, ಸ್ವಚ್ಛತಾ ಹಿ ಸೇವಾ ಅಭಿಯಾನ ಶ್ರೇಷ್ಠ ಉದಾಹರಣೆ ಎನಿಸಿದೆ.

ಪ್ರಧಾನಿಯಾದ ಬಳಿಕ ಮೊದಲ ಬಾರಿ ದಿಲ್ಲಿಯ ಕೆಂಪು ಕೋಟೆಯಿಂದ ಸ್ವಾತಂತ್ರ್ಯೋತ್ಸವ (2014ರ ಆಗಸ್ಟ್ 15ರಂದು) ನಿಮಿತ್ತ ದೇಶವನ್ನುದ್ದೇಶಿಸಿ ಮಾತನಾಡಿದ ಮೋದಿ ಅವರು, ಸ್ವಚ್ಛ ಭಾರತ್ ಮಿಷನ್ ಘೋಷಿಸಿದರು. ಸ್ವಚ್ಛತೆಯ ಕುರಿತು ತಮ್ಮ ದೃಷ್ಟಿಕೋನವನ್ನು ಬಿಚ್ಚಿಟ್ಟರು. ಹರ್ ಘರ್ ಶೌಚಾಲಯ, ಬಯಲು ಮುಕ್ತ ಶೌಚದ ಅಗತ್ಯತೆ, ಅನಿವಾರ್ಯತೆ ಮಹತ್ವ ಸಾರಿದರು. ಮನೆಯಿಂದಲೇ ಆಗಬೇಕಾದ ಶುಚಿತ್ವದ ಮಹತ್ವ ತಿಳಿಸಿದರು. ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಪ್ರಧಾನಿಯೊಬ್ಬರು ಮೊದಲ ಬಾರಿ ಶೌಚಾಲಯ, ಬಯಲು ಬಹಿರ್ದೆಸೆ ಕುರಿತು ಅನೇಕ ವಿಷಯ ದೇಶದ ಮುಂದಿಟ್ಟರು. ಕೆಲವರು ಪ್ರಧಾನಿ ಸ್ವಾತಂತ್ರ್ಯೋತ್ಸವದ ಭಾಷಣ ಇದಾ? ಎಂದು ಮೂಗು ಮುರಿದಿದ್ದುಂಟು. ಆದರೆ ಅವರ ಈ ಮಾತು ದೇಶದಲ್ಲಿ ದೊಡ್ಡ ಜನಾಂದೋಲನವಾಗಿ ಬದಲಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಮೋದಿ ಅವರ ಈ ಕಾನ್ಸೆಪ್ಟ್ ಕ್ಲೀನ್ ಇಂಡಿಯಾಗೆ ಭದ್ರ ಬುನಾದಿ ಹಾಕಿದೆ. ಸ್ವಚ್ಛತೆಯ ಜೊತೆಗೆ ಇದು

ಜನರ ಸ್ವಸ್ಥತೆಗೂ(ಆರೋಗ್ಯಕ್ಕೂ) ಹೊಸ ಆಯಾಮ ನೀಡಿದೆ.

ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ್ ಘೋಷಣೆಗೆ ಇದೀಗ 10 ವರ್ಷವಾಗಿದೆ. ಹೀಗಾಗಿ ದಶಕದ ಈ ಹಾದಿ ಮೇಲೆ ನಾವೆಲ್ಲ ಬೆಳಕು ಚೆಲ್ಲುವ ಅಗತ್ಯವಿದೆ. ಸ್ವಚ್ಛ ಭಾರತ್ ಮಿಷನ್ ಘೋಷಣೆ ಜಾರಿ ನಂತರ ಇಡೀ ಭಾರತದಲ್ಲಿ ದೊಡ್ಡ ಶುಚಿತ್ವದ ಕ್ರಾಂತಿ ನಡೆದಿದೆ. ಸರ್ಕಾರದ ಪ್ರತಿ ಯೋಜನೆಗಳು ಮಾತ್ರವಲ್ಲದೆ ಜನರ ನಿತ್ಯ ಜೀವನದ ವಿಧಾನದಲ್ಲಿಯೂ ಈಗ ಸ್ವಚ್ಛತೆ ಅವಿಭಾಜ್ಯ ಅಂಗವಾಗಿ ಕಾರ್ಯ ಮಾಡುತ್ತಿರುವುದು ವಿಶೇಷವಾಗಿದೆ. ಹೀಗಾಗಿ ಕೇಂದ್ರ ಸರ್ಕಾರದ ಘೋಷಣೆಯಂತೆ ಇನ್ನೆರಡು ವರ್ಷದಲ್ಲಿ ಭಾರತವು ಕಸಮುಕ್ತ ಆಗುವುದರಲ್ಲಿ ಅನುಮಾನವೇ ಇಲ್ಲ ಎಂಬ ಆಶಾಭಾವ ಮೂಡಿಸಿದೆ.

ಸ್ವಚ್ಛ ಭಾರತ್ ಮಿಷನ್ ಘೋಷಣೆಯಾದ ಒಂದು ದಶಕದ ಅವಧಿಯಲ್ಲಿ ದೇಶದಲ್ಲಿ 12 ಕೋಟಿಗೂ ಅಧಿಕ ಶೌಚಾಲಯಗಳು ನಿರ್ಮಾಣವಾಗಿವೆ. ದೇಶದಲ್ಲಿರುವ ಸುಮಾರು 5 ಸಾವಿರ ನಗರ ಸ್ಥಳೀಯ ಸಂಸ್ಥೆಗಳು, ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳು ಬಯಲು ಶೌಚ ಮುಕ್ತ (ಒಡಿಎಫ್) ಎಂದು ಘೋಷಣೆಯಾಗಿವೆ. ಶೇ.95ರಷ್ಟು ವಾರ್ಡ್‌ಗಳ ಎಲ್ಲ ಮನೆಗಳ ತ್ಯಾಜ್ಯ ನೇರವಾಗಿ ಸಂಗ್ರಹಿಸಲಾಗುತ್ತಿದೆ! ಶೇ.90 ರಷ್ಟು ವಾರ್ಡ್‌ಗಳು ತ್ಯಾಜ್ಯದ ಮೂಲ ಪ್ರತ್ಯೇಕತಾ ವ್ಯವಸ್ಥೆ ಹೊಂದಿವೆ. ಹೀಗೆ ನಾನಾ ಕ್ರಮಗಳು ದೇಶದ ಸ್ವಚ್ಛತೆಯಲ್ಲಿ ಆ ಮೂಲಾಗ್ರ ಬದಲಾವಣೆಗೆ ನಾಂದಿ ಹಾಡಿದೆ. ಪರಿಸರ ಸಂರಕ್ಷಣೆ, ಜನಾರೋಗ್ಯ ಕಾಪಾಡುವಲ್ಲಿ ಈ ಯೋಜನೆ ಮಹತ್ವದ ಪಾತ್ರ ವಹಿಸುತ್ತಿದೆ.

ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲೇ ಎಲ್ಲೆಡೆ 'ಸ್ವಚ್ಛತಾ ಹಿ ಸೇವಾ ಪಾಕ್ಷಿಕ ಅಭಿಯಾನ'ವನ್ನು ಸಹ ವಿಶಿಷ್ಟವಾಗಿ ನಡೆಸಲಾಗುತ್ತಿದೆ. ಸೆ.17 ರಿಂದ ಅಕ್ಟೋಬರ್ 2 ರವರೆಗೆ ದೇಶದೆಲ್ಲೆಡೆ ಈ ಅಭಿಯಾನ ಯಶಸ್ವಿಯಾಗಿ ಜರುಗಿದೆ. ಕರ್ನಾಟಕದ ಬೀದರ್‌ನಿಂದ ಹಿಡಿದು ಚಾಮರಾಜನಗರದವರೆಗೂ ಹಲವಾರು ಅರ್ಥಪೂರ್ಣ ಕಾರ್ಯಚಟುವಟಿಕೆ ನಡೆದಿವೆ. ಸೆಪ್ಟೆಂಬರ್ 17ರಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಜನ್ಮದಿನವೂ ಇರುವ ಕಾರಣ ಬಿಜೆಪಿ ಪಾಳಯದಲ್ಲಂತೂ ಇದು ಮತ್ತಷ್ಟು ಉತ್ಸಾಹ ತುಂಬಿತ್ತು. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಜನ್ಮ ದಿನದಂದು ಶುರುವಾದ ಅಭಿಯಾನ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರ ಜನ್ಮ ದಿನವಾದ ಅ.2ರಂದು ಕೊನೆಗೊಂಡಿತು. ಈ ಪಾಕ್ಷಿಕ ಜನರಲ್ಲಿ ಸ್ವಚ್ಛತೆ ಬಗ್ಗೆ



ಇನ್ನಷ್ಟು ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು. ಪರಿಸರ ಜೊತೆಗೆ ಸ್ವಭಾವ, ಸಂಸ್ಕಾರಗಳು ಸಹ ಸ್ವಚ್ಛವಾಗಿರಲಿ ಎಂಬ ಸಂದೇಶ ಸಾರಿರುವುದು ಈ ಸಲದ ಪಾಕ್ಷಿಕಕ್ಕೆ ಮತ್ತಷ್ಟು ಮಹತ್ವ ತಂದುಕೊಟ್ಟಿದೆ.

ಸ್ವಚ್ಛತೆ ಎಂಬ ಮಾತಿನ ಹಿಂದೆ ಸೇವೆ ಎಂಬ ಮೂಲ ಪರಿಕಲ್ಪನೆ ಎಷ್ಟು ಪರಿಣಾಮಕಾರಿಯಾಗಿರುತ್ತದೆ ಎಂಬುದು ಈಗ ನಮಗೆಲ್ಲ ಗೊತ್ತಾಗುತ್ತಿದೆ. ಸ್ವಚ್ಛ ಭಾರತ್ ಇದು ಸಾಮಾನ್ಯವಲ್ಲ. ಇದು ಸಮೃದ್ಧ ಭಾರತ, ಸಶಕ್ತ ಭಾರತ, ವಿಕಸಿತ ಭಾರತ ನಿರ್ಮಾಣಕ್ಕೂ ಮೂಲ ಎಂಬುದು ಸುಳ್ಳಲ್ಲ. ಹೀಗಾಗಿ ನಾವೆಲ್ಲರೂ ಸ್ವಚ್ಛತೆ, ಪರಿಸರ ಸಂರಕ್ಷಣೆಗೆ ಎಷ್ಟೊಂದು ಮಹತ್ವ ಕೊಡಬೇಕು ಎಂಬುದನ್ನು ಅರಿತು ಹೆಜ್ಜೆ ಇಡಬೇಕಾಗಿದೆ. ದಶಕದಲ್ಲಿ ಸಾಕಷ್ಟು ಸಾಧನೆಯಾಗಿದೆ. ಆದರೆ ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟಿದೆ. ಇದರ ಕಡೆ ಎಲ್ಲರೂ ಗಮನಹರಿಸಬೇಕಿದೆ.

ಪ್ರಧಾನಿ ಶ್ರೀ ಮೋದಿ ಅವರ ಸ್ವಚ್ಛ ಭಾರತ್ ಕನಸು ನನಸಾಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸ್ವತಂತ್ರ ಭಾರತದಲ್ಲಿ ಮೊದಲ ಬಾರಿ ಜನ ಸೇವೆ, ಭಾರತಾಂಬೆ ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡು ದಿನದ 18 ಗಂಟೆ ದುಡಿಯುವ ಪ್ರಧಾನಿ ನಮಗೆ ಸಿಕ್ಕಿದ್ದಾರೆ. ಪ್ರಧಾನಿ ಹುದ್ದೆಗೆ ಪ್ರಧಾನ ಸೇವಕ ಎಂದು ಸ್ವೀಕರಿಸಿ ದುಡಿಯುತ್ತಿದ್ದಾರೆ. ಇಷ್ಟೊಂದು ವಿಶಿಷ್ಟ ವ್ಯಕ್ತಿತ್ವವುಳ್ಳ ಪ್ರಧಾನಿಯನ್ನು ನೋಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ. ಬನ್ನಿ, ಮುಂದಿನ ಪೀಳಿಗೆಯ ಉಜ್ವಲ ಭವಿಷ್ಯಕ್ಕಾಗಿ ಸ್ವಚ್ಛ, ಸುಂದರ, ಸಮೃದ್ಧ, ಸಶಕ್ತ ಭಾರತವನ್ನು ಕಟ್ಟೋಣ.

## ಚರ್ಚೆಗೊಂದು ಸಾಲು...

**...ಸಂಘಟನೆಯ ಸದಸ್ಯರಾದವರನ್ನು ಕಾರ್ಯಕರ್ತರನ್ನಾಗಿಸುವುದೂ ನಮ್ಮ ಜವಾಬ್ದಾರಿಯೇ**



# ಛಲವಾದಿ ನಾರಾಯಣ ಸ್ವಾಮಿ ಅವರ ಹೋರಾಟವನ್ನು ಬಿಜೆಪಿ ಗುರುತಿಸಿದೆ

**- ಬಿ.ವೈ. ವಿಜಯೇಂದ್ರ**

**ಶೋ**ಷಿತ ಪೀಡಿತ ಸಮುದಾಯದ ದನಿಯಾಗಿರುವ ಹೋರಾಟಗಾರ ಶ್ರೀ ಛಲವಾದಿ ನಾರಾಯಣ ಸ್ವಾಮಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಈ ಸನ್ನಿವೇಶ ತುಂಬಾ ಸಂತೋಷ ಅನಿಸುತ್ತಿದೆ. ಹೋರಾಟದ ಕಿಚ್ಚು ನಶಿಸುತ್ತಿರುವ ಕಾಲಘಟ್ಟವಿದು. ಛಲವಾದಿ ನಾರಾಯಣ ಸ್ವಾಮಿ ಅವರು ಬುಡಕಟ್ಟು ನಾಯಕರಾಗಿ ಹೋರಾಟಗಾರರಾಗಿ ಸಮಾಜದಲ್ಲಿ ಮೇಲೆ ಬಂದವರು. ಅವರನ್ನು ಗುರುತಿಸಬೇಕಾದ ಅಗತ್ಯವಿದೆ ಎಂದು ಹೇಳಿದಾಗ ಹೆಮ್ಮೆಯಿಂದ ಒಪ್ಪಿಗೆ ಸೂಚಿಸಿದರು ಎಂದು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ ವಿಜಯೇಂದ್ರ ಹೇಳಿದರು.

ರೈತಾಪಿ ವರ್ಗದ ಪರವಾಗಿ ಹೋರಾಟ ಮಾಡಿದ ರಾಜ್ಯದ ಏಕೈಕ ನಾಯಕರೆಂದರೆ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್ ಯಡಿಯೂರಪ್ಪನವರು. ಅವರನ್ನು ಎಲ್ಲ ಕಡೆ ಹೋರಾಟಗಾರ ಎಂದು ಗುರುತಿಸುತ್ತಾರೆ. ಮಾಜಿ ಮುಖ್ಯಮಂತ್ರಿ ಎಂದಲ್ಲ, ಧ್ವನಿ ಇಲ್ಲದವರ ಪರವಾಗಿ ಹೋರಾಟ ಮಾಡಿದವರು ಅವರು. ಅವರು ರಾಜ್ಯದಲ್ಲಿ ಮಾಡಿದಷ್ಟು ಹೋರಾಟಗಳು ಬೇರೆ ಯಾರೂ ಮಾಡಿರಲು ಸಾಧ್ಯವಿಲ್ಲ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಗರಡಿಯಲ್ಲಿ ಬೆಳೆದು ಬಂದವರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಮನೆಯಲ್ಲಿ ತಂದೆ ತಾಯಿಯ ಆದರ್ಶ ನಮ್ಮ ಮನೆಯಲ್ಲಿ ಇಂದಿನ ವರೆಗೂ ನಡೆದು ಬಂದಿದೆ. ಮನೆಗೆ ಯಾರು ಬಂದರೂ ಯಾವ ಜಾತಿ ವರ್ಗ ಎಂದು ಕೇಳುವುದಿಲ್ಲ. ಊಟ ಆಗಿದೆಯಾ, ತಿಂಡಿ ಆಗಿದೆಯಾ ಎಂದಷ್ಟೇ ಕೇಳುತ್ತಿದ್ದರು. ಅತಿಥಿ ಸತ್ಕಾರ ಮಾಡುತ್ತಿದ್ದರು.

ಡಾ. ಬಿ.ಆರ್. ಅಂಬೇಡ್ಕರ್ ಹೆಸರು ಹೇಳಿಕೊಂಡು 50-60 ವರ್ಷ ಆಡಳಿತ ಮಾಡಿದ ಪಕ್ಷ ಅಂಬೇಡ್ಕರರ ಅಂತ್ಯ ಸಂಸ್ಕಾರವನ್ನು ಕೂಡ ಗೌರವಯುತವಾಗಿ ಮಾಡಲಿಲ್ಲ. ಅಂಬೇಡ್ಕರ್ ಹುಟ್ಟೂರು ಮಹು ಪಟ್ಟಣಕ್ಕೆ ದೇಶದ ಪ್ರಧಾನಿಯಾಗಿ ಮೊದಲ ಬಾರಿ ಭೇಟಿ ಕೊಟ್ಟವರು ನರೇಂದ್ರ ಮೋದಿಯವರು. ಮೋದೀಜಿ ಪ್ರಧಾನ ಸೇವಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ನುಡಿದರು.

ನಗರಕ್ಕೆ ಸೀಮಿತವಾಗಿದ್ದ ಪಕ್ಷ ಎಂಬ ಹೆಸರಿದ್ದ ಬಿಜೆಪಿಯನ್ನು ಹಳ್ಳಿ ಹಳ್ಳಿಗೆ ತೆಗೆದುಕೊಂಡು ಹೋದವರು ಶ್ರೀ ಯಡಿಯೂರಪ್ಪ, ಶ್ರೀ ಅನಂತಕುಮಾರ್ ಅವರಂತಹ ಹಿರಿಯ ಮುಖಂಡರು,. ಬ್ರಾಹ್ಮಣರ ಪಕ್ಷ, ನಗರಕ್ಕೆ ಸೀಮಿತವಾಗಿದ್ದ ಪಕ್ಷ ಎಂಬ ಹೆಸರಿನಿಂದ ಎಲ್ಲರ ಪಕ್ಷ ಎಂಬ ಹೆಸರಿಗೆ ಬದಲಾವಣೆಗೆ ಕಾರಣರಾದವರು ಈ ಮುಖಂಡರು. ಶೋಷಿತ ಸಮುದಾಯದ ಧ್ವನಿಯಾಗಿದ್ದ ಶ್ರೀ ಎಲ್.ಜಿ. ಹಾವನೂರು ಅವರನ್ನು ಬಿಜೆಪಿಗೆ ಕರೆತಂದವರು ಬಿಎಸ್‌ವೈ. ಕೇಂದ್ರ ಸಚಿವ ಸಂಪುಟದಲ್ಲಿ 12ಕ್ಕೂ ಹೆಚ್ಚು ಮಂದಿ ಪರಿಶಿಷ್ಟ ಜಾತಿ ಪಂಗಡದವರಿದ್ದಾರೆ. ಅವರಿಗೆಲ್ಲ ಬಿಜೆಪಿ ಸ್ಥಾನಮಾನ, ಗೌರವ ನೀಡಿದೆ. ಮುಂದಿನ ದಿನಗಳಲ್ಲಿ ಎಲ್ಲರೂ ಒಟ್ಟಾಗಿ ಸರಿಯಾದ ದಿಕ್ಕಿನಲ್ಲಿ ನಡೆಯೋಣ ಎಂದು ವಿಜಯೇಂದ್ರ ಹೇಳಿದರು.

ಸಮಾರಂಭದಲ್ಲಿ ಶ್ರೀ ಸಿದ್ದರಾಮ ಶರಣರು ಬೆಲ್ದಾಳ ಮಠ, ಶ್ರೀ ಸೇವಾಲಾಲ್ ಸ್ವಾಮೀಜಿ, ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸೇರಿದಂತೆ ಐವರು ಸ್ವಾಮೀಜಿಗಳು, ಮಾಜಿ ಉಪ ಮುಖ್ಯಮಂತ್ರಿ ಶ್ರೀ ಗೋವಿಂದ ಕಾರಜೋಳ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಪಿ.ರಾಜೀವ್ ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು.

# ಸಂಕ್ರಮಣ ಸ್ಥಿತಿಯಲ್ಲಿ ಜಗತ್ತು



**- ಬಿ.ಎಲ್. ಸಂತೋಷ್,**
ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳು

ಬಿಜೆಪಿ ಎಂದ ಕೂಡಲೇ ಕೆಲವು ವಿಚಾರಗಳಿಗೆ ಪರ, ಕೆಲವಕ್ಕೆ ವಿರೋಧ ಅನ್ನುವ ಬಣ್ಣ ಹಚ್ಚುತ್ತಾರೆ. ಹಾಗೆಂದ ಮಾತ್ರಕ್ಕೆ ಬಿಜೆಪಿ ಸಂಘಟನೆ ಬದಲಾಗುವುದಿಲ್ಲ. ಅದಕ್ಕೆ ಅದರದ್ದೇ ಆದ ಚೌಕಟ್ಟಿದೆ. ಬಿಜೆಪಿ ಮೊದಲ ಸಲ ಸಂಪೂರ್ಣ ಬಲದಿಂದ ಅಧಿಕಾರಕ್ಕೆ ಬಂದಾಗ ಮೊದಲು ರಾಷ್ಟ್ರಪತಿಯಾಗಿ ಆಯ್ಕೆ ಮಾಡಿದ್ದು ದಲಿತ ಸಮುದಾಯದ ರಾಮನಾಥ್ ಕೋವಿಂದ ಅವರನ್ನು. ಎರಡನೇ ಸಲ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದಾಗ ಆದಿವಾಸಿ ಮಹಿಳೆ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಹುದ್ದೆಗೆ ಆಯ್ಕೆ ಮಾಡಿತು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್ ಸಂತೋಷ್ ಹೇಳಿದರು.

ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಶ್ರೀ ಛಲವಾದಿ ನಾರಾಯಣಸ್ವಾಮಿ ಅವರಿಗೆ ಇಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪದವೀಧರರ ಸಂಘ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿ ರಾಜಕೀಯವನ್ನು ಒಪ್ಪದ ಅನೇಕ ಸಂಘಟನೆಗಳ ಕಾರ್ಯಕರ್ತರೂ ಇಲ್ಲಿದ್ದಾರೆ. ಅವರೆಲ್ಲರೂ ಛಲವಾದಿ ನಾರಾಯಣಸ್ವಾಮಿಯವರ ಅಭಿಮಾನಿಗಳು. ಅವರಿಗಿರುವ ಛಲದ ಆ ಗುಣ ಅವರು ಇಲ್ಲಿಗೆ ಬರಲು ತಾಕತ್ತು ಕೊಟ್ಟಿದೆ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಎಲ್ಲೆಡೆ ಹೇಳುತ್ತಿದ್ದುದು- ಮೂರು ಶಬ್ದಗಳು. ಶಿಕ್ಷಣ, ಸಂಘಟನೆ ಮತ್ತು ಸಂಘರ್ಷ. ಶಿಕ್ಷಣದ ಮೂಲಕ ವ್ಯಕ್ತಿತ್ವ ನಿರ್ಮಾಣ ಮತ್ತು ಉತ್ಕೃಷ್ಟತೆ ಸಾಧಿಸಬೇಕು. ಸಂಘಟನೆ ಮೂಲಕ ಶಕ್ತಿ ಪಡೆದುಕೊಳ್ಳಬೇಕು. ಒಟ್ಟಿಗಿದ್ದರೆ ಮಾತ್ರ ಬಲ, ಇನ್ನು ಸಹಜವಾಗಿ ನ್ಯಾಯ ಸಿಗದ ಕಡೆ ಸಂಘರ್ಷ ಅನಿವಾರ್ಯ. ಆ ದಾರಿಯಲ್ಲಿ ಸಾಗುತ್ತ ಸಮಾಜಕ್ಕೆ ದಿಕ್ಕು ತೋರಿಸುತ್ತಿರುವ ಹಲವು ಮುಖಂಡರು ಇಲ್ಲಿದ್ದಾರೆ. ದಲಿತರ ಏಳಿಗೆ, ಶೋಷಿತರ ಏಳಿಗೆಗೆ ಕೆಲಸ ಮಾಡಿದವರು ಬಹಳ ಮಂದಿ ಇಲ್ಲಿದ್ದಾರೆ. ದಲಿತರ, ಹಿಂದುಳಿದವರ ಏಳಿಗೆಗೆ ಬರೀ ದಲಿತ ಸಮುದಾಯದವರೇ ಹೋರಾಡಿದ್ದಾರೆ ಎಂದರೆ ಸೂಕ್ತವಲ್ಲ. ಮಂಗಳೂರಿನ ಕುದ್ಮುಲ್ ರಂಗರಾಯರಂತಹ ಅನೇಕ ಹಿರಿಯರು ಶೋಷಿತರ ಪರವಾಗಿ ಹೋರಾಡಿದ್ದಾರೆ ಎಂದು ಸಂತೋಷ್ ಸ್ಮರಿಸಿಕೊಂಡರು.

ಶೋಷಿತ ಸಮಾಜವನ್ನು ಮೆಟ್ಟಿಲಾಗಿ ಉಪಯೋಗಿಸಿದವರೇ ಜಾಸ್ತಿ. ಅಂಥವರಿಂದ ಸಮಾಜಕ್ಕೆ ಯಾವುದೇ ಲಾಭವಾಗಿಲ್ಲ. ಬಣ್ಣದ ಮಾತುಗಳಿಗೆ, ಆವೇಶಕ್ಕೆ ಮರುಳಾಗಿ ಮರೀಚಿಕೆಯ ಹಿಂದೆ ಹೋಗುತ್ತೇವೆ. ಆದರೆ ಅವೆಲ್ಲ ಸುಳ್ಳು ಎಂದು ಗೊತ್ತಾಗಬೇಕಾದರೆ ವ್ಯಕ್ತಿತ್ವ ಮಾಗಬೇಕು. ಆಗ ಮಾತ್ರ ಸತ್ಯ ಗೊತ್ತಾಗುತ್ತದೆ. ಛಲವಾದಿ ಅವರಿಂದ ಸಮಾಜಕ್ಕೆ ಒಳ್ಳೆಯದಾಗಬೇಕು. ಅವರ ಕಾರಣಕ್ಕೆ ಇನ್ನು ಹತ್ತು ಜನ ದೊಡ್ಡವರಾದಾಗ ಸಂತೋವಾಗುತ್ತದೆ.

ಸಮಾಜ, ದೇಶ, ಜಗತ್ತು ಎಲ್ಲದಕ್ಕೂ ಈಗ ಸಂಕ್ರಮಣ ಸ್ಥಿತಿ (ಟರ್ನಿಂಗ್ ಪಾಯಿಂಟ್) ಬಂದಿದೆ. ಒಟ್ಟಾಗಿ ಹೋಗಬೇಕು ಅನ್ನುವವರು ಒಂದು ಕಡೆ, ಸಮಾಜವನ್ನು ಒಡೆದು ಛಿದ್ರ ಮಾಡಬೇಕು ಅನ್ನುವವರು ಮತ್ತೊಂದು ಕಡೆ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್- ಎಲ್ಲರಿಗೂ ಮುಕ್ತ ಅವಕಾಶಗಳು, ನ್ಯಾಯಾಂಗ ಕೂಡ 360 ಡಿಗ್ರಿ ನ್ಯಾಯ ಒದಗಿಸಬೇಕು ಎನ್ನುವ ಧ್ಯೇಯದಡಿ ಕೇಂದ್ರದ ಭಾರತೀಯ ಜನತಾ ಪಕ್ಷದ ಸರಕಾರ ಕೆಲಸ ಮಾಡುತ್ತಿದೆ.

ಕರ್ನಾಟಕದಲ್ಲಿ ಎರಡು ಸಂಘಟನೆಗಳು ನಿರಂತರವಾಗಿ ಅನೇಕರ ತಂತ್ರಕ್ಕೆ ಒಳಗಾಗಿ ಛಿದ್ರವಾಗುತ್ತ ಬಂದಿವೆ. ಅವುಗಳೆಂದರೆ ರೈತ ಸಂಘಟನೆ ಮತ್ತು ದಲಿತ ಸಂಘಟನೆಗಳು. ಹೀಗಾಗಬಾರದಿತ್ತು. ಎಷ್ಟು ರೈತ ಸಂಘಟನೆಗಳಿವೆ, ಒಂದೇ ಇದ್ದಿದ್ದರೆ ರೈತರ ಧ್ವನಿ ಹೇಗಿರುತ್ತಿತ್ತು. ಅದೇ ರೀತಿ ದಲಿತ ಸಂಘಟನೆಗಳು ಅನೇಕ ಆಗಿವೆ. ಸಮಾಜವನ್ನು ಮೇಲೆತ್ತಬೇಕಾದರೆ ಮೊದಲು ವ್ಯಕ್ತಿ ಶಿಕ್ಷಣ ಆಗಬೇಕು, ನಂತರ ಸಂಘಟನೆ ಆಗಬೇಕು. ಸಂಘೇಶಕ್ತಿ ಕಲೌಯುಗೇ. ಒಟ್ಟಿಗಿದ್ದರೆ ಮಾತ್ರ ಬಲ. ಕಲಿಯುಗದಲ್ಲಿ ದೇವರೇ ಬರುತ್ತಾನೆ ಎಂದೇನಿಲ್ಲ. ಆದರೆ ಒಗ್ಗಟ್ಟಾಗಿದ್ದು ಒಳ್ಳೆಯ ಕೆಲಸ ಮಾಡುವವರ ಜತೆಗೆ ಇರುತ್ತಾನೆ.

ಸಮಾಜದ ಏಳಿಗೆ, ಅನ್ಯಾಯದ ವಿರುದ್ಧ ಧ್ವನಿ ಎತ್ತುವುದಕ್ಕಾಗಿ ಒಟ್ಟಾಗಬೇಕು. ಬಿಜೆಪಿ ಬಗ್ಗೆ ಅರಿವಿಲ್ಲದವರು ಸಹ ಇಲ್ಲಿಗೆ ತುಂಬಾ ಮಂದಿ ಬಂದಿರಬಹುದು. ಹತ್ತು ಹಲವು ಕವಲುಗಳಾಗಿ ಇರುವವರು ಒಟ್ಟಾಗಬೇಕು. ವ್ಯವಸ್ಥೆಗಳು ಪೂರಕವಾಗಿ ಬದಲಾಗಬೇಕಾದರೆ ಮಾನಸಿಕತೆ ಕೂಡ ಹಾಗೇ ಬದಲಾಗಬೇಕು ಎಂದು ಸಂತೋಷ್ ಅಭಿಪ್ರಾಯ ಪಟ್ಟರು.

# ರಾಜಕೀಯ ಅನಾಥ ಶಿಶುವನ್ನು ಗುರುತಿಸಿ ಸ್ಥಾನಮಾನ ನೀಡಿದ್ದು ಬಿಜೆಪಿ



**- ಛಲವಾದಿ ನಾರಾಯಣಸ್ವಾಮಿ**
ವಿಧಾನ ಪರಿಷತ್ ಪ್ರತಿ ಪಕ್ಷದ ನಾಯಕರು

ರಾಜಕೀಯವಾಗಿ ಅನಾಥ ಶಿಶುವಾಗಿದ್ದ ತಮ್ಮನ್ನು ಬಹುಬೇಗನೆ ಗುರುತಿಸಿ, ಗೌರವಿಸಿ, ವಿಧಾನ ಪರಿಷತ್ ಪ್ರತಿಪಕ್ಷದ ನಾಯಕನ ಸ್ಥಾನದಂತಹ ಜವಾಬ್ದಾರಿಯುತ ಹುದ್ದೆಯನ್ನು ನೀಡಿರುವುದು ಭಾರತೀಯ ಜನತಾ ಪಾರ್ಟಿ ಎಂದು ಶ್ರೀ ಛಲವಾದಿ ನಾರಾಯಣ ಸ್ವಾಮಿ ಹೇಳಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪದವೀಧರರ ಸಂಘದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಕಾಂಗ್ರೆಸ್ನಲ್ಲಿ 40 ವರ್ಷಗಳ

ಕಾಲ ರಾಜಕೀಯದಲ್ಲಿದ್ದು ತಳಸಮುದಾಯದ ಏಳಿಗೆಗಾಗಿ ಹೋರಾಟ ನಡೆಸಿದರೂ ಯಾವ ಗೌರವ ಮತ್ತು ಸ್ಥಾನಮಾನಗಳೂ ಸಿಗಲಿಲ್ಲ. ಕಾಂಗ್ರೆಸ್ ಪಕ್ಷ ಕೇವಲ ಒಂದು ಕುಟುಂಬದ ಏಳಿಗೆಗಾಗಿ ಇದೆಯೇ ಹೊರತು ದೇಶದ ಅಭಿವೃದ್ಧಿಗಾಗಲಿ, ಸಂವಿಧಾನದ ಆಡಳಿತಕ್ಕಾಗಲಿ ಇರುವಂಥ ಪಕ್ಷವಲ್ಲ. ಸಂವಿಧಾನಪರ, ದಲಿತಪರ, ಬಡತನ ನಿರ್ಮೂಲನೆಯ ಪರ ಎಂದೆಲ್ಲ ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷ ವಾಸ್ತವದಲ್ಲಿ ಅದ್ಯಾವುದನ್ನೂ ಮಾಡದೆ ದೇಶದ್ರೋಹಿಗಳ ಪಕ್ಷವಾಗಿ ಬದಲಾಗಿದೆ ಎಂದರು.


ನಿಜವಾಗಿಯೂ ಡಾ. ಬಿ.ಆರ್ ಅಂಬೇಡ್ಕರ್ ವಿರಚಿತ ಸಂವಿಧಾನದ ಬಗ್ಗೆ ಪೂರ್ಣ ಗೌರವ ಹೊಂದಿ ಅದನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವ ಪಕ್ಷ ಭಾರತೀಯ ಜನತಾ ಪಕ್ಷ. ಎಲ್ಲರ ಏಳಿಗೆಗಾಗಿ, ಭವ್ಯ ಭಾರತದ ಉಜ್ವಲ ಭವಿಷ್ಯಕ್ಕಾಗಿ ಹೋರಾಡುತ್ತಿರುವುದು ಬಿಜೆಪಿ ಮಾತ್ರ. ಈ ಸತ್ಯವನ್ನು ತಳಮಟ್ಟದ ಸಮುದಾಯಗಳಿಗೆ ತಿಳಿಯದಂತೆ ಸುಳ್ಳಿನ ಕಂತೆಗಳನ್ನು ಕಾಂಗ್ರೆಸ್ ಪೋಣಿಸುತ್ತಲೇ ಬಂದಿದೆ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಕಾಂಗ್ರೆಸ್ ಸುಳ್ಳುಗಳನ್ನು ಯಾರೂ ನಂಬುತ್ತಿಲ್ಲ. ದೇಶದ ಜನತೆ ಭಾರತೀಯ ಜನತಾ ಪಕ್ಷಕ್ಕೆ ಕೇಂದ್ರದಲ್ಲಿ ಸತತ ಮೂರನೇ ಬಾರಿಗೆ ಅಧಿಕಾರ ನೀಡಿದ್ದಾರೆ. ಜನರ ಆಶಯಗಳನ್ನು ಪ್ರಧಾನಿ ನರೇಂದ್ರ ಮೋದಿಯವರು ಸಂಪೂರ್ಣವಾಗಿ ಈಡೇರಿಸುತ್ತಿದ್ದಾರೆ ಎಂದು ಅವರು ನುಡಿದರು.

# ಗಲಭೆಕೋರರ ರಕ್ಷಣೆಗೆ ನಿಂತಿರುವ ಕಾಂಗ್ರೆಸ್ ಸರ್ಕಾರ




ಹುಬ್ಬಳ್ಳಿಯಲ್ಲಿ ಗಲಭೆಕೋರರ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದ ಜನವಿರೋಧಿ ಕಾಂಗ್ರೆಸ್ ಸರ್ಕಾರದ ಧೋರಣೆಯನ್ನು ಖಂಡಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್ ಬಳಿ ಬಿಜೆಪಿ ವತಿಯಿಂದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಹುಬ್ಬಳ್ಳಿ ಪೊಲೀಸ್ ಠಾಣೆಯ ಎದುರು ಪ್ರತಿಭಟನೆಯ ನೆಪದಲ್ಲಿ ಠಾಣೆಗೇ ಕಲ್ಲೆಸೆದು, ಪೊಲೀಸರ ಕಾಲರ್ ಹಿಡಿದು ಹಲ್ಲೆ ನಡೆಸಿದ್ದ ಕಿಡಿಗೇಡಿಗಳ ವಿರುದ್ಧದ ಪ್ರಕರಣಗಳನ್ನು ರದ್ದುಗೊಳಿಸಿರುವ ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ ನೀತಿಯನ್ನು ಖಂಡಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣ ಸ್ವಾಮಿ, ಮಾಜಿ ಉಪಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವತ್ಥನಾರಾಯಣ, ಶಾಸಕರಾದ ಶ್ರೀ ಎಸ್.ಆರ್. ವಿಶ್ವನಾಥ, ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.




# ಮೋದಿಜೀ ಅವರ ಜೀವನ ಪ್ರಯಾಣ ಅದ್ಭುತ

## ಬಸವರಾಜ ಬೊಮ್ಮಾಯಿ ವಿಶ್ಲೇಷಣೆ

**ಬಿ**ಜೆಪಿ ಕರ್ನಾಟಕ ಆರ್ಥಿಕ ಪ್ರಕೋಷ್ಠದ ವತಿಯಿಂದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ 'ಪವರ್ ವಿತಿನ್ ದಿ ಲೀಡರ್‌ಶಿಪ್ ಲೆಗೆಸಿ ಆಫ್ ನರೇಂದ್ರ ಮೋದಿ' ಪುಸ್ತಕದ ಪರಿಚಯ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿ ರವರು ಮಾತನಾಡಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಜೀವನ ಪ್ರಯಾಣ ಅದ್ಭುತವಾಗಿದೆ ಅವರ 'ಪವರ್ ವಿತಿನ್' ಎಂಬ 2 ಶಬ್ದಗಳು ಸಾಕಷ್ಟು ವಿಚಾರಗಳನ್ನು ಹೊರಗೆ ಚೆಲ್ಲುತ್ತದೆ ಎಂದು ಹೇಳಿದರು.

ಜೀವನದ ಆರಂಭದಲ್ಲಿಯೇ ಕಷ್ಟಗಳಿದ್ದ ಸಂದರ್ಭದಲ್ಲಿ ಯಾವ ದಿಕ್ಕಿನಲ್ಲಿ ಹೋಗಬೇಕೆಂಬ ಸ್ಪಷ್ಟತೆ ಇರದೇ ಸೇವೆ ಎಲ್ಲಿಂದ, ಯಾರ ಸೇವೆ ಎಂಬ ಗೊಂದಲವಿತ್ತು. ಆರೆಸ್ಸೆಸ್ ಎಂಬ ಸಂಸ್ಥೆಯು ಅವರ ಭಾವನೆ, ವಿಚಾರ, ಗುರಿಗೆ ಸಾಧನೆಯ ವೇದಿಕೆಯನ್ನು ಕೊಟ್ಟಿತು. ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಕೇವಲ 5 ನಿಮಿಷ ಅಥವಾ 2 ನಿಮಿಷ ಭೇಟಿ ಮಾಡಿದ ವ್ಯಕ್ತಿಯ ಮನದಾಳದಲ್ಲಿ ಅವರ ಬಗ್ಗೆ ಒಂದು ವಿಶೇಷ ಭಾವನೆಯನ್ನು ಇಟ್ಟುಕೊಳ್ಳದೇ ಇರಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಡಾ. ಆರ್. ಬಾಲಸುಬ್ರಮಣ್ಯಂ ಅವರು ಪ್ರಧಾನಿ ಶ್ರೀ ಮೋದಿ ಕುರಿತಾಗಿ ಈ ಪುಸ್ತಕವನ್ನು ಬರೆದಿಲ್ಲ. ವ್ಯಕ್ತಿಯಾಗಿ, ಅವರೊಳಗಿನ ಶಕ್ತಿಯ ಕುರಿತಾಗಿ ಬರೆದಿದ್ದಾರೆ. ಪ್ರಧಾನಿಯವರ ಯೋಜನೆಗಳು, ಎಷ್ಟು ಜನರಿಗೆ ತಲುಪಿದೆ, ಎಷ್ಟರ ಮಟ್ಟಿಗೆ ಪರಿವರ್ತನೆಯಾಗಿದೆ ಎಂಬುದರ ಕುರಿತು ಹಲವಾರು ಪುಸ್ತಕಗಳಿವೆ. ಆದರೆ, ಅವರು ತೆಗೆದುಕೊಂಡ ನಿರ್ಣಯಗಳು ಯಾಕೆ ಎಂಬ ಪ್ರಶ್ನೆಗೆ ಈ ಪುಸ್ತಕದಲ್ಲಿ ಉತ್ತರವಿದೆ ಎಂದು ಅವರು ಹೇಳಿದರು.

'ಬೇಟಿ ಬಚಾವೊ, ಬೇಟಿ ಪಡಾವೊ' ಯಾಕೆ? 'ಸ್ವಚ್ಛ ಭಾರತ' ಯಾಕೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಈ ಪುಸ್ತಕದಲ್ಲಿ ಉತ್ತರವಿದೆ. ಭ್ರೂಣಹತ್ಯೆ ನಿಲ್ಲಿಸಬೇಕೆಂಬ ಎಲ್ಲ ಪ್ರಯತ್ನಗಳೂ ಯಶಸ್ವಿ ಆಗುತ್ತಿರಲಿಲ್ಲ. ಮೋದಿಯವರು ಮುಖ್ಯಮಂತ್ರಿ ಆಗಿದ್ದಾಗ ಭ್ರೂಣಹತ್ಯೆ ನಿಲ್ಲಿಸುವ ಆಶಯವಿತ್ತು. ಭ್ರೂಣದಲ್ಲಿರುವ ಮಗು ತನ್ನ ತಾಯಿಯ ಜೊತೆಗಿನ ಸಂವಾದವನ್ನು 12 ವರ್ಷದ ಹುಡುಗಿಯ ಏಕಪಾತ್ರಾಭಿನಯದಲ್ಲಿ ಅಭಿನಯಿಸಿದ್ದಳು. ಆ ಘಟನೆ ಪ್ರಧಾನಿ ಶ್ರೀ ಮೋದಿಯವರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತ್ತು. ಆ ಏಕಪಾತ್ರಾಭಿನಯದ ವಿಡಿಯೋವನ್ನು ಪ್ರಚುರಪಡಿಸಿದ್ದರು. ಅದರಿಂದ ಭ್ರೂಣಹತ್ಯೆ ಬಹಳಷ್ಟು ಕಡಿಮೆ ಆಗಿತ್ತು. ಅದರ ಕ್ರೆಡಿಟ್ ಆ ಬಾಲಕಿಗೆ ಹೋಗಬೇಕೆಂದು ಪ್ರಧಾನಿ ಶ್ರೀ ಮೋದಿಯವರು ತಿಳಿಸಿದ್ದಾಗಿ ವಿವರಿಸಿದರು.

ಮೋದಿಜೀ ಅವರು ಅತ್ಯಂತ ಸಂವೇದನಾಶೀಲ ವ್ಯಕ್ತಿ. ಏಕಪಾತ್ರಾಭಿನಯದ ಮಗುವಿನ ಧ್ವನಿಯನ್ನು ಕೇಳಿಸಿಕೊಳ್ಳುವ ವ್ಯವಧಾನ ಮೋದಿಯವರಲ್ಲಿ ಇತ್ತು ಎಂದು ತಿಳಿಸಿದರು. ಇದು ಅವರ ಒಳಗಿದ್ದ ತಾಯ್ತನದ ವ್ಯಕ್ತಿತ್ವ ಎಂದು ಅಭಿಪ್ರಾಯಪಟ್ಟರು.

ನಾನು ವ್ಯಕ್ತಿಯಲ್ಲ, ರಾಜಕಾರಣಿಯಲ್ಲ. ದೇಶಸೇವೆ ಮಾಡಲು ದೇವರು ನನ್ನನ್ನು ಕಳಿಸಿದ್ದಾರೆ ಎಂದು ಪ್ರಧಾನಿ ಶ್ರೀ ಮೋದಿ ರವರು ಹೇಳಿದ್ದರು. ವಿಪಕ್ಷದವರು ಇದನ್ನು ಲೇವಡಿ ಮಾಡಿದ್ದರು. ಮೋದಿಜೀ ಅವರು ಆ ಮಾತನ್ನು ಹೇಳಿದಾಗ ಅವರ ಬದುಕಿನ ಉದ್ದೇಶವನ್ನು ಅರ್ಥ ಮಾಡಿಕೊಂಡಿದ್ದರು ಎನಿಸುತ್ತದೆ. ಆ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡವರಿಗೆ ಅದು ಗೊತ್ತಾಗುತ್ತದೆ ಎಂದು ತಿಳಿಸಿದರು.

ಪುಸ್ತಕದ ಲೇಖಕ ಡಾ. ಆರ್. ಬಾಲಸುಬ್ರಮಣ್ಯಂ ಅವರು ಮಾತನಾಡಿ, ಮೋದಿಯವರ ಸಂವಹನ ಕೌಶಲ, ಆಧ್ಯಾತ್ಮಿಕತೆ, ದಿನಚರಿಯ ಕೆಲಸಗಳನ್ನು ಈ ಪುಸ್ತಕದಲ್ಲಿ ಹಿಡಿದಿಟ್ಟಿರುವುದಾಗಿ ತಿಳಿಸಿದರು. 23 ವರ್ಷಗಳ ಕಾಲ ಒಂದು ದಿನವೂ ರಜೆ ಪಡೆಯದೆ ಕೇವಲ ಜನಸಾಮಾನ್ಯರ ಒಳಿತಿನ ಕುರಿತು ಚಿಂತಿಸುವುದೇ ಒಂದು ದೊಡ್ಡ ಸಾಧನೆ ಎಂದು ವಿಶ್ಲೇಷಿಸಿದರು. ನಾಯಕನಾಗಲು ಬಯಸುವವರಿಗೆ ಈ ಪುಸ್ತಕ ಒಂದು ಟೂಲ್‌ಕಿಟ್ ಎಂದು ನುಡಿದರು.

ಆರೇಳು ವಯಸ್ಸಿನಲ್ಲೇ ಸೇವಾ ಮನೋಭಾವ ಬೆಳೆಯಿತು. ಸ್ವಾಮಿ ವಿವೇಕಾನಂದರ ಪ್ರಭಾವ ಉಂಟಾಯಿತು. ಕೇಳಿಸಿಕೊಳ್ಳುವ ಅದ್ಭುತ ತಾಳ್ಮೆ ಅವರಲ್ಲಿದೆ ಎಂದ ಅವರು, ಲೇಖಕನ ನೆಲೆಯಲ್ಲಿ 10-12 ಬಾರಿ ಅವರ ಜೊತೆ ಚರ್ಚಿಸಿ, ಪ್ರಶ್ನೆಗಳನ್ನು ಕೇಳಿ ಪುಸ್ತಕ ಬರೆದುದಾಗಿ ವಿವರಿಸಿದರು. ಈ ಪುಸ್ತಕದ ಬರವಣಿಗೆ ತಮ್ಮ ಸೌಭಾಗ್ಯದ ಪಯಣ ಎಂದು ವಿಶ್ಲೇಷಿಸಿದರು.

ಈ ಕಾರ್ಯಕ್ರಮದಲ್ಲಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ.ರಾಜೀವ್, ಪ್ರಕೋಷ್ಠಗಳ ರಾಜ್ಯ ಸಂಯೋಜಕರಾದ ಶ್ರೀ ಎಸ್. ದತ್ತಾತ್ರಿ, ಆರ್ಥಿಕ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ಶ್ರೀ ಪ್ರಶಾಂತ್ ಜಿ.ಎಸ್., ಸಹ ಸಂಚಾಲಕರಾದ ಶ್ರೀ ಹೇಮಂತ್ ರೈ ಮತ್ತು ಪಕ್ಷದ ಮುಖಂಡರು ಉಪಸ್ಥಿತರಿದ್ದರು.

23 ಹಿರಿಯ ಕಾರ್ಯಕರ್ತರ

# ಪರಿಚಯಮಾಲೆ



# ಬದ್ಧತೆಯ ಸ್ವಯಂಸೇವಕ, ಸಮಾಜಮುಖಿ ಸಂಘಟಕ ಉಡುಪಿಯ ಶ್ರೀ ಸೋಮಶೇಖರ್ ಭಟ್




ಶ್ರೀಮತಿ ರೇಷ್ಮಾ ಶೆಟ್ಟಿ

ಜಿಲ್ಲಾ ಪ್ರಧಾನಕಾರ್ಯದರ್ಶಿ,ಬಿಜೆಪಿ – ಉಡುಪಿ


**‘ತ್ವದೀಯಾಯ ಕಾರ್ಯಾಯ ಬದ್ಧಾ ಕಟೀಯವ್’**– ಒಬ್ಬ ಸ್ವಯಂಸೇವಕ  ಸಂಘದ ಪ್ರಾರ್ಥನೆಯಲ್ಲಿ ಈ ಸಾಲುಗಳನ್ನು ಹಾಡುವಾಗ ಅವನಿಗೆ ರೋಮಾಂಚನವಾಗದೆ ಇರದು. ತಾಯಿ ಭಾರತಿಯ ಸೇವೆಗೆ ನಾವು ಸದಾ ಕಟಿಬದ್ಧರಾಗಿರುತ್ತೇವೆ ಎನ್ನುವ ಅರ್ಥವುಳ್ಳ ಈ ಸಾಲುಗಳು 1962ರಲ್ಲಿ ಉಡುಪಿಯ ಪುರಸಭೆಯ ಧ್ಯೇಯ ವಾಕ್ಯವಾದದ್ದು ಈಗ ಇತಿಹಾಸ. ಈ ಸಲಹೆಯನ್ನು ಆಗಿನ ಪುರಸಭೆಯ ಅಧ್ಯಕ್ಷರಾಗಿದ್ದ ಡಾ. ವಿ.ಎಸ್. ಆಚಾರ್ಯರವರಿಗೆ ಸೂಚಿಸಿದವರು ಸದಸ್ಯರಾಗಿದ್ದ ಮಲ್ಪೆ ಸೋಮಶೇಖರ ಭಟ್.

ಮಲ್ಪೆ ವಾಮನಭಟ್ ಮತ್ತು ಗಂಗಾಬಾಯಿ ದಂಪತಿಗಳ 10 ಮಕ್ಕಳಲ್ಲಿ ಸೋಮಶೇಖರ ಭಟ್ ನಾಲ್ಕನೆಯವರು. 1935ರ ಏಪ್ರಿಲ್ 15ರಂದು ಜನಿಸಿದ ಸೋಮಣ್ಣ 6ನೇ ವರ್ಷ ವಯಸ್ಸಿನಲ್ಲಿ ಸಂಘದಂಗಳದ ಪರಿಚಯವಾಗಿ ಸ್ವಯಂಸೇವಕನಾದರು. ಸಂಘದ ಶಾಖಾ ಚಟುವಟಿಕೆಗಳು ಅವರನ್ನು ಆಯಸ್ಕಾಂತದ ರೀತಿ ಆಕರ್ಷಿಸುತ್ತಿದ್ದವು. ಉಡುಪಿ ಕಾಡುಬೆಟ್ಟುವಿನ ವಿದ್ಯಾರಣ್ಯ ಶಾಖೆಯ ಪದ್ಮನಾಭ ಆಚಾರ್ಯ ಅವರಿಗೆ ಮುಖ್ಯ ಶಿಕ್ಷಕರಾಗಿದ್ದವರು.

ಎಸ್‌ಎಸ್‌ಎಲ್‌ಸಿ ಮುಗಿದ ಬಳಿಕ ಆರ್ಥಿಕ ಸಂಕಷ್ಟದಿಂದ ಸೋಮಣ್ಣನ ವಿದ್ಯಾಭ್ಯಾಸ ಮೊಟಕುಗೊಂಡಿತು, ಹೀಗಾಗಿ ಉದ್ಯಮದತ್ತ ಹೆಜ್ಜೆ ಹಾಕುವ ಧೈರ್ಯವನ್ನು ಸೋಮಣ್ಣ ಮಾಡಿದರು. ಆರ್ಥಿಕ ತೊಂದರೆ ಇದ್ದಾಗಲೂ ಸ್ವತಂತ್ರವಾಗಿ ಧೈರ್ಯ ಮಾಡಿ ಸ್ಥಾಪಿಸಿದ ಶ್ರೀ ಕೃಷ್ಣ ಫ್ಲೋರ್‌ಮಿಲ್‌ನಲ್ಲಿ ದುಡಿಯುತ್ತಲೇ ಸಂಘದ ಚಟುವಟಿಕೆಗಳು ಸೋಮಣ್ಣನ ವ್ಯಕ್ತಿತ್ವಕ್ಕೆ ಮೆರುಗು ನೀಡಿದವು ಗುಜ್ಜಾಡಿ ನರಸಿಂಹ ನಾಯಕರ ಮಾರ್ಗದರ್ಶನದಲ್ಲಿ ‘ನಮಸ್ತೇ ಸದಾ ವತ್ಸಲೇ ....’ ಗುಣು ಗುಣುಸುತ್ತಾ ಜೀವನದ ಬಗ್ಗೆ  ಒಂದು ಸ್ಪಷ್ಟ ಚಿತ್ರಣವನ್ನು ಕಂಡುಕೊಂಡರು.

ಪರಮಪೂಜ್ಯ ಗುರೂಜಿಯವರಿಂದ ಮೊದಲ್ಗೊಂಡು ಶ್ರೀಯುತರುಗಳಾದ ನ. ಕೃಷ್ಣಪ್ಪ, ಸು. ರಾಮಣ್ಣ. ದ. ಮ. ರವೀಂದ್ರ ಚಂದ್ರಶೇಖರ ಭಂಡಾರಿ, ಪಂಡಿತ್ ದೀನದಯಾಳ ಉಪಾಧ್ಯಾಯ, ಜಗನ್ನಾಥ್ ರಾವ್ ಜೋಶಿ ಹೀಗೆ  ಹೆಚ್ಚಿನ ಹಿರಿಯ ಪ್ರಚಾರಕರ ಸಹಚರ್ಯ, ಒಡನಾಟ  ಮತ್ತು ಮಾರ್ಗದರ್ಶನ ಸೋಮಣ್ಣನವರ ವ್ಯಕ್ತಿತ್ವವನ್ನು ಎತ್ತರಕ್ಕೇರಿಸಿತು .

1949ರ ಹೊತ್ತಿಗೆ ಉಡುಪಿಯಲ್ಲಿ ಎಂಜಿಎಂ ಕಾಲೇಜು ಆರಂಭವಾಯಿತು. ಸೋಮಣ್ಣ ಮತ್ತೆ ಉದ್ಯಮದ ಜೊತೆಗೆ ಕಾಲೇಜು ಶಿಕ್ಷಣವು ಮುಂದುವರೆದು ಬಿಕಾಂ ಪದವೀಧರರಾದರು 1951 ರಲ್ಲಿ ಭಾರತದಲ್ಲಿ ಜನಸಂಘ ಆರಂಭವಾದ ಎರಡೇ ವರ್ಷದಲ್ಲಿ ಉಡುಪಿಯಲ್ಲಿ ಜನಸಂಘ ಆರಂಭವಾಯಿತು. ಶ್ರೀ ಮಟ್ಟಾರು ವಿಟ್ಟಲಕಿಣಿಯವರು ಸೋಮಣ್ಣನವರನ್ನು ಜನಸಂಘಕ್ಕೆ ಸೇರಿಸಿದರು ಉಡುಪಿಯಲ್ಲಿ ಜನಸಂಘದ ಸಂಘಟನೆಯನ್ನು ಗಟ್ಟಿಗೊಳಿಸುವುದು ಪ್ರವಾಹದ ವಿರುದ್ಧ ಈಜುವಂತಹ ಸವಾಲನ್ನು ಧ್ಯೇಯನಿಷ್ಠೆಯ ಸ್ವೀಕರಿಸಿದ ಕೆಲವರಲ್ಲಿ ಸೋಮಶೇಖರ ಭಟ್ಟರು ಒಬ್ಬರು. 1960ರಲ್ಲಿ ಜನ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆಗಿದ್ದ ಪಂ. ದೀನ ದಯಾಳ ಉಪಾಧ್ಯಾಯರು ಉಡುಪಿಗೆ ಬಂದಿದ್ದ ಸಂದರ್ಭದಲ್ಲಿ ಎಂಜಿಎಂ ಕಾಲೇಜ್ ವಿದ್ಯಾರ್ಥಿಯಾಗಿದ್ದ ಸೋಮಣ್ಣ ಸಂಚಾಲಕರಾಗಿದ್ದ ಟಿ.ಎ.ಪೈ ಅವರ ಸಹಕಾರದೊಂದಿಗೆ ಕಾಲೇಜಿನಲ್ಲಿ  ಪಂ. ದೀನ ದಯಾಳರ ವಿಶೇಷ ಉಪನ್ಯಾಸವನ್ನು ಏರ್ಪಡಿಸಿದ್ದರು.

ಬಿಕಾಂ ಪದವಿಯ ಸೋಮಣ್ಣ ಮಡಿಕೇರಿಯಲ್ಲೂ ಜನಸಂಘದ ಕಾರ್ಯಕ್ಕೆ ಚಾಲನೆ ನೀಡಿದರು. ಜನಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ ಜವಾಬ್ದಾರಿ ವಹಿಸಿಕೊಂಡು ಮಡಿಕೇರಿಯಲ್ಲಿ ಮನೆ ಮನೆಗೆ ತೆರಳಿ ಕಾರ್ಯಕರ್ತರನ್ನು  ಸೇರಿಸಿ ಜನಸಂಘದ ತಂಡ

ರಚಿಸಿದರು ಹಾಗೂ ಕೊಡವ ಭಾಷೆಯನ್ನೂ ಕಲಿತು ಕೊಂಡರು.

ಹೊಸ ಉತ್ಸಾಹ ಹೊಸ ಅನುಭವಗಳೊಂದಿಗೆ 1966ರಲ್ಲಿ ಉಡುಪಿಗೆ ಮರಳಿದ ಸೋಮಣ್ಣ ಉಡುಪಿಯ ಜನಸಂಘದಲ್ಲಿ ಸಕ್ರೀಯರಾದರು ಆಗ ಜನಸಂಘದ ಅಧ್ಯಕ್ಷರಾಗಿದ್ದ ಯುವ ಉತ್ಸಾಹಿ ವೈದ್ಯ ಡಾ. ವಿ.ಎಸ್. ಆಚಾರ್ಯರವರ ಜೊತೆಗೆ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಜನಸಂಘ, ಉದ್ಯಮ ಮತ್ತು ಸಾಮಾಜಿಕ ಕಾರ್ಯದ ಜವಾಬ್ದಾರಿ ವಹಿಸಿಕೊಂಡು ಎಲ್ಲಾ ಕ್ಷೇತ್ರಗಳಲ್ಲಿ ನ್ಯಾಯ ಒದಗಿಸಿಕೊಟ್ಟರು. ಕಟಪಾಡಿಯ ಶಾರದಾ ಭಟ್ ರವರೊಂದಿಗೆ ವಿವಾಹವಾದ ಸೋಮಶೇಖರ ಭಟ್ಟರ ಮನೆಯನ್ನು ಮಕ್ಕಳಾದ ಚಿತ್ತರಂಜನ್ ವಲ್ಲಭ ಮತ್ತು ಚಂದ್ರಿಕಾ ತುಂಬಿದರು.

ಸೋಮಶೇಖರ ಭಟ್ಟರ ಸಂಘಟನಾ ಚತುರತೆ ಮತ್ತು ಸಮಾಜಕಾರ್ಯ ಫಲ ಕೊಟ್ಟಿತು. 1968ರಲ್ಲಿ ಮೊದಲ ಬಾರಿಗೆ ಉಡುಪಿ ಪುರಸಭೆಯ 19 ಸ್ಥಾನಗಳಲ್ಲಿ 11 ಸ್ಥಾನಗಳನ್ನು ಜನಸಂಘ ಗೆದ್ದುಬಿಟ್ಟಿತ್ತು. ಡಾ. ವಿ.ಎಸ್. ಆಚಾರ್ಯರಂತಹ ದೂರದೃಷ್ಟಿಯುಳ್ಳ ಸಚ್ಚಾರಿತ್ರ್ಯವಂತ ನಾಯಕನ ಅಧ್ಯಕ್ಷತೆಯಲ್ಲಿ ಪುರಸಭೆಯ ಸದಸ್ಯನಾಗಿ ಕಾರ್ಯನಿರ್ವಹಿಸುವ ಅವಕಾಶ ಸೋಮಣ್ಣನವರಿಗೆ ದೊರೆಯಿತು. ಡಾ. ವಿ.ಎಸ್ ಆಚಾರ್ಯರ ಸಹಕಾರದೊಂದಿಗೆ ಇತಿಹಾಸದಲ್ಲಿ ಪ್ರಥಮಗಳ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿದರು. ಅದರಲ್ಲಿ ತಲೆ ಮೇಲೆ ಮಲಹೊರುವ ಪದ್ಧತಿ ನಿಷೇಧದ ಕ್ರಮ ದೇಶದೆಲ್ಲೆಡೆ ಸುದ್ದಿಯಾಗಿ ಮಾದರಿಯಾಗಿತ್ತು. ಡಾಕ್ಟರ್ ಆಚಾರ್ಯ ಮತ್ತು ಸೋಮಣ್ಣನ ನಡುವೆ ನಿಕಟವಾದ ಸ್ನೇಹವಿತ್ತು ಯಾವುದೇ ಕೆಲಸ ಕಾರ್ಯಗಳಾದರೂ ಆ ಕುರಿತು ಚರ್ಚಿಸಿ ನಿರ್ಧರಿಸುತ್ತಿದ್ದರು. ಪುರಸಭೆಗೆ ಕಡೆಗೋಲು ಶ್ರೀಕೃಷ್ಣನ ಪ್ರತಿಮೆಯ ಲಾಂಛನ ಮತ್ತು ಜನಪ್ರತಿನಿಧಿಗಳಿಗೆ ಅವರ ಕರ್ತವ್ಯವನ್ನು ಪ್ರತಿದಿನವೂ ನೆನಪಿಸುವ ಸಂದೇಶ ನೀಡುವ ಧ್ಯೇಯ ವಾಕ್ಯ 'ತ್ವದೀಯಾಯ ಕಾರ್ಯಾಯ ಬದ್ಧಾಕಟ್ಟಿಯಂ' ಇದು ಇವರಿಬ್ಬರ ವಿಚಾರಗಳ ಮಂಥನದಲ್ಲಿ ಆಯ್ಕೆಯಾಯಿತು. ಇವರ ದೂರದೃಷ್ಟಿಯ ಯೋಜನೆಯಾದ 'ಕುಡಿಯುವ ನೀರಿಗಾಗಿ ಸ್ವರ್ಣ ಯೋಜನೆ' ಇಂದಿಗೂ ಉಡುಪಿಯ ನಾಗರೀಕರ ದಾಹ ತಣಿಸುತ್ತಿದೆ. ಪುರಸಭೆಯ ಚುನಾವಣೆಗಾಗಿಯೇ ದೇಶದಲ್ಲೇ ಮೊದಲ ಬಾರಿಗೆ ನಗರಸಭಾ ಚುನಾವಣಾ ಪ್ರಣಾಳಿಕೆ ಪ್ರಸ್ತುತ ಪಡಿಸಿದ ಹಿರಿಮೆ ಉಡುಪಿಯ ನಗರಸಭಾ ಚುನಾವಣೆಯದಾಗಿತ್ತು.

1969ರ ಡಿಸೆಂಬರ್ ತಿಂಗಳಿನಲ್ಲಿ ವಿಶ್ವ ಹಿಂದೂ ಪರಿಷತ್‌ನ ಪ್ರಥಮ ಪ್ರಾಂತ ಸಮ್ಮೇಳನದ ಆತಿಥ್ಯ ವಹಿಸುವ ಅವಕಾಶ ಉಡುಪಿಗೆ ಬಂದಾಗ ಅದನ್ನು ಎಲ್ಲರೂ ಮೆಚ್ಚುವಂತೆ ಸಮರ್ಥವಾಗಿ ನಿಭಾಯಿಸುವಲ್ಲಿ ಸೋಮಣ್ಣನ ಪಾತ್ರ ಗಣನೀಯವಾಗಿತ್ತು. ಹಲವಾರು ಸವಾಲುಗಳ ಮಧ್ಯೆ ಜನಸಂಘದ ಸಂಘಟನೆಯನ್ನು ಬಲಗೊಳಿಸುತ್ತಿದ್ದ ಸಂದರ್ಭ 1975ರಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಆಯಿತು. ಆರಂಭದ ಒಂದೆರಡು ತಿಂಗಳು ಭೂಗತನಾಗಿದ್ದುಕೊಂಡು ಹೋರಾಟ ಸಂಘಟಿಸುತ್ತಾ ಬಂದ ಸೋಮಣ್ಣ ಎರಡು ತಿಂಗಳಲ್ಲಿ

### ಕಾರ್ಯಕರ್ತರ ಬಗೆಗಿನ ಕಾಳಜಿ

1996ರ ಸಮಯ, ಶ್ರೀ ಕೋಟಾ ಶ್ರೀನಿವಾಸ ಪೂಜಾರಿಯವರು ಉಡುಪಿಯ ತಾಲ್ಲೂಕು ಪಂಚಾಯತ್ ಸದಸ್ಯರಾಗಿದ್ದಂತಹ ಸಂದರ್ಭ. ತಮ್ಮ ಊರಿನ ಜನರಿಗೆ ಜಿಲ್ಲಾ ಪಂಚಾಯತ್‌ನ ಬೇಜವಾಬ್ದಾರಿತನದಿಂದ ಕುಡಿಯುವ ನೀರಿನ ಪೂರೈಕೆಯು ಸ್ಥಗಿತಗೊಂಡಾಗ ಮನವಿಗೆ ಸ್ಪಂದಿಸದ ಅಧಿಕಾರಿಗಳ ವಿರುದ್ಧ ಉಡುಪಿ ತಾಲ್ಲೂಕು ಪಂಚಾಯತ್ ಕಚೇರಿಯಲ್ಲಿ ಕೊಡಪಾನ ಹಿಡಿದು ಧರಣಿಗೆ ಕುಳಿತುಕೊಂಡರು. ಅವರೊಂದಿಗೆ ನೂರಾರು ಮಹಿಳೆಯರೂ ಸಹ ಧರಣಿಯಲ್ಲಿ ಪಾಲ್ಗೊಂಡರು.

ಅಂದಿನ ಪರಿಸ್ಥಿತಿ ಹೇಗಿತ್ತೆಂದರೆ ಬಿಜೆಪಿಯ ಬೆರಳಣಿಕೆಯ ಸ್ಥಳೀಯ ಜನಪ್ರತಿನಿಧಿಗಳು ಬಿಟ್ಟರೆ ಶಾಸಕರು, ಸಂಸದರು ಇರಲಿಲ್ಲ. ಹಾಗಾಗಿ ಬಿಜೆಪಿ ನೇತೃತ್ವದ ಪ್ರತಿಭಟನಾಕಾರರ ಬೇಡಿಕೆಯನ್ನು ಈಡೇರಿಸುವುದು ಬಿಡಿ, ಕನಿಷ್ಠ ಅವರ ಕಡೆಗೆ ಗಮನ ಕೊಡುವವರೂ ಯಾರೂ ಇರಲಿಲ್ಲ. ಸಂಜೆಯಾದರೂ ಯಾರೂ ಬರುವ ಸೂಚನೆಯೇ ಕಾಣಲಿಲ್ಲ. ಆವೇಶದಿಂದ ಒಂದಷ್ಟು ಜನರನ್ನು ಸೇರಿಸಿ ತಾಲೂಕು ಕಚೇರಿಯಲ್ಲಿ ಪ್ರತಿಭಟನೆಗೆ ಕುಳಿತುಕೊಂಡಾಗಿತ್ತು.

ಆದರೆ ಪ್ರತಿಭಟನೆಯನ್ನು ಮುಗಿಸುವುದಾದರೂ ಹೇಗೆ, ಆ ಸಂದರ್ಭದಲ್ಲಿ ಡಾ ವಿ.ಎಸ್. ಆಚಾರ್ಯರು ಬಂದು ಧರಣಿ ಕುಳಿತವರ ಸಮಸ್ಯೆಯನ್ನು ಆಲಿಸಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಲ್ಲಿ ವಿಚಾರ ತಿಳಿಸಿ ಪ್ರತಿಭಟನೆಯನ್ನು ಕೊನೆಗಾಣಿಸಿದರು.

ಈಗಿನಂತೆ ಪ್ರತಿಕ್ಷಣದ ಮಾಹಿತಿ ತಿಳಿಯಲು ಮೊಬೈಲ್ ಫೋನ್‌ಗಳಿರಲಿಲ್ಲ. ಡಾ. ವಿ.ಎಸ್. ಆಚಾರ್ಯ ರವರಿಗೆ ಧರಣಿ ಕುಳಿತುಕೊಳ್ಳುವ ಬಗ್ಗೆ ಯಾರೂ ತಿಳಿಸಿರಲಿಲ್ಲ. ಆದರೂ ಸಕಾಲದಲ್ಲಿ ಹೇಗೆ ಬಂದರು ಎಂಬ ಪ್ರಶ್ನೆ ಶ್ರೀನಿವಾಸ ಪೂಜಾರಿಯವರನ್ನು ಕಾಡುತ್ತಿದ್ದಾಗ ನಂತರ ಗೊತ್ತಾದ ವಿಚಾರವೇನೆಂದರೆ ಸೋಮಶೇಖರ ಭಟ್ಟರು ಡಾ. ವಿ.ಎಸ್. ಆಚಾರ್ಯರವರನ್ನು ಕರೆದು ನಮ್ಮ ಕಾರ್ಯಕರ್ತನೊಬ್ಬ ಧರಣಿ ಕುಳಿತುಕೊಂಡಿದ್ದಾನೆ ಅವನಿಗೆ ಅದನ್ನು ಹೇಗೆ ಮುಗಿಸುವುದು ಎನ್ನುವುದು ಗೊತ್ತಾಗಲಿಕ್ಕಿಲ್ಲ, ತಾವು ಈಗಲೇ ಹೋಗಿ ಅವರ ಬೇಡಿಕೆಯನ್ನು ಅಧಿಕಾರಿಗಳಿಗೆ ತಲುಪಿಸಿ, ಧರಣಿ ಕುಳಿತವರನ್ನು ಎಬ್ಬಿಸಿ ಎಂದು ವಿನಂತಿಸಿಕೊಂಡಿದ್ದರಂತೆ.

ಒಬ್ಬ ಸಾಮಾನ್ಯ ಕಾರ್ಯಕರ್ತನ ಮನಸ್ಥಿತಿಯನ್ನು ಕೂಡ ಸೋಮಣ್ಣರವರು ಹೇಗೆ ಅರ್ಥ ಮಾಡಿಕೊಂಡಿದ್ದರು ಎಂಬುದಕ್ಕೆ ಈ ಘಟನೆ ಸಾಕ್ಷಿ.

ಬಂಧನಕ್ಕೊಳಗಾದರು. ಅದಾಗಲೇ ಬಳ್ಳಾರಿ ಜೈಲಿನಲ್ಲಿದ್ದ ಡಾ. ವಿ.ಎಸ್. ಆಚಾರ್ಯರ ಜೊತೆ ಸೋಮಣ್ಣನೂ ಜೊತೆಯಾದರು. ಮೂರು ತಿಂಗಳ ಬಳಿಕ ಬೆಂಗಳೂರಿನ ಜೈಲಿಗೆ ಸ್ಥಳಾಂತರವಾದಾಗ ಹಿರಿಯ ನಾಯಕರುಗಳಾದ ಶ್ರೀಯುತರುಗಳಾದ ಎಲ್.ಕೆ. ಅಡ್ವಾಣಿ, ಮಧು ದಂಡವತೆ, ಎಸ್.ಎನ್. ಮಿಶ್ರ, ಅಟಲ್ ಬಿಹಾರಿ ವಾಜಪೇಯಿ, ರಾಮಜೋಯಿಸ್‌ರಂತಹ ನಾಯಕರ ಸಂಪರ್ಕವಾಯಿತು. ಈ ಸಾಮಿಪ್ಯ ಸೋಮಣ್ಣನ ವ್ಯಕ್ತಿತ್ವವನ್ನು ಇನ್ನಷ್ಟು ಅರಳಿಸುತ್ತದೆ.

ಉಡುಪಿಯ ಪುರಸಭೆಯ ಅಧ್ಯಕ್ಷರಾಗಿ ಸೋಮಣ್ಣನ ಸಾಧನೆ ಉಲ್ಲೇಖನೀಯ. ಸತತ ಮೂರು ಬಾರಿ ಉತ್ತಮ ಆಡಳಿತಕ್ಕಾಗಿ ಹ್ಯಾಟ್ರಿಕ್ ಪ್ರಶಸ್ತಿ ಪಡೆದವರು. 1985ರ ಪುರಸಭೆಯ ಸುವರ್ಣ ಮಹೋತ್ಸವದ ಸಂಧರ್ಭದಲ್ಲಿ ಉಡುಪಿ ಉತ್ಸವದ ವಿನೂತನ ಕಲ್ಪನೆಯನ್ನು ನೀಡಿದವರು ಸೋಮಣ್ಣ. ಈಗ ಅದು ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ ಉತ್ಸವವಾಗಿ ಆಚರಣೆಯಾಗುತ್ತಿದೆ.

ಸೋಮಣ್ಣ ಜನಸಂಘದ ಬಳಿಕ ಭಾರತೀಯ ಜನತಾ ಪಾರ್ಟಿಯ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಬಹುತೇಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಬೂತ್‌ನಲ್ಲಿ ಒಬ್ಬರೋ, ಇಬ್ಬರೋ ಸೇರಿ ನಡೆಸುವ ಬೈಠಕ್‌ಗಳಿಂದ ಹಿಡಿದು ರಾಷ್ಟ್ರೀಯ ಅಧಿವೇಶನಗಳವರೆಗೂ ಭಾಗವಹಿಸುವ ಸಮಾನ ಆಸಕ್ತಿ ಅವರಿಗಿತ್ತು. ಜಿಲ್ಲೆಯಾದ್ಯಂತ ಪಕ್ಷದ ಚಟುವಟಿಕೆಗಳಿಗಾಗಿ ಓಡಾಟ ನಡೆಸುವಾಗ ಅದೆಷ್ಟೋ ಬಾರಿ ಪ್ರಯಾಣಿಸುವ ಕಾರಿನಲ್ಲಿಯೇ ಚಿಂತನಾ ಬೈಠಕ್‌ಗಳು ನಡೆಯುತ್ತಿದ್ದವು ಎನ್ನುವ ವಿಚಾರವನ್ನು ಆಗ ಪ್ರಯಾಣದಲ್ಲಿ ಡಾ. ವಿ.ಎಸ್. ಆಚಾರ್ಯ ಮತ್ತು ಸೋಮಣ್ಣನವರಿಗೆ ಜೊತೆಯಾಗುತ್ತಿದ್ದ ಶ್ರೀ ಗುಜ್ಜಾಡಿ ಪ್ರಭಾಕರ ಭಟ್ ನೆನಪಿಸಿಕೊಳ್ಳುತ್ತಾರೆ.

1985 ರಲ್ಲಿ ಉಡುಪಿಯಲ್ಲಿ ಜರುಗಿದ ಧರ್ಮಸಂಸತ್‌ನಲ್ಲಿ ಅಯೋಧ್ಯ ಹೋರಾಟದ ರೂಪುರೇಷೆಗಳು ನಿರ್ಧಾರವಾಗಿತ್ತು. ಉಡುಪಿಯಿಂದ ಡಾ. ವಿ.ಎಸ್. ಆಚಾರ್ಯರ ನೇತೃತ್ವದಲ್ಲಿ ಉಡುಪಿಯ ಕರಸೇವಕರ ತಂಡ ಅಯೋಧ್ಯೆಯತ್ತ ಹೊರಟಾಗ ಸೋಮಣ್ಣ ತಂಡದ ಮುಂಚೂಣಿಯಲ್ಲಿದ್ದರು. ಅಯೋಧ್ಯೆಯಲ್ಲಿ ಕರಸೇವೆಯಲ್ಲಿ ಭಾಗವಹಿಸಿ ದಾಸ್ಯದ ಸಂಕೇತವನ್ನು ಅಳಿಸಿ, ಮರಳಿ ಉಡುಪಿಗೆ ಬಂದಾಗ ಧನ್ಯತಾ ಭಾವನೆ ತುಂಬಿತ್ತು.

ಭಾಜಪದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಮುರಳಿ ಮನೋಹರ ಜೋಶಿ ಅವರ ನೇತೃತ್ವದಲ್ಲಿ 1991 ಡಿಸೆಂಬರ್ 11ರಂದು ಕನ್ಯಾಕುಮಾರಿಯಿಂದ ಆರಂಭಗೊಂಡ ಏಕತಾ ಯಾತ್ರೆಯಲ್ಲಿ ಪಾಲ್ಗೊಳ್ಳುವ ಸುವರ್ಣ ಅವಕಾಶವನ್ನು ಸೋಮಣ್ಣ ತಪ್ಪಿಸಿಕೊಳ್ಳಲಿಲ್ಲ. ಜಮ್ಮುವಿಗೆ ತೆರಳಿ, ಅಲ್ಲಿ ನಡೆದ ಧ್ವಜಾರೋಹಣದಲ್ಲಿ ಭಾಗವಹಿಸಿ ಯುದ್ಧಗೆದ್ದ ಭಾವದಿಂದ ಹಿಂದಿರುಗಿದರು.

ಸೋಮಶೇಖರ ಭಟ್ಟರು ಸಂಘದ ಸ್ವಯಂಸೇವಕನಾಗಿ ಜೀವನದುದ್ದಕ್ಕೂ ರಾಷ್ಟ್ರೀಯ ವಿಚಾರಧಾರೆಯನ್ನೇ ಅಳವಡಿಸಿಕೊಂಡು ಗ್ರಾಮ ಪಂಚಾಯತ್ ಚುನಾವಣೆಯಿಂದ ಲೋಕಸಭಾ ಚುನಾವಣೆವರೆಗೆ ಎಲ್ಲಾ ತರದ ಚುನಾವಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 1967ರಲ್ಲಿ ಜನ ಸಂಘದ ಅಭ್ಯರ್ಥಿಯಾಗಿ ಕಾರ್ಕಳ ಕ್ಷೇತ್ರದಿಂದ ಶ್ರೀ ಬೋಳ ರಘುರಾಮಶೆಟ್ಟಿಯವರು ಜಯಗಳಿಸಿ ಶಾಸಕರಾದಾಗ ಅತ್ಯಂತ ಸಂಭ್ರಮ ಪಟ್ಟವರು. ತುರ್ತು ಪರಿಸ್ಥಿತಿಯ ನಂತರ ಉಡುಪಿಯಲ್ಲಿ ಸ್ಪರ್ಧಿಸಿದ್ದ ಡಾ. ವಿ.ಎಸ್. ಆಚಾರ್ಯರನ್ನು ಗೆಲ್ಲಿಸುವುದಕ್ಕಾಗಿ ಟೊಂಕ ಕಟ್ಟಿದ್ದರು. ಸೋತಾಗ ಹತಾಶರಾಗದೆ ಮತದಾರರನ್ನು ಉಳಿಸಿಕೊಳ್ಳಲು ಕಾರ್ಯ ಪ್ರವೃತ್ತರಾದವರು. ಹೀಗೆ ಪ್ರತಿಯೊಂದು ಕ್ಷಣವನ್ನು ಪಕ್ಷದ ಸಂಘಟನೆಗಾಗಿ ಮೀಸಲಿಟ್ಟು ಪಕ್ಷದ ಬೆಳವಣಿಗೆಗೆ ಕಾರಣರಾದರು. ಅವರ ಮಾತಿನಲ್ಲಿ ಹೇಳುವುದಾದರೆ ಕಾರ್ಯಕರ್ತರ ಸಮ್ಮೇಳನವಾಗಲಿ ಚುನಾವಣಾ ಪ್ರಚಾರ ಸಭೆಯಾಗಲಿ, ಸಂಘಟನಾತ್ಮಕ ಬೈಠಕ್ ಆಗಲಿ, ಪ್ರತಿಭಟನಾ ಸಭೆಯಾಗಲಿ ಪ್ರತಿಯೊಂದೂ ಕಾರ್ಯಕರ್ತರ ಪಾಲಿಗೆ ಒಂದು ಪಾಠವಿದ್ದಂತೆ. ಈ ಎಲ್ಲಾ ಚಟುವಟಿಕೆಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡಾಗ ತನ್ನ ಜವಾಬ್ದಾರಿಯನ್ನು ಪರಿಶ್ರಮದಿಂದ ಮಾಡಿದಾಗ ಕಾರ್ಯಕರ್ತನೂ ಬೆಳೆಯುತ್ತಾನೆ, ಪಕ್ಷವೂ ಬೆಳೆಯುತ್ತದೆ – ಇದು ರಾಜಕೀಯ ಶಿಕ್ಷಣ.

ನಾವು ಬಾಳೆಯ ಗಿಡದಂತೆ ಬೆಳೆಯಬೇಕು, ನೀಲಗಿರಿಯ ಮರದಂತಲ್ಲ ಎಂದು ಹೇಳುತ್ತಿದ್ದ ಸೋಮಣ್ಣ ಹಲವಾರು ಕಾರ್ಯಕರ್ತರಿಗೆ ಗುರುಗಳಾಗಿ ಮಾರ್ಗದರ್ಶಕರಾಗಿ ಪಕ್ಷದಲ್ಲಿ ಬೆಳೆಸಿದರು. ಪಕ್ಷದ ನಿತ್ಯದ ಆಗುಹೋಗುಗಳನ್ನು ಗಮನಿಸುತ್ತಾ ಚುನಾವಣೆಗಳು ಬಂದಾಗ ಪಕ್ಷದ ಕಚೇರಿಯಲ್ಲೇ ಕುಳಿತು ಪ್ರತೀ ಬೂತ್‌ನ ಚಟುವಟಿಕೆಗಳ ಮಾಹಿತಿ ಪಡೆಯುತ್ತಿದ್ದರು ಹಾಗೂ ಕಾರ್ಯಕರ್ತರನ್ನು ಸಜ್ಜುಗೊಳಿಸುತ್ತಿದ್ದರು.

ಪಕ್ಷದ ಚಟುವಟಿಕೆಗಳನ್ನು ಮಾಡುತ್ತಾ ಕಾರ್ಯಕರ್ತರು ಬೆಳೆಯಬೇಕು ಹಾಗೆಯೇ ಪಕ್ಷವನ್ನು ಬೆಳೆಸಬೇಕು ಎಂದು ಹೇಳುತ್ತಿದ್ದ ಸೋಮಣ್ಣ ಆರಂಭದಿಂದಲೂ ಕುಟುಂಬ ರಾಜಕಾರಣವನ್ನು ವಿರೋಧಿಸುತ್ತಾ ಬಂದವರು, ಬಯಸಿದ್ದಲ್ಲಿ ತಮ್ಮ ಮಕ್ಕಳನ್ನು ರಾಜಕಾರಣದಲ್ಲಿ ಜೋಡಿಸಿಕೊಳ್ಳಲು ಯಥೇಚ್ಛ ಅವಕಾಶಗಳಿದ್ದವು. ಆದರೆ ಇಂದಿಗೂ ಅವರ ಕುಟುಂಬದ ಸದಸ್ಯರು ಪಕ್ಷದ ಸಾಮಾನ್ಯ ಕಾರ್ಯಕರ್ತರು. ದೇವದುರ್ಲಭ ಕಾರ್ಯಕರ್ತನಾಗಿ 89 ವರ್ಷಗಳ ತುಂಬು ಜೀವನವನ್ನು ನಡೆಸಿ ಫೆಬ್ರವರಿ 4, 2024 ರಂದು ಸೋಮಣ್ಣ ನಮ್ಮನ್ನಗಲಿದರು ಕೊರೋನಾ ಸಂದರ್ಭ ಪ್ರಧಾನಿ ನರೇಂದ್ರ ಮೋದಿಯವರು ಫೋನ್ ಕರೆ ಮೂಲಕ ಸೋಮಣ್ಣನ ಆರೋಗ್ಯ ವಿಚಾರಿಸಿದ್ದು, ಸೋಮಣ್ಣ ಪಕ್ಷದಲ್ಲಿ ಹೇಗೆ ಗುರುತಿಸಿಕೊಂಡಿದ್ದರು ಎನ್ನುವುದು ಅರ್ಥವಾಗುತ್ತದೆ.

ಸೋಮಣ್ಣ ರವರು ಸರಳ ಸಜ್ಜನಿಕೆಯ ನಿಷ್ಠಾವಂತ ಶ್ರಮಜೀವಿಯಾಗಿದ್ದ ಅವರ ಬದುಕು ಇಂದಿನ ಕಾರ್ಯಕರ್ತರಿಗೆ ಆದರ್ಶವಾಗಿದೆ.



# ಮನ್ ಕಿ ಬಾತ್‌ಗೆ

# ದಶಕದ ಸಂಭ್ರಮ

◆ ಜನತಾ ಜನಾರ್ಧನನಿಗೆ ವಂದನೆ ◆ ವಿಕಸಿತ್ ಭಿ ವಿರಾಸತ್ ಭಿ ◆ 'ಥಾಂಕ್ಯೂ ನೇಚರ್' ಅಭಿಯಾನ

'ಮನ್ ಕಿ ಬಾತ್' ಕಾರ್ಯಕ್ರಮಕ್ಕೆ 10 ವರ್ಷ ಪೂರ್ಣಗೊಂಡ ವಿಶೇಷ ಸಂದರ್ಭದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು 114ನೇ ಸಂಚಿಕೆಯ 'ಮನ್ ಕಿ ಬಾತ್' ನಲ್ಲಿ ಯಶಸ್ವಿಗೊಳಿಸಿದ ಕೇಳುಗರಿಗೆ ಹಾಗೂ ಸುದ್ದಿ ಮಾಧ್ಯಮ ಸಂಸ್ಥೆಗಳಿಗೆ ಧನ್ಯವಾದವನ್ನು ಅರ್ಪಿಸಿದರು.

**'ವಿಕಾಸ್ ಭಿ, ವಿರಾಸತ್ ಭಿ'** ಎಂದು ಹೇಳಿದ ಪ್ರಧಾನಿ ಶ್ರೀ ಮೋದಿ, ಸಾಂಪ್ರದಾಯಿಕ ಭಾಷೆಗಳನ್ನು ತಂತ್ರಜ್ಞಾನದ ಜತೆ ಸೇರಿಸುವ ಅಭಿಯಾನವನ್ನು ಆರಂಭಿಸುವುದಾಗಿ ಹೇಳಿದರು. ವಿವಿಧ ರಾಜ್ಯಗಳ ವಿಶೇಷ ಮಾಹಿತಿಯನ್ನು ಅವರು ಈ ಸಂದರ್ಭದಲ್ಲಿ ಹಂಚಿಕೊಂಡರು. ಹಬ್ಬಗಳ ಋತು ಆರಂಭವಾಗಿರುವ ಹಿನ್ನೆಲೆಯಲ್ಲಿ ನವರಾತ್ರಿ ಹಾಗೂ ದೀಪಾವಳಿಯನ್ನು 'ಮೇಕ್ ಇನ್ ಇಂಡಿಯಾ'ಗೆ ಪೂರಕವಾಗಿ ಆಚರಿಸುವಂತೆ ಪ್ರಧಾನಿ ಶರೀ ಮೋದಿ ರವರು ಕರೆ ನೀಡಿದರು. 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನ ಸೇರಿದಂತೆ ಹಲವು ಮಹತ್ವದ ಯೋಜನೆಗಳಿಗೆ ಜನರ ಬೆಂಬಲ ವ್ಯಕ್ತವಾಗಿರುವುದಕ್ಕೆ ಪ್ರಧಾನಿ ಶ್ರೀ ಮೋದಿ ರವರು ಶ್ಲಾಘಿಸಿದರು.

**ಜನತಾ ಜನಾರ್ಧನಗೆ ವಂದನೆ:** 'ಮನ್ ಕಿ ಬಾತ್' ಕಾರ್ಯಕ್ರಮದ ಕೇಳುಗರೇ ಅದರ ರುವಾರಿಗಳಾಗಿದ್ದು, ಈ ಕಾರ್ಯಕ್ರಮದ ಮೂಲಕ ದೇಶದ ಜನರಲ್ಲಿ ನಾನು ಜನಾರ್ಧನನನ್ನು ಕಾಣುತ್ತಿದ್ದೇನೆ ಎಂದು ಹೇಳಿದರು. ಈ ಕಾರ್ಯಕ್ರಮದ ಪ್ರತಿ ಹೆಜ್ಜೆಯೂ ನಾನು ದೇವಾಲಯಕ್ಕೆ ಹೋಗಿ ದೇವರನ್ನು ಕಂಡಂತೆ ಭಾಸವಾಗುತ್ತದೆ, ಶ್ರೋತೃಗಳ ಪತ್ರಗಳನ್ನು ಓದಿದಾಗ ದೇವರನ್ನು ಜನರಲ್ಲಿ ಕಂಡಂತಾಗುತ್ತದೆ ಎಂದು ಪ್ರಧಾನಿ ಶ್ರೀ ಮೋದಿ ರವರು ಹರ್ಷವನ್ನು ವ್ಯಕ್ತಪಡಿಸಿದರು. ಹೊಗಳಿದ್ದಾರೆ. ಈ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಮನೆ ಮನೆಗೆ ತಲುಪಿಸುವ ಪತ್ರಿಕೆಗಳ ಕಾರ್ಯವನ್ನೂ ಅವರು ಶ್ಲಾಘಿಸಿದರು.

**ವಿಕಸಿತ್ ಭಿ ವಿರಾಸತ್ ಭಿ :** ನಮ್ಮ ದೇಶದಿಂದ ದೋಚಲ್ಪಟ್ಟಿದ್ದ 300ಕ್ಕೂ ಹೆಚ್ಚು ಪಾರಂಪರಿಕ ವಸ್ತುಗಳನ್ನು ಅಮೆರಿಕಾದಿಂದ ಭಾರತಕ್ಕೆ ಮರಳಿ ತಂದಿರುವ ಬಗ್ಗೆ ಪ್ರಧಾನಿ ಶ್ರೀ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಮೆರಿಕಾ ಭೇಟಿ ವೇಳೆ ಡೆಲಾವೇರ್‌ನಲ್ಲಿದ್ದ ಭಾರತದ ವಸ್ತುಗಳನ್ನು ವಾಪಸ್ ತರಲಾಗಿದೆ, ಟೆರಾಕೋಟಾ, ಕಲ್ಲು, ಆನೆ ದಂತ, ಮರ, ತಾಮ್ರ, ಹಿತ್ತಾಳೆಯಿಂದ ರಚಿಸಿ ಕಲಾಕೃತಿಗಳನ್ನು ನೋಡಿದಾಗ ನಮ್ಮ ಪರಂಪರೆ ಕಲೆ ಎಷ್ಟು ಅದ್ಭುತ, ನಾವು ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಪಡುತ್ತೇವೆ ಎಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಪಾರಂಪರಿಕ ಭಾಷೆ ಸಂತಾಲಿ ಬಗ್ಗೆ ಮಾತನಾಡಿದ ಪ್ರಧಾನಿ ಶ್ರೀ ಮೋದಿ ರವರು, ಈ ಪುರಾತನ ಭಾಷೆಗೆ ತಂತ್ರಜ್ಞಾನದ ಮೂಲಕ ಹೊಸ ಗುರುತನ್ನು ನೀಡಲಿದ್ದೇವೆ ಎಂದು ತಿಳಿಸಿದರು. ಮುಂಡಾ ಎಂಬ ಭಾಷೆ ಕುಟುಂಬಕ್ಕೆ ಸೇರಿದ 'ಸಂತಾಲಿ' ಭಾಷೆಯನ್ನು ಅಸ್ಸಾಂ, ಬಿಹಾರ, ಜಾರ್ಖಂಡ್, ಮಿಜೋರಾಂ, ಒಡಿಶಾ, ತ್ರಿಪುರಾ ಮತ್ತು ಪಶ್ಚಿಮ ಬಂಗಾಳದಲ್ಲಿ ಸುಮಾರು 76 ಲಕ್ಷ ಜನರು ಮಾತನಾಡುತ್ತಾರೆ. ಒಐ ಚಿಕಿ ಲಿಪಿಯನ್ನು ಬಳಸಿ ಈ ಭಾಷೆಯನ್ನು ಬರೆಯಲಾಗುತ್ತದೆ ಎಂದು ಅವರು ತಿಳಿಸಿದರು.

**'ಥಾಂಕ್ಯೂ ನೇಚರ್' ಅಭಿಯಾನ :** ಉತ್ತರಾಖಂಡದ ಉತ್ತರ ಕಾಶಿಯಲ್ಲಿನ ಗಡಿ ಗ್ರಾಮ 'ಝೂಲಾ'ದ ಯುವಕರು ಪ್ರಕೃತಿಯ ರಕ್ಷಣೆಗಾಗಿ ರಚಿಸಿಕೊಂಡ 'ಥಾಂಕ್ಯೂ ನೇಚರ್' ಅಭಿಯಾನವನ್ನು ಪ್ರಧಾನಿ ಶ್ರೀ ಮೋದಿ ರವರು ಶ್ಲಾಘಿಸಿದರು. ಗ್ರಾಮದ ಯುವಕರು ನಿತ್ಯ 2 ಗಂಟೆಗಳ ಕಾಲ ಗ್ರಾಮದ ಪ್ರತಿ ಬೀದಿಯನ್ನೂ ಸ್ವಚ್ಛಗೊಳಿಸಿ ಕಸವನ್ನು ನಿರ್ದಿಷ್ಟ ಸ್ಥಳದಲ್ಲಿ ಹಾಕುವ ಮೂಲಕ ತಮ್ಮ ಗ್ರಾಮವನ್ನು ಮಾಲಿನ್ಯದಿಂದ ಮುಕ್ತಗೊಳಿಸಲು ನಿರ್ಧರಿಸಿದ್ದಾರೆ ಎಂದು ಪ್ರಧಾನಿ ಶ್ರೀ ಮೋದಿ ರವರು ಗ್ರಾಮದ ಯುವಕರಿಗೆ ಅಭಿನಂದನೆಯನ್ನು ಸಲ್ಲಿಸಿದರು.

ಪುದುಚೇರಿಯಲ್ಲೂ ರಮ್ಯಾ ಎಂಬುವವರು ಕೆಲವು ಯುವಕರ ನೆರವಿನಿಂದ ಮಾಹೆ ಹಾಗೂ ಅಲ್ಲಿನ ಕಡಲ ತೀರವನ್ನು ಸ್ವಚ್ಛ ಗೊಳಿಸುತ್ತಿದ್ದಾರೆ, 74 ವರ್ಷದ ಕೇರಳದ ಕೋಯಿ ಕ್ಕೋಡ್‌ನ ಸುಬ್ರಮಣಿಯನ್ ರವರು 23 ಸಾವಿರ ಕುರ್ಚಿಗಳನ್ನು ರಿಪೇರಿ ಮಾಡಿ ಮರು ಬಳಕೆ ಮಾಡಿದ್ದಾರೆ. ಅವರನ್ನು 'ಆರ್‌ಆರ್‌ಆರ್(ರೆಡ್ಯೂಸ್, ರಿಯೂಸ್, ರಿಸೈಕಲ್) ಚ್ಯಾಂಪಿಯನ್' ಎಂದೇ ಕರೆಯಲಾಗುತ್ತದೆ ಎಂದು ಪ್ರಧಾನಿ ಶ್ರೀ ಮೋದಿ ರವರು ಪ್ರಶಂಸಿಸಿದರು. ಅ.2ರಂದು 'ಸ್ವಚ್ಛ ಭಾರತ ಅಭಿಯಾನ'ಕ್ಕೆ 10 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಭಿಯಾವನ್ನು ಯಶಸ್ವಿಗೊಳಿಸಿದ ಎಲ್ಲರಿಗೂ ಧನ್ಯವಾದವನ್ನು ತಿಳಿಸಿದರು.

# ಸೇವಾ ಪಾಕ್ಷಿಕ



ಮೈಸೂರು ಗ್ರಾಮಾಂತರ



ರಾಮನಗರ




ಉತ್ತರ ಕನ್ನಡ



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಹರಿಯಾಣ ವಿಧಾನಸಭಾ ಚುನಾವಣೆಯ ವಿಜಯದ ಸಂಭ್ರಮಾಚರಣೆ



ಬೆಂಗಳೂರಿನ ಬಳೆಪೇಟೆಯಲ್ಲಿ 2ನೇ ಹಂತದ ಐತಿಹಾಸಿಕ ಸದಸ್ಯತ್ವ ಅಭಿಯಾನದ ನೋಂದಣಿ ಕಾರ್ಯಕ್ರಮದಲ್ಲಿ ಬಿಜೆಪಿ ನಾಯಕರು





ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯುಧ ಪೂಜೆಯ ಸಂಭ್ರಮ



ಕಾಲೇ ವರ್ಷತು ಪರ್ಜನ್ಯಃ



# ರಾಮ ಮತ್ತು ರಾಮನ ವೇಷ..!!

ರಾಮ ಮತ್ತು ರಾಮಾಯಣ ಎಂದೆಂದಿಗೂ ಪ್ರಸ್ತುತ. ರಾಮಾಯಣದ ತಾತ್ಪರ್ಯ, ರಾಮನ ಆದರ್ಶ ನಮ್ಮ ಜೀವನಕ್ಕೊಂದು ಪಾಠ. ರಾಮನ ಜೀವನ ಶೈಲಿಯಲ್ಲಿ ಒಂದಂಶವನ್ನು ನಾವು ಅಳವಡಿಕೊಂಡರೂ ಅದು ನಮ್ಮ ಜೀವನವನ್ನು ವಿಶೇಷ ಮತ್ತು ಗೌರವಯುತವಾಗಿಸುತ್ತದೆ. ಅಂತಹುದೆ ಒಂದು ರಾಮಾಯಣದ ನಿದರ್ಶನ ಈ ಸಂಚಿಕೆಯಲ್ಲಿ.

ರಾವಣ ಸೀತೆಯ ಮೇಲೆ ಮನಸ್ಸಾಗಿ, ಸೀತೆಯನ್ನು ಅಪಹರಣ ಮಾಡಿಕೊಂಡು ಹೋಗಿ ಅಶೋಕ ವನದಲ್ಲಿ ಇರಿಸುತ್ತಾನೆ. ಸೀತೆಯನ್ನು ಒಲಿಸಿಕೊಳ್ಳಬೇಕು ಎಂದು ರಾವಣ ಬೇರೆ ಬೇರೆ ವೇಷವನ್ನು ಹಾಕಿಕೊಂಡು ಹೋಗುತ್ತಾನೆ. ರಾವಣ ಯಾವುದೇ ವೇಷವನ್ನು ಹಾಕಿಕೊಂಡು ಹೊದಾಗಲೂ ಸೀತೆ ಕಣ್ಣೆತ್ತಿಯೂ ರಾವಣನನ್ನು ನೋಡುವುದಿಲ್ಲ. ಇದನ್ನು ರಾವಣ ತನ್ನ ಮಂತ್ರಿಯ ಬಳಿ ಪ್ರಸ್ತಾಪಿಸುತ್ತಾ, ಈ ಸೀತೆ ಎಂತಹ ಸಾಧ್ವಿ, ನನ್ನ ಬದುಕಿನಲ್ಲಿ ಒಬ್ಬ ಪತಿವ್ರತೆ ಹೆಣ್ಣನ್ನು ನೋಡುತ್ತಿದ್ದೇನೆ. ನನಗೆ ಈಗ ಸೀತೆಯ ಮೇಲೆ ಮೋಹವೇ ಉಳಿದಿಲ್ಲಾ. ಆದರೆ ಯುದ್ದವನ್ನು ಮಾತ್ರ ನಿಲ್ಲಿಸುವುದಿಲ್ಲಾ, ರಾಮನ ಮೇಲೆ ಯುದ್ದ ಮಾಡಿ ರಾಮನನ್ನು ಗೆದ್ದು, ಆತನನ್ನು ತಂದು ಸೀತೆಯ ಪಾದದ ಮೇಲಿಟ್ಟು, 'ತಗೋ ನಿನ್ನ ಗಂಡನನ್ನು ನಿನಗೆ ಕಾಣಿಕೆ ಕೊಟ್ಟಿದ್ದೇನೆ' ಎಂದು ಹೇಳಬೇಕು ಇದು ನನ್ನ ಆಸೆ ಎನ್ನುತ್ತಾನೆ.

ಆಗ ಮಂತ್ರಿ ರಾವಣನ ಬಳಿ, ನೀವು ಎಲ್ಲಾ ವೇಷ ಹಾಕಿದ್ದೀರಿ. ಒಮ್ಮೆ ರಾಮನ ವೇಷವನ್ನು ಹಾಕಿಕೊಂಡು ಸೀತೆಯ ಬಳಿ ನಿಲ್ಲಬೇಕಿತ್ತು, ಆಗ ಸೀತೆ ನೀವೇ ರಾಮನೆಂದು ತಿಳಿದು ಒಪ್ಪಿಕೊಳ್ಳುತ್ತಿದ್ದಳೇನೋ ಎಂದು ಹೇಳುತ್ತಾನೆ. ಆಗ ರಾವಣ ನಾನೇನೂ ದಡ್ಡನಲ್ಲ, ಅದನ್ನೂ ಪ್ರಯತ್ನ ಮಾಡಿಬಿಟ್ಟೆ, ರಾಮನ ವೇಷವನ್ನು ಹಾಕಿಕೊಂಡೂ ಸಹ ಹೋಗಿದ್ದೆ, ಆದರೆ ಬೇರೆ ಎಲ್ಲಾ ವೇಷವನ್ನು ಧರಿಸಿ ಹೋದಾಗ ಸೀತೆ ನನ್ನನ್ನು ತಲೆ ಎತ್ತಿ ನೋಡಲಿಲ್ಲಾ, ರಾಮನ ವೇಷ ಧರಿಸಿ ಹೋದಾಗ ನನಗೇ ಸೀತೆಯನ್ನು ತಲೆ ಎತ್ತಿ ನೋಡಲಾಗಲಿಲ್ಲಾ, ಅಷ್ಟು ಚೆನ್ನಾಗಿ ರಾಮನ ವೇಷ ಹಾಕಿಕೊಂಡಿದ್ದೆ ಎನ್ನುತ್ತಾನೆ. ರಾಮನ ಭಾವ ಎಷ್ಟು ಸತ್ಯ ಮತ್ತು ಜೀವಂತ ಎಂದರೆ, ಅವನ ವೇಷವನ್ನು ಹಾಕಿದರೂ ಸಹ ಅವನ ಆದರ್ಶಗಳನ್ನು ನಮ್ಮೊಳಗೆ ಆವಾಹನೆಯಾಗುತ್ತೆ ಎನ್ನುತ್ತಾನೆ.

ವೈಚಾರಿಕ ಸಂಘಟನೆಯೊಳಗಿರುವ ನಾವುಗಳು ಅಷ್ಟೆ. ಶ್ರೀರಾಮ ಎಂಬ ಸಂಘಟನೆಯ ಸಿದ್ದಾಂತವನ್ನು ಆವಾಹಿಸಿಕೊಂಡರೆ ಬೇರೆಲ್ಲಾ ಆಸೆ ಆಮಿಷಗಳಿಗಿಂತ ನಮಗೆ ಸಂಘಟನೆಯ ಸಿದ್ದಾಂತ, ಕಾರ್ಯವೈಖರಿಯಷ್ಟೆ ಮುಖ್ಯವಾಗಿ ಬಿಡುತ್ತದೆ. ರಾವಣನು ಬೇರೆ ವೇಷ ಹಾಕಿದಾಗಲೆಲ್ಲಾ ಸೀತೆಯ ಮೇಲೆ ವ್ಯಾಮೋಹ ಇತ್ತು. ಅಂದರೆ ಆಗ ರಾವಣನಲ್ಲಿ ರಾಮನ ಗುಣಗಳಿರಲಿಲ್ಲ. ಆದರೆ ಸೀತೆಯನ್ನು ಒಲಿಸಿಕೊಳ್ಳಬೇಕೆಂದು ರಾಮನ ವೇಷ ಹಾಕಿದರೂ ಸೀತೆಯನ್ನು ಕಣ್ಣೆತ್ತಿಯೂ ಸಹ ನೋಡಲಾಗಲಿಲ್ಲಾ. ಏಕೆಂದರೆ ರಾವಣನನ್ನೇ ಶ್ರೀರಾಮ ಆವರಿಸಿಕೊಂಡು ಬಿಟ್ಟಿದ್ದ. ಹಾಗೆಯೇ ನಾವು ಸಂಘಟನೆಯ ವಿಚಾರ, ನಡೆ ನುಡಿಗಳನ್ನು ನಿಜವಾಗಿ ನಮ್ಮೊಳಗೆ ಆವಾಹಿಸಿಕೊಂಡಾಗ ಇನ್ನಿತರ ಸಂಗತಿಗಳಿಗಿಂತ ಸಂಘಟನೆಯೇ ನಮ್ಮೊಳಗೆ ಆವರಿಸಿಕೊಂಡುಬಿಡುತ್ತದೆ. ಅದರ ಹಿತವೇ ಆದ್ಯತೆ ಎನಿಸಿ ಬಿಡುತ್ತದೆ.

ಹುದ್ದೆಗಳ ಮೇಲಿನ ವ್ಯಾಮೋಹವಾಗಲಿ, ನಾಯಕತ್ವದ ಮೇಲಿನ ಅನುಮಾನವಾಗಲಿ, ಅಸಹನೆಯಾಗಲಿ ನಮ್ಮ ಬಳಿ ಸುಳಿಯುವುದೇ ಇಲ್ಲಾ. ನಮ್ಮ ಮೇಲೆ ಬೇರೆಯವರಿಗೆ ಅಪನಂಬಿಕೆಗಳು ಬರುವುದಿಲ್ಲ. ಸಂಘಟನೆಯೊಳಗೆ ಹಾಗೂ ಹೊರಗೂ ನಮ್ಮ ಮೇಲಿನ ಗೌರವ ಹೆಚ್ಚಲಿದೆ. ಅದಕ್ಕೆ ಸಂಘಟನೆಯನ್ನು ನಮ್ಮೊಳಗೆ ಆವಾಹಿಸಿಕೊಳ್ಳುವುದೊಂದೇ ನಮ್ಮ ಕಾಯಕವಾಗಲಿ.

**- ಸ್ವಯಂಭೂ**

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**